# ವಿದ್ಯಾಗಮ ನಿರಂತರ ಕಲಿಕಾ ಪ್ರಕ್ರಿಯೆ/ ವಠಾರ ಶಾಲೆ ಪರಿಕಲ್ಪನೆ

## ಹಾಗೂ

## ತರಗತಿ ಪ್ರಕ್ರಿಯೆ ಅನುಷ್ಠಾನ ಕೈಪಿಡಿ–2020

**ಸಾರ್ವಜನಿಕ ಶಿಕ್ಷಣ ಇಲಾಖೆ.ಯಾದಗಿರಿ**

**ಅಜೀಂ ಪ್ರೇಮ್ ಜೀ ಫೌಂಡೇಶನ್.ಯಾದಗಿರಿ ಜಿಲ್ಲೆ**

# ಪರಿವಿಡಿ

1. ಪರಿವಿಡಿ ಪುಟ 2

2. ಪ್ರಸ್ತಾವನೆ: ವಠಾರ ಶಾಲೆ ಪರಿಕಲ್ಪನೆ ಪುಟ 3

3. ಕೋವಿಡ್–19 ಕುರಿತು ಪಾಲಿಸಬೇಕಾದ ಕ್ರಮಗಳು ಪುಟ 5

4. 1ನೇ ತರಗತಿಯಿಂದ 5ನೇ ತರಗತಿಯವರೆಗಿನ ಭಾಷಾ ಕಲಿಕೆ. ಪುಟ 6

5. ಕೋವಿಡ್ ವಿಷಯಾಧಾರಿತ ಓದು–ಬರಹ ಪುಟ 7

6. 2ನೇ ಮತ್ತು 3ನೇ ತರಗತಿ ಪ್ರಕ್ರಿಯೆಗಳು ಪುಟ 40

7. 4 ಮತ್ತು 5ನೇ ತರಗತಿ ಪ್ರಕ್ರಿಯೆಗಳು. ಪುಟ 63

## ವಠಾರ ಶಾಲೆ ಪರಿಕಲ್ಪನೆ

## ಪ್ರಸ್ತಾವನೆ:

ಜಾಗತಿಕ ಮಟ್ಟದಲ್ಲಿ ಕೋವಿಡ್–19 ವೈರಸ್ ಮಾನವನ ಮೇಲೆ ಮಾಡಿರುವ ದಾಳಿಯು ಪ್ರಪಂಚದ 21.7 ಲಕ್ಷ ಜನರಿಗೆ ಸೊಂಕು ಹರಡಿದ್ದು 7.7 ಲಕ್ಷದಷ್ಟು ಜನರು ಸಾವಿಗೀಡಾಗಿರುವುದು ಶೋಚನೀಯ ಸಂಗತಿ. ಕರ್ನಾಟಕ ದಲ್ಲಿಯೂ ಸಹ ಕೋವಿಡ್ ಆರ್ಭಟ ಜೋರಾಗಿಯೆ ಇದೆ. ನಮ್ಮಲ್ಲಿ 2.3 ಲಕ್ಷ ಸೋಂಕಿತರಾದರೆ 4062 ಮಂದಿ ಅಸುನೀಗಿರುವುದು ಈ ಪರಿಸ್ಥಿತಿಯು ವಾಸ್ತವವನ್ನು ಅರಿಯುವಂತೆ ಮಾಡಿದೆ. ಅದರಲ್ಲಿ 148 ಸಾವಿರ ಜನ ಗುಣಮುಖರಾಗಿರುವುದು ಆರೋಗ್ಯಕಾರಿ ಮತ್ತು ಉತ್ತಮ ಬೆಳವಣಿಗೆ. ಯಾದಗಿರಿಯ ಅಂಕಿ ಅಂಶಗಳ ಪ್ರಕಾರ 3906 ಸೋಕಿತರಲ್ಲಿ 23 ಜನರು ಮೃತರಾಗಿರುವುದು (17th August) ಆತಂಕ ಸೃಷ್ಟಿ ಮಾಡಿರುವುದು ಸಹಜ. ಈ ನಿಟ್ಟಿನಲ್ಲಿ ನಮ್ಮ ರಾಜ್ಯದ ಎಲ್ಲಾ ನಾಗರಿಕರ ರಕ್ಷಣೆಯ ಭಾಗವಾಗಿ ವಿವಿಧ ಕ್ರಮಗಳಾದ ಲಾಕ್‌ಡೌನ್, ಸೀಲ್‌ಡೌನ್ ಜಾರಿಗೊಳಿಸಿ ಆರೋಗ್ಯ ರಕ್ಷಣೆಯ ಪೂರಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಮಕ್ಕಳಿಗೆ ಸೋಂಕು ತಗಲದಂತೆ ತಡೆಯಲು ಅನಿರ್ದಿಷ್ಟ ಅವಧಿಯವರೆಗೆ ಶಾಲೆಗಳನ್ನು ಮುಚ್ಚಿ ಪೂರಕ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದೆ.

ಇದಷ್ಟೆ ಅಲ್ಲದೆ ವಿವಿಧ ಸಂಸ್ಥೆಗಳ ಸಹಕಾರದೊಂದಿಗೆ ಶಿಕ್ಷಣ ಇಲಾಖೆಯು ತರಬೇತಿ/ಕಾರ್ಯಾಗಾರ ಚಟುವಟಿಕೆಗಳನ್ನು ಆನ್‌ಲೈನ್ ಮೂಲಕ ಹಮ್ಮಿಕೊಂಡು ಶಿಕ್ಷಕರ ಬಲಸಂವರ್ಧನೆಯನ್ನು ಉತ್ತಮಗೊಳಿಸಿರುವುದು ಶಿಕ್ಷಣ ಕ್ಷೇತ್ರದ ಅಧಿಕಾರಿಗಳ ಹಾಗು ಸಂಪನ್ಮೂಲ ವ್ಯಕ್ತಿಗಳ ಸಂಘಟಿತ ಪ್ರಯತ್ನವಾಗಿದೆ.

ಈ ಕಾರ್ಯಾಗಾರದ ಮೂಲಕ ಶಿಕ್ಷಕರಿಗೆ ಆದ ಕಲಿಕೆಗಳು ಹಾಗು ಅನುಭವಗಳನ್ನು ಮಕ್ಕಳಿಗೆ ತಲುಪಿಸುವುದು ಅಗತ್ಯವಾಗಿದೆ. ಈ ಅನುಭವಗಳು ಮಕ್ಕಳಿಗೆ ತಲುಪದೆ ಹೋದರೆ ಕಾರ್ಯಾಗಾರಗಳು ತನ್ನ ಸಾರ್ಥಕತೆಯನ್ನು ಹೊಂದುವಲ್ಲಿ ವಿಫಲವಾಗುತ್ತವೆ. ಇದನ್ನು ಗಮನಿಸಿದ ಪ್ರತಿಭಾನ್ವಿತ ಶಿಕ್ಷಕರು ತಮ್ಮ ಹಂತದಲ್ಲಿಯೆ ಸ್ವಯಂ ಪ್ರೇರಿತರಾಗಿ ಸಮುದಾಯದ ಕೇಂದ್ರಿತ ಸ್ಥಳಗಳಲ್ಲಿ ತರಗತಿಗಳನ್ನು ಮಾಡಲು ಪ್ರಾರಂಭಿಸಿದ್ದು ಇದು ಸಮುದಾಯದ ಗಮನ ಸೆಳೆದು ಹೆಚ್ಚು ಮಕ್ಕಳು ಭಾಗವಹಿಸುವುದರೊಂದಿಗೆ ಪರ್ಯಾಯ ತರಗತಿಗಳಾಗಿ ರೂಪುಗೊಂಡಿವೆ. ಇದರಲ್ಲಿ ಮುಖ್ಯಶಿಕ್ಷಕರ ಸಹಕಾರ ಹಾಗು ಶಾಲೆಯ ಒಟ್ಟು ಶಿಕ್ಷಕರ ಸಮರ್ಪಕ ಯೋಜನೆ ಪ್ರಮುಖ ಪಾತ್ರವಹಿಸಿದೆ.

ಈ ಶಾಲೆಗಳು ಕೋವಿಡ್–19 ಸುರಕ್ಷತೆಯೊಂದಿಗೆ ಮಕ್ಕಳ ಸಾಮರ್ಥ್ಯಕ್ಕೆ ಅನುಗುಣವಾಗಿ ಬಹುವರ್ಗ – ಬಹುಹಂತದ ಚಟುವಟಿಕೆಗಳನ್ನು ವಠಾರ, ಪಡಸಾಲೆ, ಮನೆಯ ಅಂಗಳ, ದೇವಾಸ್ಥಾನ, ಮಸೀದಿಗಳಲ್ಲಿ ನಡಸಿರುವುದು/ಮಾಡಿರುವುದು ಇತರ ಶಿಕ್ಷಕರಿಗೆ ಪ್ರೇರಣೆಯಾಗಿದೆ ಹಾಗು ಮಕ್ಕಳ ಕಲಿಕೆಯ ಪ್ರಕ್ರಿಯೆಯನ್ನು ಉತ್ತೇಜಿಸುವ ಕೆಲಸಕ್ಕೆ ನಾಂದಿಹಾಡಿ ಸಮುದಾಯ ಕೇಂದ್ರಿತ ತರಗತಿಗಳನ್ನು ಶಿಕ್ಷಕರು ಮಾಡುವುದು ಮಕ್ಕಳಿಗೆ ಕಲಿಕೆಯ ನ್ಯಾಯವನ್ನು ನೀಡುವ ಮಹತ್ವದ ಕಾರ್ಯವಾಗಿ ಪರಿಗಣಿಸಿದೆ. ಆದುದರಿಂದ ಈ ಸದರ್ಭದಲ್ಲಿ ಪ್ರತಿ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ಕಾರ್ಯಪ್ರವೃತ್ತರಾಗುವುದು ನಮ್ಮ ಆದ್ಯ ಕರ್ತವ್ಯವಾಗಿದೆ.

ಈಗಾಗಲೆ ಯಾದಗಿರಿ ಜಿಲ್ಲೆಯ 929 ಶಾಲೆಗಳಲ್ಲಿ 126 ವಠಾರ ಶಾಲೆಗಳು ಕೆಲಸ ಮಾಡುತ್ತಿದ್ದು ಯಾದಗಿರಿ–73 ಶಹಾಪುರ–72 ಸುರಪುರ–53 ಕೇಂದ್ರಗಳಿದ್ದು ಇತರ ಶಾಲೆಗಳನ್ನು ಪ್ರಾರಂಭ ಮಾಡಲು ಉತ್ತಮ ಅವಕಾಶವಿದೆ.

ಈ ನಿಟ್ಟಿನಲ್ಲಿ ಸರ್ಕಾರವು ವಿದ್ಯಾಗಮ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಇದಕ್ಕೆ ಪೂರಕವಾಗಿ ವಠಾರ ಶಾಲೆ ಅಥವಾ ಪಡಸಾಲೆ, ಅಂಗಳ ಶಾಲೆ ಪ್ರಕ್ರಿಯೆಗಳ ಪರಿಕಲ್ಪನೆ ಹಾಗು ಪ್ರಕ್ರಿಯೆಗಳನ್ನು ಕನ್ನಡ ಹಾಗು ಗಣಿತ ವಿಷಯದ ಚಟುವಟಿಕೆಗಳನ್ನು ಸಂಯೋಜಿಸಲಾಗಿದೆ. ಕೆಳಕಂಡ ಎಲ್ಲ ವಿಷಯಗಳು 4 ಮತ್ತು 5ನೇ ತರಗತಿ ಮಕ್ಕಳ ಭಾಷೆಗೆ ಸಂಬಂಧಿಸಿದ ಕೌಶಲಗಳನ್ನು ಬೆಳೆಸಲು ಅನುಕೂಲಿಸುತ್ತದೆ.

**ಪ್ರಮುಖವಾಗಿ ಈ ಕೈಪಿಡಿಯಲ್ಲಿ ಕೆಳಕಂಡ ಕೌಶಲಗಳ ಕುರಿತು ವಿವರವಾದ ಪ್ರಕ್ರಿಯೆಗಳನ್ನು ಸಂಯೋಜಿಸಲಾಗಿದೆ.**

- ಮಕ್ಕಳ ಆಲಿಸುವಿಕೆ (ಗ್ರಹಿಕೆ ಸ್ವೀಕಾರ ಕೌಶಲವಾಗಿ)
- ಮಾತುಗಾರಿಕೆ (ಅಭಿವ್ಯಕ್ತಿ ಉತ್ಪಾದಕ ಕೌಶಲವಾಗಿ)
- ಓದುಗಾರಿಕೆ (ಗ್ರಹಿಕೆ ಮತ್ತು ಸ್ವೀಕಾರ ಕೌಶಲವಾಗಿ)
- ಬರೆವಣಿಗೆ (ಅಭಿವ್ಯಕ್ತಿ ಮತ್ತು ಉತ್ಪಾದಕ ಕೌಶಲವಾಗಿ)

ಈ ಮೇಲ್ಕಂಡ ಕೌಶಲಗಳನ್ನು ಒಳಗೊಂಡಂತೆ ಮಕ್ಕಳ ಸಾಮರ್ಥ್ಯವನ್ನು ಗುರಿಯಾಗಿರಿಸಿಕೊಂಡು ಚಟುವಟಿಕೆಯನ್ನು ಹೆಣೆಯಲಾಗಿದೆ ಹಾಗು ಒಂದಕ್ಕೊಂದು ಅಂತರ್ ಸಂಬಂಧಿಯಾಗಿರುವಂತೆ ರಚಿಸಿದ್ದು ಪಠ್ಯವಸ್ತು ಹಾಗು ಪಾಠಗಳನ್ನು ಮೀರಿ ಮಕ್ಕಳ ಪರಿಸರದ ವಾಸ್ತವ ಸ್ಥಿತಿಗತಿಗೆ ಅನುಸಾರವಾಗಿ ಮಕ್ಕಳ ಕಲ್ಪನೆ, ಊಹೆ, ತರ್ಕ, ವಿಶ್ಲೇಷಣೆ, ಮುಂತಾದ ಉನ್ನತ ಹಂತದ ಆಲೋಚನೆಗಳನ್ನು ಬೆಳೆಸಲು ಸಹಕರಿಸುತ್ತದೆ. ಪ್ರತಿ ತರಗತಿ ಪ್ರಕ್ರಿಯೆಗಳು ಮಕ್ಕಳ ಸಾಮರ್ಥ್ಯವನ್ನು ಕೇಂದ್ರವಾಗಿರಿಸಿಕೊಂಡು ಉದ್ದೇಶಗಳು, ಪ್ರಕ್ರಿಯೆಗಳು ಬಳಸುವ ಸಾಮಗ್ರಿಗಗಳು, ಸುಗಮಕಾರರ ಸೂಚನೆಗಳನ್ನು ವಿವರವಾಗಿ ಸಂಯೋಜಿಸಿ ಕಥೆ, ಹಾಡು, ಭಾಷೆಯ ಆಟಗಳನ್ನು ಹಾಗು ಚಿತ್ರ ಪೋಸ್ಟರ್‌ಗಳನ್ನು ಮಾಧ್ಯಮವಾಗಿ ಬಳಸಲಾಗಿದೆ.

**ಪರಿಕಲ್ಪನೆ: (ವಠಾರ ಶಾಲೆ : ಪಡಸಾಲೆ : ಅಂಗಳ ಶಾಲೆ)**

ಸಮುದಾಯದ ಭಾಗವಾದ ವಠಾರ, ಪಡಸಾಲೆ, ಅಂಗಳ, ದೇವಾಸ್ಥಾನ ಇತರ ಸುರಕ್ಷಿತ ಸ್ಥಳದಲ್ಲಿ ಹಮ್ಮಿಕೊಳ್ಳುವ ಮಕ್ಕಳ ಕಲಿಕೆಗೆ ಸಹಕರಿಸುವ ಶೈಕ್ಷಣಿಕ ಚಟುವಟಿಕೆಗಳನ್ನು ಸಮಗ್ರವಾಗಿ ವಠಾರ ಶಾಲೆ ಎನ್ನಬಹುದು. ವಿದ್ಯಾಗಮ ಕಾರ್ಯಕ್ರಮವು ಸಹ ಇದಕ್ಕೆ ಪೂರಕವಾಗಿ ಸಂಯೋಜಿಸಲಾಗಿದೆ.

**ವಠಾರ ಶಾಲೆ ಪರಿಕಲ್ಪನೆಯ ಉದ್ದೇಶ.**

ಕೋವಿಡ್ ಸಂದರ್ಭದಲ್ಲಿಯೂ ಸಹ ಸುರಕ್ಷತೆಯೊಂದಿಗೆ ಸಮುದಾಯದ ವಿವಿಧ ಸ್ಥಳಗಳಲ್ಲಿ ಮಕ್ಕಳ ಕಲಿಕಾ ಪ್ರಕ್ರಿಯೆಗಳನ್ನು ಅನುಕೂಲಿಸುವ ಮೂಲಕ ಸ್ವಯಂ ಕಲಿಕೆಗೆ ಅವಕಾಶ ಕಲ್ಪಿಸುವುದು ಹಾಗು ಮಕ್ಕಳ ಕಲಿಕೆಯಲ್ಲಿ ನಿರಂತರತೆಯನ್ನು ಉತ್ತೇಜಿಸುವುದಾಗಿದೆ.

**ಉದ್ದೇಶದ ಮುಖ್ಯ ಅಂಶಗಳು**

1. ಮಕ್ಕಳು ಕಲಿಕೆಯಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದುವಂತೆ ಮಾಡುವುದು ಹಾಗು ಕೋವಿಡ್-19 ಕುರಿತು ಜಾಗೃತಿ ಮೂಡಿಸುವುದು.
2. ಮಕ್ಕಳ ಕಲಿಕೆಗೆ ಅಗತ್ಯ ಸಾಮಗ್ರಿಗಳನ್ನು ಒದಗಿಸಿ ಸಮುದಾಯದ ಸಹಭಾಗಿತ್ವವನ್ನು ಸಂಘಟಿಸುವುದು.
3. ತಂತ್ರಜ್ಞಾನ ಆಧಾರಿತ ಕಲಿಕಾ ಪ್ರಕ್ರಿಯೆಗಳನ್ನು ಬಳಸಿ ಮಕ್ಕಳ ಕಲಿಕಾಗತಿಯನ್ನು ಹಾಗು ಭಾಗವಹಿಸುವಿಕೆಯನ್ನು ಹೆಚ್ಚುವಂತೆ ಮಾಡುವುದು.

**ವಠಾರ ಶಾಲೆ ತರಗತಿಗಳ ಸಂಯೋಜನೆ:**

- ಶಾಲೆಯ ಶಿಕ್ಷಕರ ಲಭ್ಯತೆಯ ಆಧಾರದಲ್ಲಿ ಹಾಗು ಮಕ್ಕಳ ವಾಸಸ್ಥಾನದ ಆಧ್ಯತೆಯ ಮೇರೆಗೆ ಕೇಂದ್ರಗಳನ್ನು ಗುರ್ತಿಸುವುದು
- ಸಮುದಾಯದ ಪೋಷಕರೊಂದಿಗೆ ವಠಾರ ಶಾಲೆಯ ಬಗ್ಗೆ ಚರ್ಚಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಮಾಡುವುದು.
- ಶಿಕ್ಷಕರು ವಠಾರ ತರಗತಿಗಳನ್ನು ಶಾಲೆಯ ತರಗತಿಗಳಂತೆ ನೋಡದೆ ವಿಶೇಷ ಸಮಾಲೋಚನೆ-ಮಾರ್ಗದರ್ಶನ ತರಗತಿಯನ್ನಾಗಿ ಪರಿಗಣಿಸುವುದು.
- ಶಿಕ್ಷಕರು ವಿಷಯಾಧಾರಿತ ತರಗತಿಗಳನ್ನು ಮಾಡಲು ವಠಾರ ಶಾಲೆಯ ಸಮಗ್ರ ಯೋಜನೆಯನ್ನು ರೂಪಿಸುವುದು.
- ಯೋಜನೆಯು ಭೌಗೋಳಿಕ ಸೌಲಭ್ಯಗಳ ಆಧಾರದ ಮೇಲೆ ಪ್ರತಿ ಹಂತದಲ್ಲಿಯೂ ಸಹ ಕೋವಿಡ್ ಸುರಕ್ಷತೆಯನ್ನು ಕಡೆಗಣಿಸದಂತೆ ನೋಡಿಕೊಳ್ಳುವುದು- (ಶಿಕ್ಷಕರ ಪಾತ್ರದಲ್ಲಿ ವಿವರವಾಗಿ ಉಲ್ಲೇಖಿಸಲಾಗಿದೆ.)
- ಪ್ರತಿ ತರಗತಿಗಳು ಕನಿಷ್ಟ 5 ರಿಂದ 10 ಮಕ್ಕಳಿಗೆ ಮೀರದಂತೆ ನೋಡಿಕೊಳ್ಳುವುದು.

**3. ಕೋವಿಡ್-19 ಕುರಿತು ಹಾಗು ಸುಗಮಕಾರರು ಕಡ್ಡಾಯವಾಗಿ ಪಾಲಿಸಬೇಕಾದ ಕ್ರಮಗಳು.**

(ಶಿಕ್ಷಕರು ವಠಾರ ತರಗತಿಗಳನ್ನು ಆಯೋಜಿಸುವಾಗ ವೈಯಕ್ತಿಕವಾಗಿ ಕೋವಿಡ್-19ನ ಎಲ್ಲಾ ಮುಂಜಾಗ್ರತೆಯ ಕ್ರಮಗಳನ್ನು ತೆಗೆದುಕೊಳ್ಳಬೇಕು.)

- ಕಡ್ಡಾಯವಾಗಿ ಸೂಕ್ತ ಮಾಸ್ಕ್ ಧರಿಸಿರುವುದು, 6 ಗಜಗಳ ಅಂತರವನ್ನು ಕಾಪಾಡುವುದು.
- 2 ಗಂಟೆಗೆ ಒಮ್ಮೆ ನಿರಂತರವಾಗಿ ಕೈ ತೊಳೆದುಕೊಳ್ಳುವುದು.
- ವಿದ್ಯಾರ್ಥಿಗಳ ನಡುವೆ ಸೂಕ್ತ ಅಂತರವಿರುವಂತೆ ಆಸನ ವ್ಯವಸ್ಥೆಯನ್ನು ಹಾಗು ಅವರು ಮಾಸ್ಕ್ ಧರಿಸಿರುವುದನ್ನು ಖಾತ್ರಿ ಪಡಿಸುವುದು.
- ಕೋವಿಡ್ -19 ಗೆ ಸಂಬಂಧಿಸಿದ ಸರ್ಕಾರದ ಎಲ್ಲಾ ನಿಯಮಗಳನ್ನು ಪಾಲಿಸುವುದು.
- ಮಕ್ಕಳ ಸಹಜ ಕುತೂಹಲಕ್ಕೆ ಧಕ್ಕೆಯಾಗದಂತೆ ಎಲ್ಲರ ನಡುವೆ ಅಂತರ ಕಾಪಾಡುವಂತೆ ನೋಡಿಕೊಳ್ಳುವುದು.

- ತರಗತಿ ನಡೆಯುವ ಸ್ಥಳವು ಸುರಕ್ಷತೆಗೆ ಪೂರಕವಾಗಿದ್ದು ಯಾವುದೇ ಅಪಾಯದ ಸಾಧ್ಯತೆಗಳು ಇಲ್ಲದಿರುವುದನ್ನು ಖಾತ್ರಿ ಪಡಿಸುವುದು.
- ಮರದ ಕೆಳಗೆ ತರಗತಿಗಳು ನಡೆಯುತ್ತಿದ್ದರೆ ಮರದ ರಂಬೆಗಳು ಗಾಳಿಗೆ ಮುರಿಯದಿರುವಷ್ಟು ಭದ್ರ ವಾಗಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.
- ಮಕ್ಕಳಿಗೆ ಸಾಧ್ಯವಾದಷ್ಟು ನೆಲಹಾಸುಗಳನ್ನು ವ್ಯವಸ್ಥೆ ಮಾಡುವುದು ಹಾಗು ನೆರಳಿನ ಸ್ಥಳಗಳನ್ನು ಆಯ್ಕೆ ಮಾಡುವುದು.

**ತರಗತಿ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಅಂಶಗಳು.**

1. ಎಲ್ಲ ಮಕ್ಕಳಿಗೆ ಮಾತನಾಡಲು ಅವಕಾಶ ನೀಡುವುದು ಹಾಗು ಮಕ್ಕಳ ಪ್ರತಿಕ್ರಿಯೆಗಳನ್ನು ಗೌವರವಿಸುತ್ತಾ ಸ್ವಕಲಿಕೆಗೆ ಪೂರಕ ವ್ಯವಸ್ಥೆ ಕಲ್ಪಿಸುವುದು.
2. ತರಗತಿ ಕೇಂದ್ರಿತ ಪ್ರಕ್ರಿಯೆಗೆ ಪ್ರಾಮುಖ್ಯತೆ ನೀಡದೆ ಮಕ್ಕಳ ಕಲಿಯುವ ಹಾಗು ಅವಲೋಕಿಸುವ ಪ್ರಕ್ರಿಯೆಗೆ ಅವಕಾಶ ಕಲ್ಪಿಸುವುದು.
3. ಭಾಷಾ ಕೌಶಲಗಳ ತರಗತಿಯಾಗಿರುವುದರಿಂದ ಸುಗಮಕಾರರು ತಮ್ಮ ಮಾತು ಮತ್ತು ಓದು ಸ್ಪಷ್ಟವಾಗಿದ್ದು ಧ್ವನಿಯಲ್ಲಿ ಏರಿಳಿತದೊಂದಿಗೆ ನಿರರ್ಗಳವಾಗಿರಲಿ. ನಮ್ಮ ಸಂವಹನ ಕೌಶಲವು ವಿಧ್ಯಾರ್ಥಿಗಳಿಗೆ ಮಾದರಿಯಾಗಿರುವಂತೆ ನೋಡಿಕೋಳ್ಳುವುದು.
4. ತರಗತಿ ಪ್ರಕ್ರಿಯೆಗೆ ಬಳಸುವ ಕಾರ್ಯಹಾಳೆಗಳು, ಚಟುವಟಿಕೆ, ಪರಿಕರಗಳು ಸಾಧ್ಯವಾದಷ್ಟು ಸ್ವಯಂ ಕಲಿಕೆಗೆ ಪೂರಕವಾಗುವಂತೆ ಸಂಯೋಜಿಸಿ ಬಳಸುವುದು.
5. ಗುಂಪು ಚಟುವಟಿಕೆಗಳಿಗೆ ಪರ್ಯಾಯವಾಗಿ ವೈಯಕ್ತಿಕ ಯೋಜನೆಯಂತಹ ಕಲಿಕಾ ಪ್ರಕ್ರಿಯೆಗಳನ್ನು ಸೂಚಿಸುವುದು.
6. ವಿಷಯಕ್ಕೆ ಪೂರಕವಾಗಿ ಕಲಿಕಾ ಸಾಮಗ್ರಿಗಳನ್ನು ಕ್ರಮಬದ್ದವಾಗಿ ಜೋಡಿಸಿಕೊಳ್ಳುವುದು
7. ಮಕ್ಕಳ ಗೃಹ ಕಾರ್ಯಗಳನ್ನು ಅನ್ವೇಷಣೆ, ಊಹೆ, ವಿಮರ್ಶೆ ಮುಂತಾದವುಗಳು ಇರುವಂತೆ ವಿಫುಲ ಅವಕಾಶ ಕಲ್ಪಿಸುವುದು.

## 1 ರಿಂದ 5ನೇ ತರಗತಿಯಿಂದ 5ನೇ ತರಗತಿಯವರೆಗಿನ ಭಾಷಾ ಕಲಿಕೆ.

ಔಪಚಾರಿಕ ಶಿಕ್ಷಣದಲ್ಲಿ ಭಾಷೆ ವಿಷಯದ ಬಹುಪಾಲು ಕಲಿಕಾವಲಯವು ಆಲೋಚನಾಯುಕ್ತ ಓದು ಮತ್ತು ಬರೆಹ ಕೌಶಲಗಳನ್ನು ಒಳಗೊಳ್ಳುತ್ತದೆ. ಇವುಗಳಲ್ಲಿ ಮಕ್ಕಳು ಸಮರ್ಥರಾಗುವುದು ಎಂದರೆ ತಮ್ಮ ಆಲೋಚನೆಗಳನ್ನು ಬರೆಹದಲ್ಲಿ ಕಾಣುವುದು; ಬರೆಹದಲ್ಲಿರುವ ವಿಷಯವನ್ನು ಅರ್ಥೈಸಿಕೊಂಡು ತನ್ನದೇ ಆದ ಹೊಸ ಆಲೋಚನೆಗಳನ್ನು ರೂಪಿಸಿಕೊಳ್ಳುವುದು; ಬರೆಹದಲ್ಲಿ ಅವ್ಯಕ್ತವಾಗಿರುವ ಸಂಗತಿಗಳನ್ನು ಗ್ರಹಿಸಿಕೊಳ್ಳುವುದು; ತಮ್ಮ ಆಲೋಚನೆಗಳನ್ನು ಬರೆಹದಲ್ಲಿ ಸುಸಂಬದ್ಧವಾಗಿ ಹಿಡಿದಿಡುವುದು. ಮುಂತಾದ ಸಾಮರ್ಥ್ಯಗಳನ್ನು ಗಳಿಸಿಕೊಳ್ಳುವುದೆಂದು ಅರ್ಥ. ಇಷ್ಟೆಲ್ಲಾ ಸಾಮರ್ಥ್ಯಗಳಿಗೆ ಮೂಲಭೂತವಾಗಿ ಅಕ್ಷರಪರಿಚಯ, ಪದಸಂಘಟನೆ, ಅರ್ಥನಿರ್ಮಾಣ, ವಾಕ್ಯರಚನೆಯಂತಹ ಸಾಮರ್ಥ್ಯಗಳು ಅಂತರ್ಗತವಾಗಿ ಬರುತ್ತವೆ.

ಸದ್ಯದ ಕೋವಿಡ್–19 ಸ್ಥಿತಿಗತಿಯಲ್ಲಿ ಮೇಲೆ ತಿಳಿಸಿದ ಚೌಕಟ್ಟಿನಲ್ಲಿರುವ ಭಾಷಾ ವಿಷಯದ ಕಲಿಕೆಯನ್ನು ಮಕ್ಕಳಲ್ಲಿ ಉಂಟುಮಾಡುವುದು ಸೂಕ್ಷ್ಮ ವಿಚಾರವಾಗಿದೆ. 1ನೇ ತರಗತಿಯಿಂದ 5ನೇ ತರಗತಿಯವರೆಗೆ ಈ ಓದು ಮತ್ತು ಬರೆಹ ಕೌಶಲಗಳಲ್ಲಿ (ಪ್ರಾಸಂಗಿಕವಾಗಿ ಆಲೋಚನಾಯುಕ್ತ ಆಲಿಸುವಿಕೆ ಮತ್ತು ಮಾತುಗಾರಿಕೆಗಳೂ ಬರುತ್ತವೆ.) ಬರುವ ಪ್ರಮುಖವಾದ ಆರು ಥೀಮ್ಸ್‌ಗಳಿಗೆ ಸಂಬಂಧಿಸಿದಂತೆ ವಠಾರ ಶಾಲೆಯ ಪರಿಕಲ್ಪನೆ ಹಾಗೂ ಪ್ರಕ್ರಿಯೆಯಡಿಯಲ್ಲಿ ಕೆಲಸ ಮಾಡಲು ನಿರ್ಧರಿಸಿಕೊಳ್ಳಲಾಗಿದೆ. ಸಾದ್ಯವಾದಷ್ಟು ಮಗು ವೈಯಕ್ತಿಕವಾಗಿ ಕಲಿಕೆಯಲ್ಲಿ ತೊಡಗಲು ನೆರವಾಗುವ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲಾಗಿದೆ. ಕೋವಿಡ್ ಬಗ್ಗೆ ಮಕ್ಕಳಲ್ಲಿ ಜಾಗೃತಿಯನ್ನು ಮೂಡಿಸುವುದನ್ನೂ ಸಹ ಅಂತರ್ಗತವಾಗಿರಿಸಿಕೊಳ್ಳಲಾಗಿದೆ. ಅಂದರೆ ಸಂಪನ್ಮೂಲಗಳಲ್ಲಿ ಬಳಸಿದ ವಿಷಯವಸ್ತು, ಪದಗಳು, ಪೋಸ್ಟರ್‌ಗಳು ಕೋವಿಡ್–19ಗೆ ಸಂಬಂಧಿಸಿರುತ್ತವೆ.

**ಥೀಮ್‌ಗಳು:**

1. ಅರ್ಥೈಸಿಕೊಳ್ಳುತ್ತಾ ಓದುವ ಕೌಶಲ ಬೆಳೆಸುವುದು
2. ಸ್ವಆಲೋಚನೆಗಳನ್ನು ಸರಳವಾದ ಸ್ವಂತವಾಕ್ಯಗಳಲ್ಲಿ ವಿವರಿಸುವುದು/ಬರೆಯುವುದು
3. ಸರಳ, ಪರಿಚಿತ ಪಠ್ಯಗಳನ್ನು ಓದಿ ಅರ್ಥೈಸಿಕೊಳ್ಳುವುದು
4. ವಿವಿಧ ವಿನೋದ ಚಿತ್ರಕಥೆ ಮತ್ತು ಭಿತ್ತಿ ಪತ್ರಗಳನ್ನು ಓದಿ ಅರ್ಥೈಸಿಕೊಳ್ಳುವುದು
5. ಸರಳ ಸಾಂದರ್ಭಿಕ ಭಾಷಾಂಶ ನಿಯಮಗಳನ್ನು ಅರ್ಥ ಮಾಡಿಕೊಳ್ಳುವುದು
6. ಪಠ್ಯಾಂಶವನ್ನು ಓದಿ, ಏನು? ಏಕೆ? ಹೇಗೆ? ಹಾಗಾದರೆ? ಹಾಗಾಗದಿದ್ದರೆ ಎಂಬ ತಾರ್ಕಿಕ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯುವುದು.

## ಥೀಮ್: ಕೋವಿಡ್–19 ವಿಷಯಾಧಾರಿತ ಭಾಷಾ ಕಲಿಕೆ)

| ಕ್ರ.ಸ | ಪ್ರಕ್ರಿಯೆ | ಪ್ರಕ್ರಿಯೆಯ ವಿವರಣೆ | ಕಲಿಕಾ ಸಾಮಗ್ರಿಗಳು | ಸಮಯ |
|---|---|---|---|---|
| 1. | ಮಕ್ಕಳ ಜೊತೆ ಮುಕ್ತ ಮಾತುಕತೆ ಚಿತ್ರಗಳೊಂದಿಗೆ … | ಪ್ರಸ್ತುತ ಕೋವಿಡ್ ಸನ್ನಿವೇಷದ ಕುರಿತು ಮಕ್ಕಳೊಂದಿಗೆ ಮುಕ್ತವಾಗಿ ಮಾತನಾಡುವುದು.<br>• ತಮ್ಮ ಊರಿನ ಕುರಿತು ಮಾತನಾಡುವುದು– ನಡೆಯುತ್ತಿರುವ ಹಬ್ಬ, ಜಾತ್ರೆ, ಇತರೆ ಸಮಾರಂಭಗಳು ಹೇಗೆ ನಡೆಯುತ್ತಿವೆ.<br>• ಇಂದು ನಡೆಯುತ್ತಿರುವ ಸಮಾರಂಭದ ರೀತಿ ಮತ್ತು ಈ ಹಿಂದೆ ನಡೆದ ಸಮಾರಂಭಗಳ ಕುರಿತು ಏನಾದರು ವ್ಯತ್ಯಾಸ ಇದೆಯೇ ಎಂಬುದರ ಕುರಿತು ಮಾತನಾಡುವುದು. ಈ ರೀತಿಯ ವ್ಯತ್ಯಾಸಗಳಿಗೆ ಕಾರಣಗಳನ್ನು ಊಹಿಸುವುದು. ನಂತರ ಕೊರೋನಾದ ಕುರಿತು ಮಕ್ಕಳು ತಿಳಿದುಕೊಂಡ ವಿಷಯಗಳ ಕುರಿತು ಹಂಚಿಕೊಳ್ಳಲು ಅವಕಾಶ ನೀಡುವುದು. | ಕೋವಿಡ್–19 ಗೆ ಸಂಬಂದಿಸಿದ ಚಿತ್ರಗಳು. ಕಾರ್ಯಹಾಳೆಗಳು ವಾರ್ತಾಪತ್ರಿಕೆಯ ತುಣುಕುಗಳು. ವಿಡಿಯೋಗಳು (ಶಿಕ್ಷಕರು ಸಂದರ್ಭಾನುಸಾರ ತಮ್ಮ ಮೊಬೈಲ್ ಅಥವಾ ಇತರೆ | |


| | | | | |
|---|---|---|---|---|
| | | • ಕೊರೋನಾ ಸಂದರ್ಭದಲ್ಲಿ ಮಕ್ಕಳು ತಾವು ಹೇಗೆ ತಮ್ಮ ವೈಯಕ್ತಿಕ ಸ್ವಚ್ಚತೆಗೆ ಗಮನ ನೀಡಿದರು ಎಂಬುದರ ಕುರಿತು ಚರ್ಚಿಸುವುದು. – ಸ್ಯಾನಿಟೈಸರ್/ಸಾಬೂನಿನಿಂದ ಕೈ ತೊಳೆದುಕೊಳ್ಳುವುದು. ಮೂಗು, ಬಾಯಿ ಮುಖವನ್ನು ಸ್ವಚ್ಛವಾಗಿಟ್ಟುಕೊಳ್ಳುವುದರ ಅಗತ್ಯತೆ. ಮಾಸ್ಕ್ ಧರಿಸುವ ಅಗತ್ಯತೆ. ಸಾಮಾಂಜಿಕ ಅಂತರ ಕಾಪಾಡಿಕೊಳ್ಳುವ ಅಗತ್ಯತೆ. ಮಕ್ಕಳಿಂದ ಬಂದ ಮಾಹಿತಿಗನುಸಾರ ಮಕ್ಕಳಿಂದಲೇ ಕೆಲವು ಚಿತ್ರಗಳನ್ನು ಬರೆಸಿ ಪೋಸ್ಟರ್ ತಯಾರಿಸುವುದು.<br>• ಕೊರೋನಾದಿಂದ ನಮ್ಮ ಸಮಾಜದಲ್ಲಿ/ಊರಿನಲ್ಲಿ/ ಮನೆಯಲ್ಲಿ ಆದ ಬದಲಾವಣೆಗಳ ಕುರಿತು ಮಾತನಾಡುವುದು. ಈ ಸಂದರ್ಭದಲ್ಲಿ ಉಂಟಾದ ಕೆಲವು ಸಾಮಾಜಿಕ ಸಮಸ್ಯೆಗಳ ಕುರಿತು ಮಾತನಾಡುವುದು.– ಲಾಕ್ ಡೌನ್‌ನಲ್ಲಿ ತಾವು ಎದುರಿಸಿದ ಸಮಸ್ಯೆಗಳು, ಕೆಲವು ವ್ಯಾಪಾರಿಗಳಿಗೆ ಆದ ತೊಂದರೆಗಳು. ವಲಸೆ ಕಾರ್ಮಿಕರು ಅನುಭವಿಸಿದ ಸಮಸ್ಯೆಗಳು, ಪ್ರಯಾಣದ ಸಮಸ್ಯೆ (ಬಸ್ಸು ಮತ್ತು ರೈಲುಗಳ ಓಡಾಟ ನಿಲ್ಲಿಸಿದ್ದು). ರೈತರಿಗೆ ಆದ ತೊಂದರೆಗಳು ಇತ್ಯಾದಿ. | ಸಾಧನಗಳ ಮೂಲಕ ತೋರಿಸಬಹುದು) | |
| 2. | ಪೋಸ್ಟರ್ ಚಿತ್ರ ಓದುವ– ನೋಡುವ ಸಾಮರ್ಥ್ಯ ಹೆಚ್ಚಿಸುವುದು. | ಪುಸ್ತಕದ ಮುಖಪುಟ ಚಿತ್ರಗಳು ಬಳಸಿ ಚಿತ್ರಪದಗಳ ಪರಿಚಯ– ಸರಳ ಮತ್ತು ಚಿತ್ರಗಳಲ್ಲಿರುವ ಪದಗಳನ್ನು ಬರೆದು ಹೆಸರಿಸಲು ತಿಳಿಸಿ ಹೆಚ್ಚು ಪದಗಳು ಬರೆಯುವಂತೆ ಪ್ರೋತ್ಸಾಹಿಸುವುದು. ಹಾಗು ಫ್ಲ್ಯಾಶ್ ಕಾರ್ಡಿನ ಪ್ರಶ್ನೆಗಳಿಗೆ ಉತ್ತರಿಸಲು ಅವಕಾಶ ನೀಡುವುದು. | 3.ಪುಸ್ತಕದ ಮುಖಪುಟ ಚಿತ್ರಗಳು. | 90 ನಿಮಿಷ ಗಳು |
| 3. | ಸರಳ ವಾಕ್ಯ ರಚನಾ ಸಾಮರ್ಥ್ಯ ಬೆಳವಣಿಗೆ | ಜಾಹೀರಾತು ಚಿತ್ರಗಳು ಹಾಗು ಪೋಸ್ಟರ್‌ನಲ್ಲಿ ಇರುವ ಸೂಚನೆಗಳಿಗೆ ಅನುಸಾರವಾಗಿ ಫ್ಲ್ಯಾಶ್ ಕಾರ್ಡಿನ ಪ್ರಶ್ನೆಗಳಿಗೆ ಉತ್ತರಿಸಲು ಅವಕಾಶ ನೀಡುವುದು.<br>ಪ್ರತಿ ಮಕ್ಕಳಿಗೆ ಮಾರ್ಗದರ್ಶನ ಮಾಡುವುದು. ಹೊಸ ಪದಗಳ ಅರ್ಥಗಳನ್ನು ತಿಳಿಸುವುದು. | ಜಾಹೀರಾತು ಚಿತ್ರಗಳು.<br><br>ಸಿನೆಮಾ/ನಾಟಕ ಪೋಸ್ಟರ್‌ಗಳು | 90 ನಿಮಿಷ ಗಳು |

ತರಗತಿ 1 ಮತ್ತು 2

❖ **ಮಾಸ್ಕ್ ಕಥೆ. (ಇದನ್ನು ಪೂರಕ ಕಥೆಯನ್ನಾಗಿ ಮಕ್ಕಳಿಗೆ ಹೇಳುವುದು ಮತ್ತು ಚರ್ಚಿಸುವುದು)**


ಒಂದು ಊರಿನಲ್ಲಿ ಶಂಕರ ಮತ್ತು ಗಣೇಶ ಎಂಬ ಗೆಳೆಯರಿದ್ದರು ಅವರು ಪ್ರತಿದಿನ ಮಾಸ್ಕ್ ಧರಿಸಿ ಆಟವಾಡುತ್ತಿದ್ದರು ಮತ್ತು ಜೊತೆಯಾಗಿಯೇ ಶಾಲೆಗೆ ಹೋಗುತ್ತಿದ್ದರು. ಒಂದು ದಿನ ಗಣೇಶ ಮಾಸ್ಕ್ ಹಾಕದೆ ಊರಿನ ಸಂತೆಯ ತುಂಬ ತಿರುಗಾಡಿದ ಮರುದಿನ ನೆಗಡಿ ಕೆಮ್ಮು ಕಾಣಿಸತೊಡಗಿತು, ಮರುದಿನ ಶಾಲೆಗೆ ಬಂದಾಗ ಶಂಕರ ಗಣೇಶನನ್ನು ಗಮನಿಸಿ ದೂರದಿಂದಲೇ ಆಸ್ಪತ್ರೆಗೆ ಹೋಗಿ ಬಂದೆಯಾ ಎಂದು ಕೇಳಿದ. ಅದಕ್ಕೆ ಗಣೇಶ "ಅವ್ವ ಗುಳಿಗೆ ಕೊಟ್ಟಳಾ ನುಂಗೀನಿ" ಅಂದ. ಅದಕ್ಕೆ ಸುಮ್ಮನಿರದೆ ಶಂಕರ ಶಿಕ್ಷಕರಿಗೆ ಗೌಪ್ಯವಾಗಿ ಮಾಹಿತಿ ತಿಳಿಸಿದ. ಶಿಕ್ಷಕರು ಆರೋಗ್ಯ ಕಾರ್ಯಕರ್ತೆಯ ಸಹಾಯದಿಂದ ಕೋವಿಡ್ ಪರೀಕ್ಷೆ ಮಾಡಿಸಿದರು. ನಂತರ ಗಣೇಶನಿಗೆ ತಾನು ಮಾಡಿದ ತಪ್ಪಿನ ಅರಿವಾಯಿತು. ಸರಿಯಾದ ಸಮಯಕ್ಕೆ ಚಿಕಿತ್ಸೆ ತೆಗೆದುಕೊಂಡು ಗಣೇಶ ಗುಣಮುಖನಾದ ಶಂಕರನಿಗೆ ಮತ್ತು ವೈದ್ಯರಿಗೆ ಧನ್ಯವಾದ ತಿಳಿಸಿದ ಹಾಗು ಕೊರೋನ ಭಯವನ್ನು ಹೊರಹಾಕಿ ಸುರಕ್ಷತೆ ಕಡೆ ಗಮನಹರಿಸಿದ. ಮಾಸ್ಕ್ ಬಳಸಿ ಕೊರೋನ ದೂರವಿರಿಸಿ.

**ಈ ಕೆಳಗಿನ ಚಿತ್ರಗಳನ್ನು ಗುರುತಿಸಿ. ಇವುಗಳ ಕುರಿತು ಮಾತನಾಡಿ.**

| | | |
|---|---|---|
|  |  |  |
| **ಮಾಸ್ಕ್** | **ಸ್ಯಾನಿಟೈಸರ್** | **ಕೈ ತೊಳೆಯುವುದು** |

**1 ಮತ್ತು 2ನೇ ತರಗತಿ**

**ಈ ಕೆಳಗಿನ ಚಿತ್ರಗಳನ್ನು ಗಮನಿಸಿ ಪ್ರಸ್ತುತ ಕೋವಿಡ್ ಸಂದರ್ಭಕ್ಕೆ ಯಾವ ಸನ್ನಿವೇಷ ಸೂಕ್ತ ಎಂಬುದನ್ನು ಗುರುತಿಸಿ.**

| | |
|---|---|
|  |  |
| | |
|  |  |
| | |
|  |  |
| | |

ತರಗತಿ 3, 4 ಮತ್ತು 5

- ❖ **ಮಾಸ್ಕ್ ಕಥೆ. (ಇದನ್ನು ಪೂರಕ ಕಥೆಯನ್ನಾಗಿ ಮಕ್ಕಳಿಗೆ ಹೇಳುವುದು ಮತ್ತು ಚರ್ಚಿಸುವುದು)**

ಒಂದು ಊರಿನಲ್ಲಿ ಶಂಕರ ಮತ್ತು ಗಣೇಶ ಎಂಬ ಗೆಳೆಯರಿದ್ದರು ಅವರು ಪ್ರತಿದಿನ ಮಾಸ್ಕ್ ಧರಿಸಿ ಆಟವಾಡುತ್ತಿದ್ದರು ಮತ್ತು ಜೊತೆಯಾಗಿಯೇ ಶಾಲೆಗೆ ಹೋಗುತ್ತಿದ್ದರು. ಒಂದು ದಿನ ಗಣೇಶ ಮಾಸ್ಕ್ ಹಾಕದೆ ಊರಿನ ಸಂತೆಯ ತುಂಬ ತಿರುಗಾಡಿದ ಮರುದಿನ ನೆಗಡಿ ಕೆಮ್ಮು ಕಾಣಿಸತೊಡಗಿತು, ಮರುದಿನ ಶಾಲೆಗೆ ಬಂದಾಗ ಶಂಕರ ಗಣೇಶನನ್ನು ಗಮನಿಸಿ ದೂರದಿಂದಲೇ ಆಸ್ಪತ್ರೆಗೆ ಹೋಗಿ ಬಂದೆಯಾ ಎಂದು ಕೇಳಿದ. ಅದಕ್ಕೆ ಗಣೇಶ "ಅವ್ವ ಗುಳಿಗೆ ಕೊಟ್ಟಳಾ ನುಂಗೀನಿ" ಅಂದ. ಅದಕ್ಕೆ ಸುಮ್ಮನಿರದೆ ಶಂಕರ ಶಿಕ್ಷಕರಿಗೆ ಗೌಪ್ಯವಾಗಿ ಮಾಹಿತಿ ತಿಳಿಸಿದ. ಶಿಕ್ಷಕರು ಆರೋಗ್ಯ ಕಾರ್ಯಕರ್ತೆಯ ಸಹಾಯದಿಂದ ಕೋವಿಡ್ ಪರೀಕ್ಷೆ ಮಾಡಿಸಿದರು. ನಂತರ ಗಣೇಶನಿಗೆ ತಾನು ಮಾಡಿದ ತಪ್ಪಿನ ಅರಿವಾಯಿತು. ಸರಿಯಾದ ಸಮಯಕ್ಕೆ ಚಿಕಿತ್ಸೆ ತೆಗೆದುಕೊಂಡು ಗಣೇಶ ಗುಣಮುಖನಾದ ಶಂಕರನಿಗೆ ಮತ್ತು ವೈದ್ಯರಿಗೆ ಧನ್ಯವಾದ ತಿಳಿಸಿದ ಹಾಗು ಕೊರೋನ ಭಯವನ್ನು ಹೊರಹಾಕಿ ಸುರಕ್ಷತೆ ಕಡೆ ಗಮನಹರಿಸಿದ. ಮಾಸ್ಕ್ ಬಳಸಿ ಕೊರೋನ ದೂರವಿರಿಸಿ.

**ಈ ಕೆಳಗಿನ ಚಿತ್ರಗಳನ್ನು ಗುರುತಿಸಿ ಚಿತ್ರದ ಕೆಳಗೆ ಅದರ ಹೆಸರು ಬರೆದು ಇವುಗಳ ಕುರಿತು ಮಾತನಾಡಿ.**


| | | |
|---|---|---|
|  |  |  |
| | | |

**3,4 ಮತ್ತು 5ನೇ ತರಗತಿ**

**ಈ ಕೆಳಗಿನ ಚಿತ್ರಗಳನ್ನು ಗಮನಿಸಿ ಪ್ರಸ್ತುತ ಕೋವಿಡ್ ಸಂದರ್ಭಕ್ಕೆ ಯಾವ ಸನ್ನಿವೇಷ ಸೂಕ್ತ ಎಂಬುದನ್ನು ಕುರಿತು ಕಾರಣಗಳನ್ನು ಬರೆಯಿರಿ.**
















Reuters

### ❖ ಫ್ಲಾಶ್ ಕಾರ್ಡ್–1: ಮಾಸ್ಕ್, ಕೈ ತೊಳೆಯುವ ಹಂತಗಳು

**ಸೂಚನೆಗಳು: ಕೆಳಗಿನ ಚಿತ್ರಗಳನ್ನು ನೋಡಿ ಸರಳ ವಾಕ್ಯದಲ್ಲಿ ಅದರ ಪ್ರಾಮುಖ್ಯತೆ ಬಳಕೆ ಬರೆಯುವರು.**

| ಕ್ರ.ಸ | ಚಿತ್ರ | ಸರಳ ವಾಕ್ಯ ರಚಿಸುವುದು |
|---|---|---|
| **1** |  | ........................<br>........................<br>........................<br>........................<br>........................<br>........................<br>........................<br>........................<br>........................<br>........................<br>........................ |
| **2** |  | ........................<br>........................<br>........................<br>........................<br>........................<br>........................<br>........................<br>........................<br>........................<br>........................<br>........................<br>........................ |

## ❖ ಫ್ಲಾಶ್ ಕಾರ್ಡು–2: ಆಸ್ಪತ್ರೆ, ಆಂಬ್ಯುಲೆನ್ಸ್.

**ಸೂಚನೆಗಳು: ಕೆಳಗಿನ ಚಿತ್ರಗಳನ್ನು ನೋಡಿ ಸರಳ ವಾಕ್ಯದಲ್ಲಿ ಅದರ ಪ್ರಾಮುಖ್ಯತೆ ಮತ್ತು ಬಳಕೆ ಬರೆಯುವರು.**

| ಕ್ರ.ಸ | ಚಿತ್ರ | ಸರಳ ವಾಕ್ಯ ರಚಿಸುವುದು |
|---|---|---|
| 1 |  | ........................<br>........................<br>........................<br>........................<br>........................<br>........................<br>........................<br>........................<br>........................<br>........................<br>........................<br>........................ |
| 2 |  | ........................<br>........................<br>........................<br>........................<br>........................<br>........................<br>........................<br>........................<br>........................<br>........................<br>........................<br>........................ |

ಕೆಳಗಿನ ಚಿತ್ರವನ್ನು ಗಮನಿಸಿ ಇದರ ಕುರಿತು ಬರೆಯಿರಿ




1. ಚಿತ್ರದಲ್ಲಿರುವ ವ್ಯಕ್ತಿಯು ಏನು ಮಾಡುತ್ತಿದ್ದಾನೆ?

2. ಉಗಿಯುತ್ತಿರುವ ವ್ಯಕ್ತಿಯ ಹಿಂದೆ ನಿಂತಿರುವ ವ್ಯಕ್ತಿಯ ಪ್ರತಿಕ್ರಿಯೆ ಹೇಗಿದೆ?

3. ಈ ರೀತಿಯ ಸನ್ನಿವೇಷಗಳನ್ನು ನೀವು ಎಲ್ಲೆಲ್ಲಿ ನೋಡಿದ್ದೀರಿ?

4. ಒಂದು ವೇಳೆ ಉಗಿಯುತ್ತಿರುವ ವ್ಯಕ್ತಿಯ ಪಕ್ಕದಲ್ಲಿ ನೀನಿದ್ದರೆ ಏನು ಮಾಡುತ್ತಿದ್ದೆ?

❖ ಫ್ಲಾಶ್ ಕಾರ್ಡ್–3 : ಕೋವಿಡ್–19 ಪೋಸ್ಟರ್ ಗಳು

ಸೂಚನೆಗಳು : ಪೋಸ್ಟರ್ ಚಿತ್ರಗಳನ್ನು ನೋಡಿ ಸರಳ ವಾಕ್ಯದಲ್ಲಿ ನಿಮ್ಮ ಅನಿಸಿಕೆ ಬರೆಯಿರಿ




. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

### ❖ ಫ್ಲಾಶ್ ಕಾರ್ಡ್–4: ಕೋವಿಡ್–19 ಪೋಸ್ಟರ್ ಗಳು

**ಸೂಚನೆಗಳು: ಪೋಸ್ಟರ್ ಚಿತ್ರಗಳನ್ನು ನೋಡಿ ಸರಳ ವಾಕ್ಯದಲ್ಲಿ ತಮ್ಮ ಅನಿಸಿಕೆ ಬರೆಯಿರಿ**




. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

## ❖ ಫ್ಲಾಶ್ ಕಾರ್ಡ್– 5 : ಕೋವಿಡ್–19 ಪೋಸ್ಟರ್ ಗಳು

**ಸೂಚನೆಗಳು : ಪೋಸ್ಟರ್ ಚಿತ್ರಗಳನ್ನು ನೋಡಿ ಸರಳ ವಾಕ್ಯದಲ್ಲಿ ತಮ್ಮ ಅನಿಸಿಕೆ ಬರೆಯಿರಿ**




. . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . .

## ❖ ಫ್ಲಾಶ್ ಕಾರ್ಡು–6: ಮುಖ ಪುಟ ಚಿತ್ರಗಳು

ಸೂಚನೆಗಳು: ಕೆಳಗಿನ ಮುಖಪುಟ ಚಿತ್ರಗಳನ್ನು ನೋಡಿ ಅದರ ಬಗ್ಗೆ ವಿವರಣೆ ಬರೆಯಿರಿ.




1. ಚಿತ್ರದಲ್ಲಿ ಯಾರಿಗೆ ಕಥೆಗಳನ್ನು ಸರಣಿಯಾಗಿ ಸೂಚಿಸಲಾಗಿದೆ ?

. . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . .

2. ಚಿತ್ರದಲ್ಲಿ ಯಾವ ವ್ಯಕ್ತಿಯ ಸಾಹಸ ಕಥೆಗಳ ಬಗ್ಗೆ ತಿಳಿಸಲಾಗಿದೆ?

. . . . . . . . . . . . . . . . . . . . . . . . . . . . . . . . . . . . . . . . . . . . . ..

. . . . . . . . . . . . . . . . . . . . . . . . . . . . . . . . . . . . . . . . . . . . . . .

3. ತೆನಾಲಿ ರಾಮ ಯಾವ ರಾಜನ ಆಸ್ಥಾನದಲ್ಲಿ ಕವಿಯಾಗಿದ್ದನು?


. . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . .

4. ಚಪ್ಪಲಿ ಹಾಕದೆ ಎಷ್ಟು ಜನ ಚಿತ್ರದಲ್ಲಿ ಇದ್ದಾರೆ? ಅವರು ಹಾಕದೆ ಇರಲು ಕಾರಣವೇನು?

## ❖ ಫ್ಲಾಶ್ ಕಾರ್ಡ್–7: ಮುಖ ಪುಟ ಚಿತ್ರಗಳು

**ಸೂಚನೆಗಳು: ಕೆಳಗಿನ ಮುಖಪುಟ ಚಿತ್ರಗಳನ್ನು ನೋಡಿ ಅದರ ಬಗ್ಗೆ ವಿವರಣೆ ಬರೆಯಿರಿ.**




**1. ಮೇಲಿನ ಚಿತ್ರದಲ್ಲಿ ಕಾಣುವ ವಿವಿಧ ವಸ್ತು ಪ್ರಾಣಿ ಹೆಸರುಗಳನ್ನು ಬರೆಯಿರಿ.**

. . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . .

**2. ಚಿತ್ರದಲ್ಲಿ ಚಿತ್ರಗಳನ್ನು ಬರೆದವರು ಯಾರು ಎಂದು ಹೆಸರಿಸಲಾಗಿದೆ?**

. . . . . . . . . . . . . . . . . . . . . . . . . . . . . . . . . . . . . . . . . . . . . . . ..

. . . . . . . . . . . . . . . . . . . . . . . . . . . . . . . . . . . . . . . . . . . . . . . . .

**3. ಚಿತ್ರದಲ್ಲಿ ಇರುವ ರೀತಿ ಇನ್ನೂ ಯಾವ ಯಾವ ಸ್ಥಳಗಳಲ್ಲಿ ಹೂ, ಗಿಡಗಳನ್ನು ನೀನು ಕಾಣುವೆ?**

. . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . .

4. ಈ ಚಿತ್ರದ ಬಗ್ಗೆ ನಿಮಗೆ ಅನಿಸಿದ್ದು ಏನು? ನೀವು ಆ ಜಾಗದಲ್ಲಿ ಇದ್ದರೆ ಏನಾಗುತ್ತಿತು?

. . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . .

## ❖ ಫ್ಲಾಶ್ ಕಾರ್ಡು–8: ಮುಖಪುಟ ಚಿತ್ರಗಳು

**ಸೂಚನೆಗಳು: ಕೆಳಗಿನ ಮುಖ ಪುಟ ಚಿತ್ರಗಳನ್ನು ನೋಡಿ ಅದರ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ವಿವರಣೆ ಬರೆಯಿರಿ.**




1. ಮೇಲಿನ ಚಿತ್ರದಲ್ಲಿ ಬಲೂನಿನ ಬಣ್ಣಗಳ ಹೆಸರನ್ನು ಬರೆಯಿರಿ.?

. . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . .

2. ಚಿತ್ರದಲ್ಲಿ ಎಷ್ಟು ಬಲೂನಿನ ಮೇಲೆ ಚಿತ್ತಾರಗಳಿವೆ.?

. . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . .

3. ಚಿತ್ರದಲ್ಲಿನ ಬಲೂನುಗಳನ್ನು ನೀವು ಯಾವ ಸ್ಥಳಗಳಲ್ಲಿ ನೋಡಿದ್ದೀರಿ.?

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

5. ಮಕ್ಕಳಿಗೆ ಬಲೂನುಗಳನ್ನು ಕಂಡರೆ ಇಷ್ಟ ಯಾಕೆ ?

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

## ❖ ಫ್ಲಾಶ್ ಕಾರ್ಡ್–9: ಜಾಹೀರಾತು ಚಿತ್ರಗಳು.

**ಸೂಚನೆಗಳು : ಕೆಳಗಿನ ಜಾಹೀರಾತು ಚಿತ್ರಗಳನ್ನು ನೋಡಿ ಅದರ ಬಗ್ಗೆ ವಿವರಣೆ ಬರೆಯಿರಿ.**



**1**. ಜಾಹೀರಾತು ಚಿತ್ರವು ಯಾವ ವಿಷಯದ ಕುರಿತಾಗಿದೆ .?

. . . . . . . . . . . . . . . . . . . . . . . . . . . . . . . . . . . . . . . . . . . . . . . . .. . . .

. . . . . . . . . . . . . . . . . . . . . . . . . . . . . . . . . . .

**2**. ನಿಮಗೆ ಆಧಾರ್ ಕಾರ್ಡು ಇದೆಯೆ?

. . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . .

**3.** ಆಧಾರ್ ಯಾರ ಅಧಿಕಾರ .?

. . . . . . . . . . . . . . . . . . . . . . . . . . . . . . . . . . . . . . . . . . .

. . . . . . .. . . . . . . . . . . . . . . . . . . . . . . . . . . . . . . . . . . . .

**4**. ಯಾವ ಪ್ರಾಧಿಕಾರವು ಆಧಾರ್‌ನ್ನು ನೀಡುತ್ತದೆ?

. . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . .

**5**. ಆಧಾರ್ ಕಾರ್ಡುನ್ನು ಯಾವ ಯಾವ ಸಂದರ್ಭಗಳಲ್ಲಿ ಬಳಸುತ್ತೇವೆ.?

. . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . .

**6**. ಆಧಾರ್ ನೋಂದಣಿಗೆ ಎಲ್ಲಿ ಎಲ್ಲಿ ಅವಕಾಶವಿದೆ?

. . . . . . . . . . . . . . . . . . . . . . . . . . . . . . . . . . . . . . . . . . . . . . .. .

. . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . .

## ❖ ಫ್ಲಾಶ್ ಕಾರ್ಡ್–10: ಜಾಹೀರಾತು ಚಿತ್ರಗಳು.

**ಸೂಚನೆಗಳು: ಕೆಳಗಿನ ಜಾಹೀರಾತು ಚಿತ್ರ ನೋಡಿ ಅದರ ಬಗ್ಗೆ ವಿವರಣೆ ಬರೆಯಿರಿ.**




**1. ಮೇಲಿನ ಜಾಹೀರಾತಿನ ಪದಗಳನ್ನು ಬಳಸಿ ನಿಮ್ಮದೆ ಆದ ಕವನ ಬರೆ.?**

. . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . ..

. . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . ..

. . . . . . . . . . . . . . . . . . . . . . . . . . . . . . . . . . . . . . . . . . . . . . . . .

❖ **ಫ್ಲಾಶ್ ಕಾರ್ಡು–11:   ಸಿನೆಮಾ/ನಾಟಕ ಪೋಸ್ಟರ್‌ಗಳು**

**ಸೂಚನೆಗಳು: ಕೆಳಗಿನ ಸಿನೆಮಾ/ನಾಟಕ ಪೋಸ್ಟರ್‌ಗಳು ನೋಡಿ ಅದರ ಬಗ್ಗೆ ವಿವರಣೆ ಬರೆಯಿರಿ.**




**1.ಚಿತ್ರದಲ್ಲಿ ಎಷ್ಟು ನಾಟಕಗಳ ಬಗ್ಗೆ ಜಾಹೀರಾತು ನೀಡಲಾಗಿದೆ?**

. . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . .

**2.ನಟರತ್ನಾಕರ ಎಂದು ಯಾರನ್ನು ಕರೆಯುತ್ತಾರೆ?**

. . . . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . . . .

**3.**ನಿಮ್ಮ ಊರಿನಲ್ಲಿ ನಡೆಸುವ ನಾಟಕದ ಹೆಸರುಗಳನ್ನು ಬರೆಯಿರಿ.?

. . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . .

**4.** ನೀವು ನಾಟಕದ ಪಾತ್ರಧಾರಿಯಾದರೆ ಯಾವ ಪಾತ್ರ ಮಾಡುವೆ?

. . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . .

**5.**ಮಂಗನ ಕೈನ ಹಿಡಿತಕ್ಕೆ ಕುರಿತು ಬರೆದ ನಾಟಕ ಹೆಸರೇನು?

. . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . .

**6.**ನಾಟಕಗಳು ಇತ್ತೀಚಗೆ ಕಡಿಮೆಯಾಗುತ್ತಿವೆಯೇ? ನಿನ್ನ ಅನಿಸಿಕೆ.

. . . . . . . . . . . . . . . . . . . . . . . . . . . . . . . . . . . . . . . . . . . .


. . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . .

## ❖ ಫ್ಲಾಶ್ ಕಾರ್ಡು–12: ಸಿನೆಮಾ/ನಾಟಕ ಪೋಸ್ಟರ್‌ಗಳು

**ಸೂಚನೆಗಳು: ಕೆಳಗಿನ ಸಿನೆಮಾ/ನಾಟಕ ಪೋಸ್ಟರ್‌ಗಳು ನೋಡಿ ಅದರ ಬಗ್ಗೆ ವಿವರಣೆ ಬರೆಯಿರಿ.**




**1**. ಸಿನೆಮಾ ಜಾಹೀರಾತು ಚಿತ್ರದಲ್ಲಿನ ನಾಯಕನ ಹೆಸರು ಬರೆ.?

. . . . . . . . . . . . . . . . . . . . . . . . . . . . . . . . . . . . . . . . . . . . . . . .

. . . . . . . . . . . . . . . . . . . . . . . . . . . . . . . . . . . . . . . . . . . . . . . .

**2**. ಮೇಲಿನ ಜಾಹೀರಾತು ಯಾವ ಸಿನೆಮಾ ಎಂದು ಹೆಸರಿಸಲಾಗಿದೆ ?

. . . . . . . . . . . . . . . . . . . . . . . . . . . . . . . . . . . . . . . . . . . . . . ..

. . . . . . . . . . . . . . . . . . . . . . . . . . . . . . . . . . . . . . . . . . . . . . . .

❖ ಈ ಕೆಳಗಿನ ಭಿತ್ತಿ ಪತ್ರಗಳು ಏನು ಹೇಳುತ್ತವೆ ಬರೆಯಿರಿ. ಗೆಳೆಯರೊಂದಿಗೆ ಭಿತ್ತಿ ಪತ್ರ, ಜಾಹಿರಾತುಗಳನ್ನು ಸಂಗ್ರಹಿಸಿ ಭಿತ್ತಿ ಪತ್ರ ಮತ್ತು ಕಥಾ ಕೋಶ ಸಿದ್ಧಪಡಿಸು;

**ಫ್ಲಾಶ್ ಕಾರ್ಡ್–1:**






**ಥೀಮ್: ವಿವಿಧ ವಿನೋದ ಚಿತ್ರಕಥೆ ಮತ್ತು ಭಿತ್ತಿಪತ್ರಗಳನ್ನು ಓದಿ ಅರ್ಥೈಸಿಕೊಳ್ಳುವುದು. (ಕೋವಿಡ್ ಸಂದರ್ಭವನ್ನು ಅನುಲಕ್ಷಿಸಿ)**

**ಉದ್ದೇಶ:**

- ಚಿತ್ರಸರಣಿಗಳನ್ನು ಗ್ರಹಿಸಿಕೊಂಡು ತಮ್ಮದೆ ಸ್ವ ಅನುಭವದೊಂದಿಗೆ ವಿವರಿಸುವರು.
- ಕಾಮಿಕ್ಸ್‌ಗಳನ್ನು ಓದಿ ಅರ್ಥೈಸಿಕೊಂಡು ಕಥೆಯನ್ನು ಸಾರಾಂಶಿಕರಿಸುವರು.
- ಭಿತ್ತಿಪತ್ರಗಳನ್ನು ಓದಿ ಅದರ ವಿವರಗಳನ್ನು ಅವಲೋಕಿಸುವುದರೊಂದಿಗೆ ವಿಶ್ಲೇಷಿಸುವಂತಾಗುವರು.

**ಪರಿಕಲ್ಪನೆ :**ಮಕ್ಕಳಿಗೆ ಸಾಮಾನ್ಯವಾಗಿ ಚಿತ್ರಗಳು ಆಕರ್ಷಣೆಯಾದರು ಸಹ ಚಿತ್ರಗಳ ಸರಣಿಗಳು ಅನುಕ್ರಮವಾಗಿ ಸಂಯೋಜಿಸಿದರೆ ಅದು ಕಲಿಕಾ ಪ್ರಕ್ರಿಯೆಯನ್ನು ಚುರುಕುಗೊಳಿಸುತ್ತದೆ. ಸರಳ ರೇಖೆಗಳಲ್ಲಿ ಅಥವಾ ಬಣ್ಣದ ಚಿತ್ರಗಳು ಹೊಸ ಗ್ರಹಿಕೆಗಳನ್ನು ಮೂಡಿಸುತ್ತವೆ. ಇದು ಮಕ್ಕಳ ಕಾರಣೀಕರಣ ಸಂಬಂಧಗಳನ್ನು ಹುಡುಕಲು ಸಹಾಯವಾಗುತ್ತದೆ. ಮಕ್ಕಳಿಗೆ ಅಮೂರ್ತ ಅನುಭವಗಳನ್ನು ಮೂರ್ತರೂಪದಲ್ಲಿ ಮನವರಿಕೆ ಮಾಡಿಸಬಹುದು. ಈ ನಿಟ್ಟಿನಲ್ಲಿ ಮಕ್ಕಳಿಗೆ ಚಿತ್ರಸರಣಿಗಳನ್ನು ಗ್ರಹಿಸಿಕೊಂಡು ತಮ್ಮದೆ ಸ್ವ ಅನುಭವದೊಂದಿಗೆ ವಿವರಿಸುವ ಸಾಮಾರ್ಥ್ಯವು ಕಲಿಕಾಗತಿಯನ್ನು ಹೆಚ್ಚುಮಾಡುತ್ತದೆ. ಹಾಗೇಯೆ ಕಾಮಿಕ್ಸ್ ಮತ್ತು ಭಿತ್ತಿಪತ್ರಗಳನ್ನು ಓದಿ ಅದರ ವಿವರಗಳನ್ನು ಅವಲೋಕಿಸುವುದು ಮಕ್ಕಳು ಸಾರ್ವಜನಿಕ ಸನ್ನಿವೇಶಗಳಲ್ಲಿ ಹೇಗೆ ಪ್ರತಿಕ್ರಿಯಿಸುವುದು ಹಾಗು ಅವುಗಳನ್ನು ವಿಶ್ಲೇಷಿಸುವುದು ತಾರ್ಕಿಕ ಆಲೋಚನೆಯನ್ನು ವೃದಿಮಾಡುತ್ತದೆ.ಕೆಳಗಿನ ಚಟುವಟಿಕೆಗಳು ಮೇಲಿನ ಉದೇಶಗಳನ್ನು ಈಡೇರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

**ಪ್ರಕ್ರಿಯೆಯಲ್ಲಿ ಬಳಸಿದ ಸಾಮಗ್ರಿ ಪ್ರಕ್ರಿಯೆಗಳು**

- ಚಿತ್ರ ಸರಣಿಚಿತ್ರಗಳು
- ಕೋವಿಡ್ ಪೋಸ್ಟರ್ ಚಿತ್ರಗಳು
- ಪುಸ್ತಕದ ಮುಖಪುಟ ಚಿತ್ರಗಳು.
- ಜಾಹೀರಾತು ಚಿತ್ರಗಳು.
- ಸಿನೆಮಾ/ನಾಟಕ ಪೋಸ್ಟರ್‌ಗಳು

**ಈ ತರಗತಿ ಪ್ರಕ್ರಿಯೆಯಲ್ಲಿ ಕೆಳಕಂಡ ತಯಾರಿಗಳನ್ನು ಮಾಡುವ ಮೂಲಕ ಸುಗಮಗಾರಿಕೆ ಮಾಡುವುದು.**

1. ಚಿತ್ರಗಳನ್ನು ಸ್ಪಷ್ಟವಾದ ಹಾಗು ಉತ್ತಮ ಗಾತ್ರ ಅಳತೆಯಲ್ಲಿರುವುದನ್ನು ಬಳಸುವುದು.

2. ಚಿತ್ರಗಳನ್ನು ಮಿಂಚು ಪಟ್ಟಿಯಾಗಿಯು ಹಾಗು ಕಾರ್ಯ ಹಾಳೆಯಾಗಿಯು ಬೇರೆ ಬೇರೆಯಾಗಿ ಬಳಸುವುದು.

3. ಸರಣಿ ಚಿತ್ರಗಳನ್ನು ಎರಡು ಕಾರ್ಯಹಾಳೆಗಳನ್ನು ಒಟ್ಟಾಗಿ ಬಳಸುವುದು.

4. ಪ್ರತಿ ಮಗುವಿಗೆ ಕನಿಷ್ಟ ಒಂದು ಕಾರ್ಯಹಾಳೆ ಬಳಸುವುದು.

| ಕ್ರ.ಸ | ಪ್ರಕ್ರಿಯೆ | ಪ್ರಕ್ರಿಯೆಯ ವಿವರಣೆ | ಕಲಿಕಾ ಸಾಮಗ್ರಿಗಳು | ಸಮಯದ ಅವಧಿ |
|---|---|---|---|---|
| 1 | ಪೂರ್ವ ತಯಾರಿ ಚಟುವಟಿಕೆ: ಸರಣಿ ಚಿತ್ರ ಪೋಸ್ಟರ್ ಪ್ರದರ್ಶನ | ಮಕ್ಕಳ ಕರೋನ ಭಯವನ್ನು ಹೋಗಲಾಡಿಸಲು ಮಕ್ಕಳಿಗೆ ಅನುಭ ಂಥ-1 ಹಾಗು ಪ್ಲಾಶ್ ಕಾರ್ಡು-1ರ ಚಿತ್ರಗಳನ್ನು ಗಮನಿಸಲು ತಿಳಿಸುವುದು.<br>ಕರೋನ ಸಂಖ್ಯೆ ಇಳಿಕೆಯ ಅಂಕಿ ಅಂಶಗಳನ್ನು ತಿಳಿಸುತ್ತ ಗುಣಮೂಖವಾದವರ ಸರಳ ಕಥೆಯ ಮೂಲಕ ಮಕ್ಕಳಿಗೆ ಕರೋನ ಕಾಳಜಿ ಬಗ್ಗೆ ಮನವರಿಕೆ ಮಾಡಿಸುವುದು. | ಕೋವಿಡ್-19 ಗೆ ಸಂಬಂದಿಸಿದ ಪೋಸ್ಟರ್ ಚಿತ್ರಗಳು. | 30 ನಿಮಿಷ |
| 2. | ಮಕ್ಕಳ ಜೊತೆ ಮುಕ್ತ ಮಾತುಕತೆ ಚಿತ್ರಗಳೊಂದಿಗೆ... | ಕೋವಿಡ್ 19 ಗೆ ಸಂಬಂದಿಸಿದ ಚಿತ್ರಗಳನ್ನು ಅವಲೋಕಿಸಿದ ನಂತರ ಅವರ ಅನುಭವವನ್ನು ವಯಕ್ತಿಕ ಕಾಳಜಿಗಳ ಬಗೆಗಿನ ಕ್ರಿಯೆಗಳ ಬಗ್ಗೆ ಮಾತನಾಡಿಸಿ ತಮ್ಮ ನಿರ್ಣಯಗಳನ್ನು ಪುಸ್ತಕದಲ್ಲಿ ನಮೂದಿಸುವರು, ನಂತರ ಸರದಿ ಪ್ರಕಾರವಾಗಿ ಗುಂಪಿಗೆ ಹಂಚಿಕೊಳ್ಳುವರು.<br>ಶಿಕ್ಷಕರು ಮಕ್ಕಳನ್ನು ಪ್ರಶಂಸಿಸುತ್ತಾ ಉತ್ತಮ ನಿರ್ಣಯಗಳಿಗೆ ಉಲ್ಲೇಕಿಸಿ ಮಾತನಾಡಿಸಿ ಸಾರಂಶಿಕರಿಸುವರು. | ಪುಸ್ತಕ ಮತ್ತು ಲೇಖನಿ ಸಾಮಗ್ರಿಗಳು | 90 ನಿಮಿಷಗಳು |
| 3. | ಜಾಹೀರಾತು ಚಿತ್ರ ಇತರ ಚಿತ್ರಗಳನ್ನು ಓದುವ-ನೋಡುವ ಸಾಮಾರ್ಥ್ಯ ಹೆಚ್ಚಿಸುವುದು. | ಜಾಹೀರಾತು ಚಿತ್ರ ,ಪುಸ್ತಕದ ಮುಖಪುಟ ಚಿತ್ರಗಳ ಕಾರ್ಯ ಹಾಳೆಗಳನ್ನು ಗಮನಿಸಿದಾಗ ಆದ ಓಳಸುರಿಗಳನ್ನು(ಆದ ಹೊಸ ಆಲೋಚನೆ)ಬರೆಯುವಂತೆ ಪ್ರೋತ್ಸಹಿಸುವುದು.<br>ಮಕ್ಕಳು ಬರೆದ ಕಾರ್ಯಾ ಹಾಳೆಗಳ ಪ್ರದರ್ಶನವನ್ನು ಮಾಡಿ ಅನುಭವ ಹಂಚಿಕೆ ಮಾಡುವುದು. | 3.ಪುಸ್ತಕದ ಮುಖಪುಟ ಚಿತ್ರಗಳು. | 90 ನಿಮಿಷಗಳು |
| 4. | ದತ್ತಾಂಶಗಳನ್ನು ಬಳಸಿ ವಾಕ್ಯ ರಚನೆ ಸಾಮಾರ್ಥ್ಯ ಬೆಳವಣಿಗೆಗೆ ಸಂಬಾಷಣೆ ಹಾಗು ಬರವಣಿಗೆ | ವಿವಿಧ ಪೂಸ್ಟರ್ ನಲ್ಲಿ ಇರುವ ಸೂಚನೆಗಳಿಗೆ ಅನುಸಾರವಾಗಿ ಫ್ಲಾಶ್ ಕಾರ್ಡಿನ ಪ್ರಶ್ನೆಗಳಿಗೆ ಉತ್ತರಿಸಲು ಅವಕಾಶ ನೀಡುವುದು .ಪ್ರತಿ ಮಕ್ಕಳಿಗೆ ಮಾರ್ಗದರ್ಶನ ಮಾಡುವುದು.ಹೊಸ ಪದಗಳ ಅರ್ಥಗಳನ್ನು ತಿಳಿಸುವುದು. | ಜಾಹೀರಾತು ಚಿತ್ರಗಳು.<br><br>ಸಿನೆಮಾ/ನಾಟಕ ಪೋಸ್ಟರ್‌ಗಳು | 90 ನಿಮಿಷಗಳು |
| 5 | ಅವಲೋಕನ | ಮಕ್ಕಳಿಗೆ ವಿವಿಧ ಆಸಕ್ತಿದಾಯಕ ವಿಷಯದ ಮೇಲೆ ಪೋಸ್ಟರಗಳನ್ನು ರಚಿಸವರು | ಪೇಪರ್ ಲೇಖನಿ ಸಾಮಗ್ರಿಗಳು | 40 ನಿಮಿಷ |

- ಚಿತ್ರಗಳನ್ನು ಪ್ರದರ್ಶನವನ್ನು ಮಕ್ಕಳಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡುವುದು, ಚಿತ್ರಗಳನ್ನು ಸರಣಿಯಾಗಿ ಜೋಡಿಸುವುದು.

- ಚಿತ್ರಗಳನ್ನು ನೋಡಲು ಸೂಕ್ತ ಸಮಯ ನೀಡುವುದು.ಮಕ್ಕಳಿಗೆ ಅಡಿ ಟಿಪ್ಪಣಿ ತಯಾರಿಸಲು ಸೂಚಿಸುವುದು.
- ಮಕ್ಕಳಿಗೆ ಅನುಭವವನ್ನು ಮೂಕ್ತವಾಗಿ ಮಾತನಾಡುವ ಅವಕಾಶ ಕಲ್ಪಿಸಲು ಶಿಕ್ಷಕರು ತಮ್ಮ ಸ್ವ ಅನಿಸಿಕೆಗಳನ್ನು ಮೊದಲು ಮಾದರಿಯಾಗಿ ಉದಾಹರಣೆ ನೀಡುವುದು.

### ❖ ಕಾರ್ಡು–1 ಪೂರಕ ಪ್ರಶ್ನೆಗಳು.

**ಪ್ರಯಾಣದ ಸಂದರ್ಭದಲ್ಲಿ ವಹಿಸ ಬೇಕಾದ ಕ್ರಮಗಳನ್ನು ಪಟ್ಟಿ ಮಾಡಿ**

**1.** . . . . . . . . . . . . . . . . . . . . . . . . . . . . . . . . . . . . . . . .

**2.** . . . . . . . . . . . . . . . . . . . . . . . . . . . . . . . . . . . . . . . .

**3.** . . . . . . . . . . . . . . . . . . . . . . . . . . . . . . . . . . . . . . . .

**4.** . . . . . . . . . . . . . . . . . . . . . . . . . . . . . . . . . . . . . . . .

**5.** . . . . . . . . . . . . . . . . . . . . . . . . . . . . . . . . . . . . . . . .

**6.** . . . . . . . . . . . . . . . . . . . . . . . . . . . . . . . . . . . . . . . .

❖ ಕೆಳಗಿನ ಬಿತ್ತಿಪತ್ರಗಳನ್ನು ಓದಿ ಅರ್ಥೈಸಿಕೊ

## ಫ್ಲಾಶ್ ಕಾರ್ಡ್–1: ಕೋವಿಡ್–19 ಪ್ರಯಾಣ ಸುರಕ್ಷತೆ

ಸೂಚನೆಗಳು: ಕೆಳಗಿನ ಪೋಸ್ಟರ್ ಚಿತ್ರ ನೋಡಿ ಸರಳ ವಾಕ್ಯದಲ್ಲಿ ಗ್ರಹಿಕೆಗಳನ್ನು ಬರೆಯಿರಿ.



## ❖ ಫ್ಲಾಶ್ ಕಾರ್ಡ್–2 : ಕೋವಿಡ್–19 ಸರ್ಕಾರದ ಪ್ರಕ್ರಿಯೆಗಳು

**ಸೂಚನೆಗಳು :** ಕೆಳಗಿನ ಪೋಸ್ಟರ್ ಚಿತ್ರ ನೋಡಿ ಸರಳ ವಾಕ್ಯದಲ್ಲಿ ಗ್ರಹಿಕೆಗಳನ್ನು ಬರೆಯಿರಿ.




ಮೇಲಿನ ಪೋಸ್ಟರ್‌ನ ಮಾಹಿತಿಯಂತೆ ಸರ್ಕಾರ ವಹಿಸಿದ ಎರಡು ಕ್ರಮಗಳನ್ನು ಪಟ್ಟಿ ಮಾಡಿ.

**1.** . . . . . . . . . . . . . . . . . . . . . . . . . . . . . . . . . . . . . . . . . . . .

**2.** . . . . . . . . . . . . . . . . . . . . . . . . . . . . . . . . . . . . . . . . . . . . .

**3.** . . . . . . . . . . . . . . . . . . . . . . . . . . . . . . . . . . . . . . . . . . . . .

❖ **ಕೆಳಗಿನ ಲೇಖನವನ್ನು ಓದಿಕೊಂಡು ಕೇಳಿದ ಪ್ರಶ್ನೆಗಳಿಗೆ ಉತ್ತರಿಸು.**


## 'ಪ್ರಾಣವನ್ನೇ ತೆಗೆಯುವ 'ಕರೋನಾ ವೈರಸ್' ಹಬ್ಬುತ್ತಿದೆ, ಇರಲಿ ಎಚ್ಚರ'!

ಕೊರೊನಾ ವೈರಸ್ ಎಂದರೆ ಸಾಮಾನ್ಯ ವೈರಸ್ ಗಳ ಒಂದು ಗುಂಪು. ವೈರಸ್ ಗಳ ಮೇಲ್ಮೈ ಯಲ್ಲಿ ಕಿರೀಟದಂತಹ ವಿನ್ಯಾಸವಿರುವ ಕಾರಣದಿಂದಾಗಿ ಹೀಗೆ ಹೆಸರಿಡಲಾಗಿದೆ. ಕೊರಾನಾ ಅಥ ವಾ ಕರೋನಾ ವೈರಸ್ ಒಂದು ಬಗೆಯ ಪ್ರಾಣಹಾನಿ ಉಂಟು ಮಾಡುವಂತಹ ವೈರಸ್ ಆಗಿದ್ದು,



ಇದು ಮನುಷ್ಯನ ಸಹಿತ ಸಸ್ತನಿಗಳ ಉಸಿರಾಟದ ವ್ಯವಸ್ಥೆ ಮೇಲೆ ಪರಿಣಾಮ ಬೀರುವುದು ಎಂದು ಹೇಳಲಾಗುತ್ತಿದೆ. ಈ ವೈರಸ್ ನಿಂದಾಗಿ ಸಾಮಾನ್ಯ ಶೀತ, ನ್ಯುಮೋನಿಯಾ ಮತ್ತು ತೀವ್ರ ರೀತಿ ಯ ಶ್ವಾಸಕೋಶದ ಸಮಸ್ಯೆ(ಎಸ್ ಎಆರ್ ಎಸ್) ಕಾಣಿಸಿಕೊಳ್ಳುವುದು ಮತ್ತು ಇದು ಹೊಟ್ಟೆ ಮೇಲೂ ಪರಿಣಾಮ ಬೀರುವುದು.

**ಕೊರೊನಾ ವೈರಸ್ ಸೋಂಕು ಎಂದರೇನು?**



ಕೊರೊನಾ ವೈರಸ್ ಎಂದರೆ ಸಾಮಾನ್ಯ ವೈರಸ್ ಗಳ ಒಂದು ಗುಂಪು. ವೈರಸ್ ಗಳ ಮೇಲ್ಮೈ ಯಲ್ಲಿ ಕಿರೀಟದಂತಹ ವಿನ್ಯಾಸವಿರುವ ಕಾರಣದಿಂದಾಗಿ ಹೀಗೆ ಹೆಸರಿಡಲಾಗಿದೆ. ಕೆಲವು ಕೊರನಾ

ವೈರಸ್ ಕೇವಲ ಪ್ರಾಣಿಗಳ ಮೇಲೆ ಮಾತ್ರ ಪರಿಣಾಮ ಬೀರುವುದು. ಇನ್ನು ಕೆಲವು ವೈರಸ್ ಗಳು ಮನುಷ್ಯರ ಮೇಲೆ ಕೂಡ ಪರಿಣಾಮ ಬೀರುವುದು. ಇದು ಸಾಮಾನ್ಯ ಶೀತದಂತಹ ಲಘು ಪ್ರಮಾಣದಿಂದ ಮಧ್ಯಮ ಪ್ರಮಾಣದ ಮೇಲ್ಭಾಗದ ಶ್ವಾಸಕೋಶದ ಸೋಂಕನ್ನು ಉಂಟು ಮಾಡುವುದು. ಆದರೆ ಇದು ಕೆಲವೊಂದು ಸಲ ತೀವ್ರ ರೀತಿಯ ನ್ಯುಮೋನಿಯಾ ಮತ್ತು ಬ್ರಾಂಕೈಟಿಸ್ ಉಂಟು ಮಾಡುವುದು. ಮನುಷ್ಯರನ್ನು ಕಾಡುವಂತಹ ಕೊರೊನಾ ವೈರಸ್ ನಲ್ಲಿ ಹಲವು ವಿಧಗಳು ಇವೆ. ಇದರಲ್ಲಿ ಮೆರ್ಸ್ ಮತ್ತು ಸಾರ್ಸ್ ವೈರಸ್ ಸೇರಿದೆ.

**ಕೊರೊನಾ ವೈರಸ್ ಹಬ್ಬುವುದು ಹೇಗೆ?**

ರೋಗವಿರುವವರು ಕೆಮ್ಮಿದರೆ, ಕೈಕುಲುಕುವಿಕೆ, ಯಾವುದೋ ವಸ್ತುವನ್ನು ಮುಟ್ಟಿ ಅಥವಾ ಪ್ರಾಣಿಗಳನ್ನು ಮುಟ್ಟಿ ಕೈತೊಳೆದುಕೊಳ್ಳದೆ ನಿಮ್ಮ ಮುಖ್ಯ, ಬಾಯಿಗಳನ್ನು ಮುಟ್ಟಿದಾಗಲೂ ಈ ರೋಗ ಹರಡುವ ಸಾಧ್ಯತೆ ಇರುತ್ತದೆ.

*ಸಾಮಾನ್ಯವಾಗಿ ಕೊರೊನಾ ವೈರಸ್ ಒಬ್ಬ ಮನುಷ್ಯನಿಂದ ಮತ್ತೊಬ್ಬನಿಗೆ ಹಬ್ಬುವುದು.
*ಶೀನು ಮತ್ತು ಕೆಮ್ಮಿನ ಗಾಳಿಯಿಂದ.
*ತುಂಬಾ ಹತ್ತಿರ ದೈಹಿಕ ಸಂಪರ್ಕದಿಂದ. ಉದಾಹರಣೆಗೆ ಸ್ಪರ್ಶ ಮತ್ತು ಹಸ್ತಲಾಘವ



*ವೈರಸ್ ಇರುವ ವಸ್ತುವನ್ನು ಮುಟ್ಟುವುದು, ಇದರ ಬಳಿಕ ಬಾಯಿ, ಮೂಗು ಅಥವಾ ಕಣ್ಣುಗಳನ್ನು ಕೈ ತೊಳೆಯದೆ ಮುಟ್ಟಿದರೆ.
*ಅಪರೂಪದಲ್ಲಿ ಮಲದ ಮೂಲಕ

**ಕೊರೊನಾ ವೈರಸ್ ನ ಕೆಲವು ಲಕ್ಷಣಗಳು ಯಾವುದು?**

ಕೊರೊನಾ ವೈರಸ್ ಯಾವ ರೀತಿಯದ್ದು ಮತ್ತು ಸೋಂಕು ಎಷ್ಟು ಗಂಭೀರವಾಗಿದೆ ಎನ್ನುವುದರ ಮೇಲೆ ಇದರ ಲಕ್ಷಣವು ಅವಲಂಬಿಸಿದೆ. ಶೀತದಂತಹ ಶ್ವಾಸಕೋಶದ ಮೇಲ್ಭಾಗದ ಸೋಂಕಿಗೆ ಒಳಗಾಗಿದ್ದರೆ ಆಗ ನಿಮ್ಮಲ್ಲಿ ಈ ರೀತಿಯ ಕೆಲವು ಲಕ್ಷಣಗಳೂ ಕಾಣಿಸಿಕೊಳ್ಳುವುದು.

*ಮೂಗು ಸೋರುವುದು

*ತಲೆನೋವು

*ಕೆಮ್ಮು

*ಗಂಟು ನೋವು

*ಜ್ವರ

*ಸಂಪೂರ್ಣವಾಗಿ ಅನಾರೋಗ್ಯ

* ಗಂಟಲು ಕೆರೆತ

* ಸೀನು

* ತಲೆಸುತ್ತು

ಈ ರೋಗದ ವೈರಸ್‌ಗಳು ತುಂಬಾನೇ ಡೇಂಜರಸ್

ಕೆಲವು ಕೊರೊನಾ ವೈರಸ್‌ಗಳು ತೀವ್ರ ರೀತಿಯ ಲಕ್ಷಣಗಳನ್ನು ತೋರಿಸುವುವು.

ಈ ಸೋಂಕು ಬ್ರಾಂಕೈಟಿಸ್ ಅಥವಾ ನ್ಯುಮೋನಿಯಾ ಆಗಿ ಪರಿವರ್ತನೆ ಆಗಬಹುದು.




**ಇದರ ಪ್ರಮುಖ ಲಕ್ಷಣಗಳೆಂದರೆ**

*ಕಫದೊಂದಿಗೆ ಕೆಮ್ಮು


*ಉಸಿರು ಕಟ್ಟುವಿಕೆ

*ಎದೆ ನೋವು ಅಥವಾ ಕೆಮ್ಮು ಅಥವಾ ಉಸಿರಾಟದ ವೇಳೆ ಬಿಗಿ ಹಿಡಿತ

*ಹೃದಯ ಮತ್ತು ಶ್ವಾಸಕೋಶದ ಕಾಯಿಲೆ ಇರುವವರಲ್ಲಿ ಈ ತೀವ್ರವಾದ ಲಕ್ಷಣಗಳು ಸಾಮಾನ್ಯ.

*ಇದರೊಂದಿಗೆ ದುರ್ಬಲ ಪ್ರತಿರೋಧಕ ವ್ಯವಸ್ಥೆ ಹೊಂದಿರುವಂತಹ ಶಿಶುಗಳು ಮತ್ತು ವಯಸ್ಸಾದವರಲ್ಲಿ ಇದು ಸಾಮಾನ್ಯ.


**ಕೊರೊನಾ ವೈರಸ್ ಪತ್ತೆ ಮಾಡುವುದು ಹೇಗೆ?**



ಕೊರೊನಾ ವೈರಸ್ ಪತ್ತೆ ಮಾಡಲು ವೈದ್ಯರು

- ವೈದ್ಯಕೀಯ ಇತಿಹಾಸ ತಿಳಿಯುವರು
- ದೈಹಿಕ ಪರೀಕ್ಷೆ ಮಾಡುವರು
- ರಕ್ತ ಪರೀಕ್ಷೆ ಮಾಡಬಹುದು.
- ಕಫ, ಗಂಟಲಿನ ಸ್ವಾಬ್ ನ ಮಾದರಿ ಮತ್ತು ಇತರ ಉಸಿರಾಟದ ಪರೀಕ್ಷೆ ಮಾಡಿಸಬಹುದು

.



ಈ ಕಾಯಿಲೆ ಪತ್ತೆಗೆ ಲ್ಯಾಬ್‌ರೋಟರಿಯಲ್ಲಿ ಈ ಬಗೆಯ ಪರೀಕ್ಷೆ ಮಾಡಲಾಗುವುದು.

* ಮಾಲೆಕ್ಯೂಲರ್ ಪರೀಕ್ಷೆ: ಇದರಲ್ಲಿ ಸೋಂಕಿನ ಲಕ್ಷಣಗಳನ್ನು ಪತ್ತೆ ಹಚ್ಚಲಾಗುವುದು.

* ಸೆರೊಲಜಿ ಪರೀಕ್ಷೆ: ಇದರಲ್ಲಿ ವ್ಯಕ್ತಿಗೆ ಯಾವ ಬಗೆಯ ವೈರಸ್ ದಾಳಿ ಮಾಡಲಾಗಿದೆ ಎಂದು ಪತ್ತೆ ಹಚ್ಚಲಾಗುವುದು.

**ಕೊರೊನಾ ವೈರಸ್ ಗೆ ಚಿಕಿತ್ಸೆಗಳು ಯಾವುದು?**

ಕೊರೊನಾ ವೈರಸ್ ಸೋಂಕಿಗೆ ಯಾವುದೇ ರೀತಿಯ ನಿರ್ದಿಷ್ಟ ಚಿಕಿತ್ಸೆಗಳಿಲ್ಲ. ಕೆಲವು ಜನರು ಅವರಾಗಿಯೇ ಚೇತರಿಸಿಕೊಳ್ಳುವರು. ಆದರೆ ಇದರ ಲಕ್ಷಣಗಳನ್ನು ಈ ರೀತಿಯಾಗಿ ಕಡಿಮೆ ಮಾಡಬಹುದು.

*ನೋವು, ಜ್ವರ ಮತ್ತು ಕೆಮ್ಮಿಗೆ ಮಾತ್ರೆ ತೆಗೆದುಕೊಳ್ಳುವುದು. ಮಕ್ಕಳಿಗೆ ಆಸ್ಪಿರಿನ್ ಕೊಡಬೇಡಿ. ನಾಲ್ಕು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಕೆಮ್ಮಿನ ಔಷಧಿ ನೀಡಬೇಡಿ.

*ಕೆಮ್ಮು ಮತ್ತು ಗಂಟಲು ನೋವು ಕಡಿಮೆ ಮಾಡಲು ಬಿಸಿ ನೀರಿನ ಸ್ನಾನ ಮಾಡುವುದು ಒಳ್ಳೆಯದು.

*ಸಾಕಷ್ಟು ವಿಶ್ರಾಂತಿ ಪಡೆಯಿರಿ.

ನೀರಿನಾಂಶ ಹೆಚ್ಚು ಸೇವಿಸಿ.



**ಕೊರೊನಾ ವೈರಸ್ ತಡೆಯಬಹುದೇ?**

ಈಗ ಮನುಷ್ಯರಲ್ಲಿ ಕಾಡುವ ಕೊರೊನಾ ವೈರಸ್ ಗೆ ಯಾವುದೇ ರೀತಿಯ ಔಷಧಿಯಿಲ್ಲ. ಆದರೆ ಇದು ಹರಡದಂತೆ ತಡೆಯುವ ಮೂಲಕ ಅಪಾಯವನ್ನು ಕಡಿಮೆ ಮಾಡಬಹುದು. ಇದಕ್ಕೆ ನೀವು ಈ ರೀತಿ ಮಾಡಿ.

*ಸೋಪ್ ಮತ್ತು ನೀರು ಹಾಕಿ 20 ಸೆಕೆಂಡು ಕಾಲ ಕೈ ತೊಳೆಯಿರಿ.

* ತೊಳೆಯದೆ ಮುಖ, ಮೂಗು ಅಥವಾ ಬಾಯಿಯನ್ನು ಮುಟ್ಟಲು ಹೋಗಬೇಡಿ.

*ಅನಾರೋಗ್ಯದಲ್ಲಿರುವ ಜನರೊಂದಿಗೆ ಹತ್ತಿರದ ಸಂಪರ್ಕವಿಟ್ಟುಕೊಳ್ಳಬೇಡಿ.

*ಪದೇ ಪದೇ ಮುಟ್ಟುತ್ತಲಿರುವ ಜಾಗವನ್ನು ಆಗಾಗ ಚೆನ್ನಾಗಿ ಸ್ವಚ್ಛ ಮಾಡಿಟ್ಟುಕೊಳ್ಳಿ.

*ಕೆಮ್ಮು ಮತ್ತು ಶೀನು ಬಂದ ವೇಳೆ ಟಿಶ್ಯೂ ಅಡ್ಡ ಹಿಡಿಯಿರಿ. ಇದರ ಬಳಿಕ ಟಿಶ್ಯೂ ಬಿಸಾಕಿ, ಕೈಗಳನ್ನು ತೊಳೆಯಿರಿ.

*ಅನಾರೋಗ್ಯವಿದ್ದರೆ ಮನೆಯಲ್ಲೇ ಉಳಿಯಿರಿ.

* ಸೀನಿದಾಗ, ಕೆಮ್ಮಿದಾಗ ಸೋಂಕಿರುವ ವ್ಯಕ್ತಿ ಕೈಗಳನ್ನು ತೊಳೆಯಬೇಕು.
* ಬಾಯಿಗೆ ಬಟ್ಟೆ ಅಥವಾ ಕರ್ಚೀಫ್ ಅಡ್ಡ ಹಿಡಿದು ಸೀನುವುದು, ಕೆಮ್ಮುವುದು ಮಾಡಬೇಕು.
* ಸೋಂಕು ಇರುವ ವ್ಯಕ್ತಿಯಿಂದ ಅಂತರ ಕಾಯ್ದುಕೊಳ್ಳಬೇಕು.
* ಬೇಯಿಸದ ಮೊಟ್ಟೆ, ಮೀನು, ಮಾಂಸ ತಿನ್ನಬಾರದು.
* ಸಾಕಷ್ಟು ನೀರು ಕುಡಿಯಬೇಕು.
* ಧೂಮಪಾನ ಮಾಡಬಾರದು ಹಾಗೂ ಧೂಮಪಾನ ಮಾಡುವ ಜಾಗದಲ್ಲಿ ಓಡಾಡಬಾರದು.
* ಜನ ಸಂದಣಿ ಹೆಚ್ಚಿರುವ ಕಡೆ ಓಡಾಡಬಾರದು.

ಈ ಮುನ್ನೆಚ್ಚರಿಕೆ ಕ್ರಮ ಅನುಸರಿಸಿದರೆ ರೋಗ ಒಬ್ಬರಿಂದ ಮತ್ತೊಬ್ಬರಿಗೆ ಹರಡುವುದನ್ನು ತಡೆಗಟ್ಟಬಹುದು.

1. ಕೊಟ್ಟಿರುವ ಲೇಖನದಲ್ಲಿ ಬಂದಿರುವ ಹೊಸ ಪದಗಳನ್ನು ಗುರುತಿಸಿ ಅವುಗಳ ಅರ್ಥ ವಿವರಣೆ ಬರೆಯಿರಿ.

ಉದಾ : ವೈರಸ್:– ವೈರಸ್ ಇದೊಂದು ಸೂಕ್ಷ್ಮ ಜೀವಿ.

2. ಯಾವುದೇ ವ್ಯಕ್ತಿಗೆ ಕೊರೋನಾ ಬಂದಿರುವುದನ್ನು ನಾವು ಹೇಗೆ ಗುರುತಿಸಬಹುದು?

3. ನಿಮ್ಮ ಊರಿನಲ್ಲಿ ಯಾರಿಗಾದರು ಕೊರೋನಾ ಬಂದರೆ ಅದು ನಿಮಗೆ ಬಾರದಂತೆ ಹೇಗೆ ತಡೆಯುವಿರಿ?

4. ಯಾವುದೇ ವ್ಯಕ್ತಿಗೆ ಕೊರೋನಾ ಬಂದಿದೆ ಎಂಬುದನ್ನು ನೀವು ಹೇಗೆ ಗುರುತಿಸುವಿರಿ?

5. ಎಂತಹ ವ್ಯಕ್ತಿಗಳಿಗೆ ಬೇಗ ಕೊರೋನಾ ಖಾಯಿಲೆ ಬೇಗ ಬರುತ್ತದೆ?

6. ನಮ್ಮ ಕುಟುಂಬದಲ್ಲಿ ಯಾರಿಗಾದರೂ ಕೊರೋನಾ ಖಾಯಿಲೆ ಬಂದರೆ ಅದು ನಮಗೂ ಬರುತ್ತದೆಯೇ ಹಾಗಾದರೆ ಹೇಗೆ?

7. ಬೇರೆ ಊರಿನಿಂದ ಬಂದವರಿಂದ ಖಾಯಿಲೆ ಹರಡದಂತೆ ತಡೆಯಲು ಯಾವ ಕ್ರಮಗಳನ್ನು ಅನುಸರಿಸಬೇಕು?

8. ನಿಮ್ಮ ಊರಿನಲ್ಲಿ ಯಾರಿಗಾದರೂ ಕೊರೋನಾ ಖಾಯಿಲೆ ಬಂದರೆ ಅದು ನಮಗೂ ಬರುತ್ತದೆಯೇ ಹಾಗಾದರೆ ಹೇಗೆ?

9. ಬೇರೆ ಊರಿನಿಂದ ಬಂದವರಿಂದ ಖಾಯಿಲೆ ಹರಡದಂತೆ ತಡೆಯಲು ಯಾವ ಕ್ರಮಗಳನ್ನು ಅನುಸರಿಸಬೇಕು?

10. ಕೊರೋನಾ ವೈರಸ್ ಮನುಷ್ಯನಿಗೆ ಹರಡುವುದಕ್ಕಿಂತ ಮುಂಚೆ ಪರಿಸರದಲ್ಲಿ ಎಷ್ಟು ಸಮಯದವರೆಗೆ ಜೀವಂತವಾಗಿರುತ್ತದೆ?

11. ಒಂದು ವೇಳೆ ನಮಗೆ ಕೊರೋನಾ ಬಂದರೆ ವೈದ್ಯರು ಅದನ್ನು ಹೇಗೆ ಗುಣಪಡಿಸುತ್ತಾರೆ?

12. ಸ್ಯಾನಿಟೈಸರ್, ಮಾಸ್ಕ ಮತ್ತು ಸಾಮಾಜಿಕ ಅಂತರದಿಂದ ನಾವು ಕೊರೋನಾ ತಡೆಯಬಹುದೇ? ಹಾಗಾದರೆ ಹೇಗೆ?

## 2 ಮತ್ತು 3ನೇ ತರಗತಿ ಮಕ್ಕಳಿಗೆ

**ಥೀಮ್: ಅರ್ಥೈಸಿಕೊಳ್ಳುತ್ತಾ ಓದುವುದು (ಮೀನಿಂಗ್ ಮೇಕಿಂಗ್)**

- ಕೆಳಗಿನ ಚಿತ್ರಸಹಿತ ಪದಗಳನ್ನು ದೊಡ್ಡದಾದ ಡ್ರಾಯಿಂಗ್ ಸೀಟಿಗೆ ಅಂಟಿಸಿ, ಎಲ್ಲಾ ಮಕ್ಕಳಿಗೆ ಸ್ಪಷ್ಟವಾಗಿ ಕಾಣುವಂತೆ ತರಗತಿ ಕೋಣೆಯೊಳಗೆ ಪ್ರದರ್ಶಿಸುವುದು. ಪ್ರತಿಯೊಂದು ಚಿತ್ರ ಮತ್ತು ಅವುಗಳ ಕೆಳಗೆ ಬರೆದಿರುವ ಪದಗಳನ್ನು ಮಕ್ಕಳಿಗೆ ವೀಕ್ಷಿಸಲು ಸೂಚಿಸುವುದು. ವೀಕ್ಷಿಸಿದ ನಂತರ ಆಯಾ ಚಿತ್ರದ ಹೆಸರುಗಳನ್ನು ಆಯಾ ಚಿತ್ರಗಳ ಕೆಳಗೆ ಬರೆಯಲಾಗಿದೆ ಎಂದು ಶಿಕ್ಷಕರು ಮಕ್ಕಳಿಗೆ ತಿಳಿಸುವುದು. ಇದನ್ನು ಗಮನದಲ್ಲಿಟ್ಟುಕೊಂಡು ಒಂದು ಸಾರಿ ಚಿತ್ರಗಳೊಂದಿಗೆ ಪದಗಳನ್ನು ಸಹಸಂಬಂಧೀಕರಿಸುತ್ತಾ ಮಕ್ಕಳಿಗೆ ಓದಲು ಸೂಚಿಸುವುದು. ಶಿಕ್ಷಕರು ಅಗತ್ಯ ಮಾರ್ಗದರ್ಶನ ಮತ್ತು ಸಹಾಯ ಮಾಡುವುದು.




ಹುಡುಗಿ




ಹುಡುಗ




ಶಾಲೆ




ಪುಸ್ತಕ



ಗಾಳಿಪಟ




ಗಿಡ



ಆಕಳು




ನೀರು



ಬೆಕ್ಕು



ಹಾಲು



ಕೋಳಿ




ಹುಲ್ಲು


❖ ಚಿತ್ರಗಳ ಮಿಂಚುಪಟ್ಟಿಗಳು ಮತ್ತು ಪದಗಳ ಮಿಂಚುಪಟ್ಟಿಗಳನ್ನು ಮಿಶ್ರಗೊಳಿಸಿ ಕೊಟ್ಟು ಚಿತ್ರಗಳಿಗೆ ಸೂಕ್ತ ಪದಗಳನ್ನು ಜೋಡಿಸುವ ಚಟುವಟಿಕೆ.



ಹುಡುಗಿ



ಹುಡುಗ



ಪುಸ್ತಕ




ಶಾಲೆ




ನೀರು



ಬೆಕ್ಕು




ಗಿಡ




ಗಾಳಿಪಟ



ಹುಲ್ಲು



ಆಕಳು



ಕೋಳಿ



ಹಾಲು

❖ ಚಿತ್ರಗಳಿಗೆ ಅಕ್ಷರಗಳ ಮಿಂಚುಪಟ್ಟಿಗಳಿಂದ ಪದಗಳನ್ನು ರಚಿಸಿ ಓದು



ಹು ಡು ಗಿ




ಹು ಡು ಗ




ಶಾ ಲೆ




ನೀ ರು




ಪು ಸ್ತ ಕ



ಗಿ ಡ





ಗಾ ಳಿ ಪ ಟ


ಆ ಕ ಳು






ಹು ಲ್ಲು

ಹಾ ಲು





ಕೋ ಳಿ

ಬೆ ಕ್ಕು

❖ ಚಿತ್ರಸಹಿತ ವಾಕ್ಯಗಳನ್ನು ಡ್ರಾಯಿಂಗ್ ಸೀಟಿಗೆ ಅಂಟಿಸಿ ತರಗತಿ ಕೋಣೆಯೊಳಗೆ ಮಕ್ಕಳಿಗೆ ಕಾಣಿಸುವಂತೆ ಪ್ರದರ್ಶಿಸಿ ಮಕ್ಕಳಿಂದ ಓದಿಸುವುದು. ಶಿಕ್ಷಕರು ಅಗತ್ಯ ಮಾರ್ಗದರ್ಶನ ಮತ್ತು ಸಹಾಯ ಮಾಡುವುದು



ಹುಡುಗಿ ಶಾಲೆಗೆ ಹೋಗುತ್ತಿದ್ದಾಳೆ.



ಹುಡುಗ ಶಾಲೆಗೆ ಹೋಗುತ್ತಿದ್ದಾನೆ.




ಹುಡುಗ ಹುಡುಗಿ ಶಾಲೆಗೆ ಹೋಗುತ್ತಿದ್ದಾರೆ.



ಹುಡುಗಿ ಪುಸ್ತಕ ಓದುತ್ತಿದ್ದಾಳೆ.



ಹುಡುಗ ಪುಸ್ತಕ ಓದುತ್ತಿದ್ದಾನೆ.



ಹುಡುಗಿ ಬರೆಯುತ್ತಿದ್ದಾಳೆ.



ಹುಡುಗಿ ಗಿಡ ನಾಟಿಸುತ್ತಿದ್ದಾಳೆ.



ಹುಡುಗಿ ಹುಡುಗ ಪುಸ್ತಕ ಓದುತ್ತಿದ್ದಾರೆ.




ಹುಡುಗಿ ಗಿಡಕ್ಕೆ ನೀರು ಹಾಕುತ್ತಿದ್ದಾಳೆ.



ಹುಡುಗ ಗಿಡ ನಾಟಿಸುತ್ತಿದ್ದಾನೆ.




ಹುಡುಗ ಗಾಳಿಪಟ ಹಾರಿಸುತ್ತಿದ್ದಾನೆ.



ಹುಡುಗಿ ಗಾಳಿಪಟ ಹಾರಿಸುತ್ತಿದ್ದಾಳೆ.



ಹುಡುಗ ಹುಡುಗಿ ಗಾಳಿಪಟ ಹಾರಿಸುತ್ತಿದ್ದಾರೆ.



ಹುಡುಗ ಓಡುತ್ತಿದ್ದಾನೆ.



ಹುಡುಗ ಬರೆಯುತ್ತಿದ್ದಾನೆ.




ಹುಡುಗ ಗಿಡಕ್ಕೆ ನೀರು ಹಾಕುತ್ತಿದ್ದಾಳೆ.



ಹುಡುಗಿ ಗಿಡಕ್ಕೆ ನೀರು ಹಾಕುತ್ತಿದ್ದಾಳೆ.



ಕೋಳಿ ಕಾಳನ್ನು ತಿನ್ನುತ್ತಿದೆ.




ಆಕಳು ಹುಲ್ಲನ್ನು ತಿನ್ನುತ್ತಿದೆ.



ಕೋಳಿ ನೀರನ್ನು ಕುಡಿಯುತ್ತಿದೆ.



ಆಕಳು ನೀರನ್ನು ಕುಡಿಯುತ್ತಿದೆ.



ಬೆಕ್ಕು ಹಾಲನ್ನು ಕುಡಿಯುತ್ತಿದೆ.

❖ ಚಿತ್ರಗಳನ್ನು ಬಿಡಿಬಿಡಿಯಾಗಿ ಕತ್ತರಿಸಿಕೊಂಡು, ವಾಕ್ಯಗಳನ್ನು ಬಿಡಿ ಬಿಡಿ ಪದಗಳನ್ನಾಗಿ ಕತ್ತರಿಸಿಕೊಂಡು, ಆನಂತರ ಅವುಗಳನ್ನು ಮಕ್ಕಳಿಗೆ ಮಿಶ್ರವಾಗಿ ನೀಡಿ, ಚಿತ್ರಗಳಿಗೆ ಸೂಕ್ತವಾದ ಪದಗಳ ಮಿಂಚುಪಟ್ಟಿಗಳಿಂದ ಸರಿಯಾದ ವಾಕ್ಯರಚಿಸಿ ಓದಿಸುವ ಚಟುವಟಿಕೆ ಮಾಡುವುದು. ಶಿಕ್ಷಕರು ಅಗತ್ಯ ಮಾರ್ಗದರ್ಶನ ಮತ್ತು ಸಹಾಯ ಮಾಡುವುದು.



ಹುಡುಗಿ ಶಾಲೆಗೆ ಹೋಗುತ್ತಿದ್ದಾಳೆ.



ಹುಡುಗ ಶಾಲೆಗೆ ಹೋಗುತ್ತಿದ್ದಾನೆ.




ಹುಡುಗ ಹುಡುಗಿ ಶಾಲೆಗೆ ಹೋಗುತ್ತಿದ್ದಾರೆ.



ಹುಡುಗಿ ಪುಸ್ತಕ ಓದುತ್ತಿದ್ದಾಳೆ.



ಹುಡುಗ ಪುಸ್ತಕ ಓದುತ್ತಿದ್ದಾನೆ.



ಹುಡುಗಿ ಬರೆಯುತ್ತಿದ್ದಾಳೆ.



ಹುಡುಗಿ ಗಿಡ ನಾಟಿಸುತ್ತಿದ್ದಾಳೆ.



ಹುಡುಗಿ ಹುಡುಗ ಪುಸ್ತಕ ಓದುತ್ತಿದ್ದಾರೆ.




ಹುಡುಗಿ ಗಿಡಕ್ಕೆ ನೀರು ಹಾಕುತ್ತಿದ್ದಾಳೆ.



ಹುಡುಗ ಗಿಡ ನಾಟಿಸುತ್ತಿದ್ದಾನೆ.




ಹುಡುಗ ಗಾಳಿಪಟ ಹಾರಿಸುತ್ತಿದ್ದಾನೆ.



ಹುಡುಗಿ ಗಾಳಿಪಟ ಹಾರಿಸುತ್ತಿದ್ದಾಳೆ.



ಹುಡುಗ ಹುಡುಗಿ ಗಾಳಿಪಟ ಹಾರಿಸುತ್ತಿದ್ದಾರೆ.



ಹುಡುಗ ಓಡುತ್ತಿದ್ದಾನೆ.



ಹುಡುಗ ಬರೆಯುತ್ತಿದ್ದಾನೆ.




ಹುಡುಗ ಗಿಡಕ್ಕೆ ನೀರು ಹಾಕುತ್ತಿದ್ದಾಳೆ.



ಹುಡುಗಿ ಗಿಡಕ್ಕೆ ನೀರು ಹಾಕುತ್ತಿದ್ದಾಳೆ.



ಕೋಳಿ ಕಾಳನ್ನು ತಿನ್ನುತ್ತಿದೆ.




ಆಕಳು ಹುಲ್ಲನ್ನು ತಿನ್ನುತ್ತಿದೆ.



ಕೋಳಿ ನೀರನ್ನು ಕುಡಿಯುತ್ತಿದೆ.





ಆಕಳು ನೀರನ್ನು ಕುಡಿಯುತ್ತಿದೆ.




ಬೆಕ್ಕು ಹಾಲನ್ನು ಕುಡಿಯುತ್ತಿದೆ.

❖ **ಕೆಳಗಿನ ಸರಳ ಪಠ್ಯವನ್ನು ಓದಿ ಅರ್ಥೈಸಿಕೊ.**

(ಈ ಹಿಂದಿನ ಚಟುವಟಿಕೆಗಳಲ್ಲಿ ತರಗತಿ ಕೋಣೆಯೊಳಗೆ ಪ್ರದರ್ಶಿಸಿದ ಚಿತ್ರಸಹಿತ ಪದ ಮತ್ತು ಚಿತ್ರಸಹಿತ ವಾಕ್ಯಗಳನ್ನು ಪರಿಶೀಲಿಸಿಕೊಳ್ಳಬಹುದು. ಶಿಕ್ಷಕರು ಅಗತ್ಯ ಮಾರ್ಗದರ್ಶನ ಮತ್ತು ಸಹಾಯವನ್ನು ಮಾಡುವುದು.)

 ಹುಡುಗ ಆಕಳನ್ನು ಸಾಕಿದ್ದಾನೆ.  ಹುಡುಗನ

ಆಕಳು ಹುಲ್ಲನ್ನು ತಿನ್ನುತ್ತದೆ.  ಹುಡುಗನ ಆಕಳು ಹಾಲನ್ನು ಕೊಡುತ್ತದೆ. ಹುಡುಗ

 ಹಾಲನ್ನು ಕುಡಿದು ಶಾಲೆಗೆ ಹೋಗುತ್ತಾನೆ.  ಹುಡುಗ


ಶಾಲೆಯಲ್ಲಿ ಓದುತ್ತಾನೆ.  ಹುಡುಗ ಶಾಲೆಯಲ್ಲಿ ಬರೆಯುತ್ತಾನೆ. 

ಹುಡುಗ ಶಾಲೆಯಲ್ಲಿ ಗಿಡವನ್ನು ನಾಟಿಸುತ್ತಾನೆ.  ಹುಡುಗ ಗಿಡಕ್ಕೆ ನೀರನ್ನು ಹಾಕುತ್ತಾನೆ.

❖ **ಕೆಳಗಿನ ಸರಳ ಪಠ್ಯವನ್ನು ಓದಿ ಅರ್ಥೈಸಿಕೊ.**

(ಈ ಹಿಂದಿನ ಚಟುವಟಿಕೆಗಳಲ್ಲಿ ತರಗತಿ ಕೋಣೆಯೊಳಗೆ ಪ್ರದರ್ಶಿಸಿದ ಚಿತ್ರಸಹಿತ ಪದ ಮತ್ತು ಚಿತ್ರಸಹಿತ ವಾಕ್ಯಗಳನ್ನು ಪರಿಶೀಲಿಸಿಕೊಳ್ಳಬಹುದು. ಶಿಕ್ಷಕರು ಅಗತ್ಯ ಮಾರ್ಗದರ್ಶನ ಮತ್ತು ಸಹಾಯವನ್ನು ಮಾಡುವುದು.)

 ಹುಡುಗಿ ಆಕಳನ್ನು ಸಾಕಿದ್ದಾಳೆ.  ಹುಡುಗಿಯ

ಆಕಳು ಹುಲ್ಲನ್ನು ತಿನ್ನುತ್ತದೆ.  ಹುಡುಗಿಯ ಆಕಳು ಹಾಲನ್ನು

ಕೊಡುತ್ತದೆ.  ಹುಡುಗಿ ಹಾಲನ್ನು ಕುಡಿದು ಶಾಲೆಗೆ ಹೋಗುತ್ತಾಳೆ. 

ಹುಡುಗಿ ಶಾಲೆಯಲ್ಲಿ ಓದುತ್ತಾಳೆ.  ಹುಡುಗಿ ಶಾಲೆಯಲಿ ಬರೆಯುತ್ತಾಳೆ. 

ಹುಡುಗಿ ಶಾಲೆಯಲ್ಲಿ ಗಿಡವನ್ನು ನಾಟಿಸುತ್ತಾಳೆ.  ಹುಡುಗಿ ಗಿಡಕ್ಕೆ ನೀರನ್ನು ಹಾಕುತ್ತಾಳೆ.

❖ **ಕೆಳಗಿನ ಪದ್ಯವನ್ನು ಓದಿ ಅರ್ಥೈಸಿಕೊಂಡು ಕೆಳಗೆ ನೀಡಿದ ಜಾಗದಲ್ಲಿ ಕಥೆಯ ರೂಪದಲ್ಲಿ ಬರೆ.**



ಆಮೆಯೊಂದು ಕೆರೆಯ ದಡದಿ
ಮನೆಯ ಮಾಡಿತು
ಹಕ್ಕಿಯಂತೆ ಹಾರಬೇಕು
ಎಂದು ಬಯಸಿತು
ಗೆಳೆಯ ಹಕ್ಕಿಗಳನು
ಕಂಡು ಆಸೆ ತಿಳಿಸಿತು
ಹಕ್ಕಿಯೆರಡು ಆಮೆ
ಮಾತ ಒಪ್ಪಿಕೊಂಡವು



ಅತ್ತ ಇತ್ತ ಹಕ್ಕಿಯೆರಡು

ಬಡಿಗೆ ಹಿಡಿದವು

ಆಮೆ ಅದಕೆ ಜೋತು ಬೀಳೆ

ಹಾರಿ ಹೋದವು



ದಾರಿಯಲ್ಲಿ ಇದನು ಕಂಡ

ಜನರು ನಕ್ಕರು

ಮಾನ ಹೋಯಿತೆಂದು ಆಮೆ

ಮನದಿ ಕುದಿಯಿತು



ನಕ್ಕ ಜನರ ಬೈಯಲೆಂದು

ಬಾಯಿ ತೆರೆಯಿತು



ಮೇಲಿನಿಂದ ಕೆಳಗೆ ಬಿದ್ದು

ಸತ್ತು ಹೋಯಿತು

ಒಂದು ಆಮೆಯು ಕೆರೆಯ ದಡದಲ್ಲಿ ಮನೆಯನ್ನು ಮಾಡಿತ್ತು.

❖ ಕೆಳಗಿನ ಪದ್ಯವನ್ನು ಓದಿಕೊಂಡು ನೀಡಿರುವ ಅಭ್ಯಾಸಗಳನ್ನು ಮಾಡು.



ಮಳೆ ಮಳೆ ಮಳೆ ಮಳೆ
ಮಳೆ ಇಷ್ಟ ನಮಗೆ
ಮಳೆ ಮಳೆ ಮಳೆ ಮಳೆ
ಮಳೆ ಬೇಕು ನಮಗೆ
ಮಳೆ ಮಳೆ ಮಳೆ ಮಳೆ
ಮಳೆ ಇಷ್ಟ ನಮಗೆ
ಮಳೆ ಮಳೆ ಮಳೆ ಮಳೆ
ಮಳೆ ಬೇಕು ಎಲ್ಲರಿಗೆ

ಆಕಾಶದಲ್ಲಿ ಹುಟ್ಟಿ
ಕೆಳಗಡೆ ಬೀಳತ್ತೆ
ಭೂಮಿಗೆ ಮುತ್ತಿಟ್ಟು
ನೆಲ ತಂಪು ಮಾಡುತ್ತೆ
ಮಳೆ ಮಳೆ ಮಳೆ ಮಳೆ
ಮಳೆ ಇಷ್ಟ ನಮಗೆ
ಮಳೆ ಮಳೆ ಮಳೆ ಮಳೆ
ಮಳೆ ಬೇಕು ನಮಗೆ

**ಮಳೆ ಮಳೆ ಮಳೆ ಮಳೆ**

ಮಳೆ ಇಷ್ಟ ನಮಗೆ

**ಮಳೆ ಮಳೆ ಮಳೆ ಮಳೆ**

ಮಳೆ ಬೇಕು ನಮಗೆ

**ಮಳೆ ಮಳೆ ಮಳೆ ಮಳೆ**

ಮಳೆ ಇಷ್ಟ ನಮಗೆ

**ಮಳೆ ಮಳೆ ಮಳೆ ಮಳೆ**

ಮಳೆ ಬೇಕು ಎಲ್ಲರಿಗೂ

ಆಕಾಶದಲ್ಲಿ ಹುಟ್ಟಿ

**ಓದಿ ಬರೆ**

ಕೆಳಗಡೆ ಬೀಳುತ್ತೆ

ಭೂಮಿಗೆ ಮುತ್ತಿಟ್ಟು

ನೆಲ ತಂಪು ಮಾಡುತ್ತೆ

**ಮಳೆ ಮಳೆ ಮಳೆ ಮಳೆ**

ಮಳೆ ಇಷ್ಟ ನಮಗೆ

**ಮಳೆ ಮಳೆ ಮಳೆ ಮಳೆ**

ಮಳೆ ಬೇಕು ನಮಗೆ

**ಓದಿ ಬರೆ**

ಕುಡಿಯಕ್ಕೆ ನೀರು ಕೊಡುತ್ತೆ

ಬಳಸಕ್ಕೆ ನೀರು ತರತ್ತೆ

ನೀರಿಲ್ಲದೆ ಬೆಳೆ ಇಲ್ಲ


ನೀರಿಲ್ಲದೆ ಬದುಕಿಲ್ಲ

**ಮಳೆ ಮಳೆ ಮಳೆ ಮಳೆ**

ಮಳೆ ಇಷ್ಟ ನಮಗೆ



**ಓದಿ ಬರೆ**




**ಮಳೆ ಮಳೆ ಮಳೆ ಮಳೆ**

**ಮಳೆ ಬೇಕು ನಮಗೆ**

ಪುಟ್ಟ ಹನಿ ಬಿದ್ದಾಗ

ಮಳೆಯಲ್ಲಿ ಆಡುವೆ

ದೊಡ್ಡ ಹನಿ ಬಿದ್ದರೆ

ಮನೆಯೊಳಗೆ ಓಡುವೆ

**ಮಳೆ ಮಳೆ ಮಳೆ ಮಳೆ**

**ಮಳೆ** ಇಷ್ಟ ನಮಗೆ

**ಮಳೆಮಳೆಮಳೆಮಳೆ**

**ಮಳೆ** ಬೇಕು ನಮಗೆ

**ಮಳೆ ಮಳೆ ಮಳೆ ಮಳೆ**

**ಮಳೆ** ಇಷ್ಟ ನಮಗೆ

**ಮಳೆ ಮಳೆ ಮಳೆ ಮಳೆ**

**ಮಳೆ** ಬೇಕು ಎಲ್ಲರಿಗೂ

ಕುಡಿಯಕ್ಕೆ ನೀರು ಕೊಡುತ್ತೆ

ಬಳಸಕ್ಕೆ ನೀರು ತರತ್ತೆ

ನೀರಿಲ್ಲದೆ ಬೆಳೆ ಇಲ್ಲ

ನೀರಿಲ್ಲದೆ ಬದುಕಿಲ್ಲ

**ಮಳೆ ಮಳೆ ಮಳೆ ಮಳೆ**

**ಮಳೆ** ಇಷ್ಟ ನಮಗೆ

**ಮಳೆ ಮಳೆ ಮಳೆ ಮಳೆ**

**ಮಳೆ** ಬೇಕು ನಮಗೆ

## ಓದಿ ಬರೆ

❖ **ಬಾಕ್ಸನಲ್ಲಿನ ಪದಗಳನ್ನು ಓದಿ ಖಾಲಿ ಜಾಗದಲ್ಲಿ ಬರೆ**

____________ ಹುಟ್ಟಿ

ಕೆಳಗಡೆ ____________

______________ಮುತ್ತಿಟ್ಟು

______________ ತಂಪು ಮಾಡುತ್ತೆ

| | |
|---|---|
| ಆಕಾಶದಲ್ಲಿ | ನೆಲ |
| ಬೀಳುತ್ತೆ | ಭೂಮಿಗೆ |

❖ **ಕೆಳಗಿನ ಬಾಕ್ಸನಲ್ಲಿನ ಪದಗಳನ್ನು ಓದಿ ಖಾಲಿ ಜಾಗದಲ್ಲಿ ಬರೆ**

______________ನೀರು ಕೊಡುತ್ತೆ

________________ನೀರು ತರತ್ತೆ

ನೀರಿಲ್ಲದೆ ______________

_____________ಬದುಕಿಲ್ಲ

| | |
|---|---|
| ಬೆಳೆ ಇಲ್ಲ | ನೀರಿಲ್ಲದೆ |
| ಕುಡಿಯಕ್ಕೆ | ಬಳಸಕ್ಕೆ |

❖ **ಕೆಳಗಿನ ಬಾಕ್ಸನಲ್ಲಿನ ಪದಗಳನ್ನು ಓದಿ ಖಾಲಿ ಜಾಗದಲ್ಲಿ ಬರೆ**

_______________ ಬಿದ್ದಾಗ

ಮಳೆಯಲ್ಲಿ ___________

________________ಬಿದ್ದರೆ

ಮನೆಯೊಳಗೆ _______________

| | |
|---|---|
| ಆಡುವೆ | ದೊಡ್ಡ ಹನಿ |
| ಪುಟ್ಟ ಹನಿ | ಓಡುವೆ |

❖ **ಕೆಳಗಿನ ಪದಗಳನ್ನು ಓದು ಮತ್ತು ಅರ್ಥ ತಿಳಿ. ಯಾವುದಾದರೂ ಎರಡು ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆ**

| | | | |
|---|---|---|---|
| ಬೆಳೆ | ಹೊಳೆ | ತೊಳೆ | ಮೊಳೆ |
| ಕಳೆ | ಇಳೆ | ನಾಳೆ | ಎಳೆ |

______________________________________________

______________________________________________

______________________________________________

❖ ಕೆಳಗಿನ ಸನ್ನಿವೇಶ ಚಿತ್ರವನ್ನು ಗಮನಿಸಿ, ಆಯಾ ಸಂಖ್ಯೆಯ ಚಿತ್ರಗಳಿಗೆ ಸಂಬಂಧಿಸಿದ




ವಾಕ್ಯಗಳನ್ನು ಕ್ರಮವಾಗಿ ಬರೆ.

## 1.4 ಮಳೆ ಪದ್ಯದಂತೆ 'ಬೆಳೆ' ಪದ್ಯ ರಚಿಸು

'ಬೆಳೆ'

## 4ನೇ ಮತ್ತು 5ನೇ ತರಗತಿ ಪ್ರಕ್ರಿಯೆಗಳು

**ಥೀಮ್: ಅರ್ಥೈಸಿಕೊಳ್ಳುತ್ತಾ ಓದುವ ಕೌಶಲ ಬೆಳೆಸುವುದು. (ರೀಡಿಂಗ್ ವಿತ್ ಕಾಂಪ್ರೆಹೆನಷೆನ್)**

❖ **ಸರಣಿ ಚಿತ್ರ ಸನ್ನಿವೇಶ ಕಥೆಯನ್ನು ಓದಿ ಹೇಳು.**





## 2.2 ಸರಣಿ ಚಿತ್ರ ಸನ್ನಿವೇಶ ನೋಡಿ ಕಥೆಯನ್ನು ಓದಿ ಹೇಳು

| | |
|---|---|
|  |  |
| ಒಂದು ಅಡವಿಯಲ್ಲಿ ಒಂದು ನದಿಯು ಹರಿಯುತ್ತಿತ್ತು | ಆ ನದಿಯ ದಡದಲ್ಲಿ ಒಂದು ಮರವಿತ್ತು |
|  |  |
| ಆ ಮರದ ಮೇಲೆ ಒಂದು ಪಾರಿವಾಳವು ಕುಳಿತ್ತಿತ್ತು | ಆ ಪಾರಿವಾಳವು ನದಿಯಲ್ಲಿ ತೇಲುತ್ತ ಮುಳುಗುತ್ತ ಇದ್ದ ಇರುವೆಯನ್ನು ನೋಡಿತು. |



ಆ ಇರುವೆಯನ್ನು ಬದುಕಿಸಲೆಂದು ಪಾರಿವಾಳವು ಒಂದು ಎಲೆಯನ್ನು ನದಿಗೆ ಎಸೆಯಿತು.



ಇರುವೆಯು ಎಲೆಯ ಮೇಲೆ ಕುಳಿತು ದಡ ಸೇರಿತು.



ಇರುವೆಯು ಪಾರಿವಾಳದ ಉಪಕಾರವನ್ನು ಸ್ಮರಿಸಿತು.



ಒಮ್ಮೆ ಒಬ್ಬ ಬೇಟೆಗಾರನು ಪಾರಿವಾಳವನ್ನು ಕೊಲ್ಲಲು ಬಾಣದಿಂದ ಗುರಿ ಇಟ್ಟನು.




ಇದನ್ನು ನೋಡಿದ ಇರುವೆಯು ಬೇಟೆಗಾರನ ಕಾಲನ್ನು ಕಚ್ಚಿತು.



ಬೇಟೆಗಾರನು ಇಟ್ಟ ಬಾಣದ ಗುರಿ ತಪ್ಪಿತು. ಪಾರಿವಾಳವು ಬದುಕಿತು..



ಈ ರೀತಿ ಇರುವೆಯು ಪಾರಿವಾಳಕ್ಕೆ ಪ್ರತ್ಯುಪಕಾರ ಮಾಡಿತು.

❖ ಚಿತ್ರವನ್ನು ಬಳಸಿ ಕಥೆಯನ್ನು ಓದಿ ಹೇಳು

ಒಂದು ಅಡವಿಯಲ್ಲಿ ಒಂದು  ಹರಿಯುತ್ತಿತ್ತು. ಆ ನದಿಯ ದಡದಲ್ಲಿ ಒಂದು  ವಿತ್ತು. ಆ ಮರದ ಮೇಲೆ ಒಂದು  ವು ಕುಳಿತಿತ್ತು. ಆ ಪಾರಿವಾಳವು ನದಿಯಲ್ಲಿ ತೇಲುತ್ತಾ ಮುಳುಗುತ್ತಾ ಇದ್ದ  ಯನ್ನು ನೋಡಿತು. ಆ ಇರುವೆಯನ್ನು ಬದುಕಿಸಲೆಂದು  ವು ಒಂದು  ಯನ್ನು ನದಿಗೆ ಎಸೆಯಿತು.  ಯು  ಯ ಮೇಲೆ ಕುಳಿತು ದಡ ಸೇರಿತು.  ಯು  ದ ಉಪಕಾರವನ್ನು ಸ್ಮರಿಸಿತು.

ಒಮ್ಮೆ ಒಬ್ಬ  ನು  ವನ್ನು ಕೊಲ್ಲಲು  ದಿಂದ ಗುರಿ ಇಟ್ಟನು. ಇದನ್ನು ನೋಡಿದ  ಯು ಬೇಟೆಗಾರನ ಕಾಲನ್ನು ಕಚ್ಚಿತು.  ನು ಇಟ್ಟ ಬಾಣದ ಗುರಿ ತಪ್ಪಿತು.  ವು ಬದುಕಿತು. ಈ ರೀತಿ  ಯು  ಕ್ಕೆ ಪ್ರತ್ಯುಪಕಾರ ಮಾಡಿತು.

©KTBS
Not to be republished

❖ ಕೆಳಗಿನ ಪರಿಚ್ಛೇದಗಳನ್ನು ಓದಿಕೊಂಡು ಕ್ರಮಾನುಸಾರ ಜೋಡಿಸು

ಒಮ್ಮೆ ಒಬ್ಬ  ನು  ವನ್ನು ಕೊಲ್ಲಲು  ದಿಂದ ಗುರಿ ಇಟ್ಟನು. ಇದನ್ನು ನೋಡಿದ  ಯು ಬೇಟೆಗಾರನ ಕಾಲನ್ನು ಕಚ್ಚಿತು.  ನು ಇಟ್ಟ ಬಾಣದ ಗುರಿ ತಪ್ಪಿತು.  ವು ಬದುಕಿತು. ಈ ರೀತಿ  ಯು  ಕ್ಕೆ ಪ್ರತ್ಯುಪಕಾರ ಮಾಡಿತು.

ನದಿಯಲ್ಲಿ ತೇಲುತ್ತಾ ಮುಳುಗುತ್ತಾ ಇದ್ದ  ಯನ್ನು ನೋಡಿತು. ಆ ಇರುವೆಯನ್ನು ಬದುಕಿಸಲೆಂದು  ವು ಒಂದು  ಯನ್ನು ನದಿಗೆ ಎಸೆಯಿತು. 

ಒಂದು ಅಡವಿಯಲ್ಲಿ ಒಂದು  ಹರಿಯುತ್ತಿತ್ತು. ಆ ನದಿಯ ದಡದಲ್ಲಿ ಒಂದು  ವಿತ್ತು. ಆ ಮರದ ಮೇಲೆ ಒಂದು  ವು ಕುಳಿತಿತ್ತು. ಆ ಪಾರಿವಾಳವು

ಯು  ಯ ಮೇಲೆ ಕುಳಿತು ದಡ ಸೇರಿತು.  ಯು  ದ ಉಪಕಾರವನ್ನು ಸ್ಮರಿಸಿತು.

Not to be republished ©KTBS

❖ ಕೆಳಗಿನ ಕಥೆಯನ್ನು ಓದಿಕೊಂಡು ಖಾಲಿ ಬಿಟ್ಟಿರುವ ಜಾಗದಲ್ಲಿ ಚಿತ್ರಗಳನ್ನು ಬಳಸಿ ಕಥೆ ಪೂರ್ಣ ಗೊಳಿಸು

ಒಂದು ಅಡವಿಯಲ್ಲಿ ಒಂದು ______ ಹರಿಯುತ್ತಿತ್ತು. ಆ ನದಿಯ

ದಡದಲ್ಲಿ ಒಂದು ______ ಐತ್ತು. ಆ ಮರದ ಮೇಲೆ ಒಂದು

______ ವು ಕುಳಿತ್ತಿತ್ತು ಆ ಪಾರಿವಾಳವು ನದಿಯಲ್ಲಿ ತೇಲುತ್ತ

ಮುಳುಗುತ್ತ ಇದ್ದ ______ ಯನ್ನು ನೋಡಿತು.

ಆ ಇರುವೆಯನ್ನು ಬದುಕಿಸಲೆಂದು ______ ವು ಒಂದು

ಯನ್ನು ನದಿಗೆ ಎಸೆಯಿತು. ಯು

ಯ ಮೇಲೆ ಕುಳಿತು ದಡ ಸೇರಿತು.

ಯು ದ ಉಪಕಾರವನ್ನು ಸ್ಮರಿಸಿತು. ಒಮ್ಮೆ ಒಬ್ಬ


ನು ವನ್ನು ಕೊಲ್ಲಲು

ದಿಂದ ಗುರಿ ಇಟ್ಟನು. ಇದನ್ನು ನೋಡಿದ ಯು ಬೇಟೆಗಾರನ

ಕಾಲನ್ನು ಕಚ್ಚಿತು. ನು ಇಟ್ಟ ಬಾಣದ ಗುರಿ ತಪ್ಪಿತು.

ವು ಬದುಕಿತು. ಈ ರೀತಿ ಯು

ಕ್ಕೆ ಪ್ರತ್ಯುಪಕಾರ ಮಾಡಿತು.



❖ **ಚಿತ್ರಗಳ ಜಾಗದಲ್ಲಿ ಕೆಳಗೆ ಬಾಕ್ಸನಲ್ಲಿರುವ ಪದ ಬಳಸಿ ಕಥೆಯನ್ನು ಓದಿ ಹೇಳು**

ಒಂದು ಅಡವಿಯಲ್ಲಿ ಒಂದು  ಹರಿಯುತ್ತಿತ್ತು. ಆ ನದಿಯ ದಡದಲ್ಲಿ ಒಂದು  ವಿತ್ತು. ಆ ಮರದ ಮೇಲೆ ಒಂದು  ವು ಕುಳಿತಿತ್ತು. ಆ ಪಾರಿವಾಳವು ನದಿಯಲ್ಲಿ ತೇಲುತ್ತಾ ಮುಳುಗುತ್ತಾ ಇದ್ದ  ಯನ್ನು ನೋಡಿತು. ಆ ಇರುವೆಯನ್ನು ಬದುಕಿಸಲೆಂದು  ವು ಒಂದು  ಯನ್ನು ನದಿಗೆ ಎಸೆಯಿತು.  ಯು  ಯ ಮೇಲೆ ಕುಳಿತು ದಡ ಸೇರಿತು.  ಯು  ದ ಉಪಕಾರವನ್ನು ಸ್ಮರಿಸಿತು.

ಒಮ್ಮೆ ಒಬ್ಬ  ನು  ವನ್ನು ಕೊಲ್ಲಲು  ದಿಂದ ಗುರಿ ಇಟ್ಟನು. ಇದನ್ನು ನೋಡಿದ  ಯು ಬೇಟೆಗಾರನ ಕಾಲನ್ನು ಕಚ್ಚಿತು.  ನು ಇಟ್ಟ ಬಾಣದ ಗುರಿ ತಪ್ಪಿತು.  ವು ಬದುಕಿತು. ಈ ರೀತಿ  ಯು  ಕ್ಕೆ ಪ್ರತ್ಯುಪಕಾರ ಮಾಡಿತು.

| | | | |
|---|---|---|---|
| ಪಾರಿವಾಳ | ಪಾರಿವಾಳ | ಪಾರಿವಾಳ | ಪಾರಿವಾಳ |
| ಬಾಣ | ಬೇಟೆಗಾರ | ಇರುವೆ | ಇರುವೆ |
| ಇರುವೆ | ಇರುವೆ | ಇರುವೆ | ಇರುವೆ |


©KTBS Not to be republished

| | | | |
|---|---|---|---|
| ಮರ | ನದಿ | ಇರುವೆ | ಪಾರಿವಾಳ |
| ಬೇಟೆಗಾರ | | | |

❖ **ಸರಣಿ ಚಿತ್ರ ಸನ್ನಿವೇಶ ನೋಡಿ ಕೆಳಗಿನ ವಾಕ್ಯಗಳನ್ನು ಜೋಡಿಸಿ ಕಥೆಯನ್ನು ಬರೆ.**



ಆ ಇರುವೆಯನ್ನು ಬದುಕಿಸಲೆಂದು ಪಾರಿವಾಳವು ಒಂದು ಎಲೆಯನ್ನು ನದಿಗೆ ಎಸೆಯಿತು.



ಆ ಪಾರಿವಾಳವು ನದಿಯಲ್ಲಿ ತೇಲುತ್ತ ಮುಳುಗುತ್ತ ಇದ್ದ ಇರುವೆಯನ್ನು ನೋಡಿತು.




ಇರುವೆಯು ಎಲೆಯ ಮೇಲೆ ಕುಳಿತು ದಡ ಸೇರಿತು.



ಆ ಮರದ ಮೇಲೆ ಒಂದು ಪಾರಿವಾಳವು ಕುಳಿತ್ತಿತ್ತು.



ಇರುವೆಯು ಪಾರಿವಾಳದ ಉಪಕಾರವನ್ನು ಸ್ಮರಿಸಿತು.



ಒಮ್ಮೆ ಒಬ್ಬ ಬೇಟೆಗಾರನು ಪಾರಿವಾಳವನ್ನು ಕೊಲ್ಲಲು ಬಾಣದಿಂದ ಗುರಿ ಇಟ್ಟನು.



ಇದನ್ನು ನೋಡಿದ ಇರುವೆಯು ಬೇಟೆಗಾರನ ಕಾಲನ್ನು ಕಚ್ಚಿತು.



ಈ ರೀತಿ ಇರುವೆಯು ಪಾರಿವಾಳಕ್ಕೆ ಪ್ರತ್ಯುಪಕಾರ ಮಾಡಿತು.



ಆ ನದಿಯ ದಡದಲ್ಲಿ ಒಂದು ಮರವಿತ್ತು



ಇದನ್ನು ನೋಡಿದ ಇರುವೆಯು ಬೇಟೆಗಾರನ ಕಾಲನ್ನು ಕಚ್ಚಿತು.



ಒಂದು ಅಡವಿಯಲ್ಲಿ ಒಂದು ನದಿಯು ಹರಿಯುತ್ತಿತ್ತು

❖ ಸರಿಯಾದ ವಾಕ್ಯವನ್ನು ಆಯ್ದು ಬರೆ:

**1)**

- ಇರುವೆಯು ಪಾರಿವಾಳದ ಅಪಕಾರವನ್ನು ಸ್ಮರಿಸಿತು
- ಇರುವೆಯು ಪಾರಿವಾಳದ ಉಪಕಾರವನ್ನು ಸ್ಮರಿಸಿತು

**2)**

- ಒಂದು ಅಡವಿಯಲ್ಲಿ ಒಂದು ನದಿಯು ಹರಿಯುತ್ತಿತ್ತು
- ಒದು ಅಡವಿಯಲ್ಲಿ ಒಂದು ನದಿಯು ಹರಿಯುತ್ತಿತ್ತು




3)

- ಆ ಮರದ ಮೇಲೆ ಒಂದು ಪಾರಿವಾಳವು ಕುಳಿತ್ತಿತ್ತು
- ಒಂದು ಪಾರಿವಾಳವು ಕುಳಿತ್ತಿತ್ತು ಆ ಮರದ ಮೇಲೆ

4)

- ಈ ರೀತಿ ಇರುವೆಯು ಪಾರಿವಾಳಕ್ಕೆ ಪ್ರತ್ಯುಪಕಾರ ಮಾಡಿತು.
- ಈ ರೀತಿ ಇರುವೆಯು ಪಾರಿವಾಳಕ್ಕೆ ಪ್ಯತ್ರುಪಕಾರ ಮಾಡಿತು.

**ಚಿತ್ರ ನೋಡಿ ಪದ ಬರೆ:**





❖ **ಓದಿ ಉತ್ತರಿಸು.**

1. ಇರುವೆಯನ್ನು ಬದುಕಿಸಲು ಪಾರಿವಾಳ ಏನು ಮಾಡಿತು?

2. ಈ ಕಥೆಯಲ್ಲಿರುವ ಪಾತ್ರಗಳು ಯಾವುವು? ಪಾತ್ರಗಳಲ್ಲಿ ನಿನಗೆ ಯಾವ ಪಾತ್ರ ಇಷ್ಟ? ಏಕೆ?

3. ಪಾರಿವಾಳವು ಇರುವೆಯನ್ನು ಉಳಿಸಲು ಬೇರೆ ರೀತಿಯಲ್ಲಿ ಸಹಾಯ ಮಾಡಬಹುದಾದರೆ ಹೇಗೆ ಸಹಾಯ ಮಾಡಬಹುದು?

4. ಇರುವೆಯನ್ನು ಎಲ್ಲಿ ನೋಡಿರುವೆ ನೀನು ನೋಡಿದಂತೆ ಅವುಗಳ ಸದ್ಗುಣ ಕುರಿತು ಬರೆ.

❖ **ಕೆಳಗಿನ ಕಥೆಯನ್ನು ಓದಿ, ಕೇಳಿರುವ ಪ್ರಶ್ನೆಗಳಿಗೆ ಉತ್ತರಿಸು.**

ಒಂದು ನದಿಯಲ್ಲಿ ಒಂದು ಮೊಸಳೆಯಿತ್ತು. ಅದು ಮುದಿಯಾಗಿತ್ತು. ಪ್ರಾಣಿಗಳನ್ನು ಬೇಟೆಯಾಡಿ ತಿನ್ನಲು ಸಾಧ್ಯವಾಗುತ್ತಿರಲಿಲ್ಲ. ಆದುದರಿಂದ ಅದು ನರಿಯನ್ನು ಕರೆದು,"ನರಿರಾಯ, ನೀನು ಇನ್ನು ಮೇಲೆ ನನ್ನ ಮಂತ್ರಿ. ನಿನ್ನ ಕೆಲಸವೇನೆಂದರೆ ನಂಗೆ ದಿನಕ್ಕೊಂದು ಪ್ರಾಣಿನ ಆಹಾರವಾಗಿ ತಂದುಕೊಡೋದು" ಎಂದಿತು. ಅಳಿದುಳಿದ ಮಾಂಸ ತನಗೆ ಸಿಗುವುದೆಂಬ ಆಸೆಯಿಂದ ನರಿ "ಆಗಲಿ" ಎಂದಿತು.

ನದಿ ತೀರದ ಮರಳಿನ ಮೇಲೆ ಮೊಸಳೆ ಬಿಸಲಿಗೆ ಮೈ ಕಾಯಿಸಿಕೊಳ್ಳುತ್ತಾ ಮಲಗಿತ್ತು. ನರಿ ಪ್ರಾಣಿಯನ್ನು ಹುಡುಕಿ ಕೊಂಡು ಕಾಡಿನೊಳಗೆ ಹೋಯಿತು. ಅದರ ಎದುರಿಗೆ ಮೊಲವೊಂದು ಸಿಕ್ಕಿದಾಗ ನರಿ,"ಮೊಲರಾಯ, ಮೊಸಳೆ ನಿನ್ನ ಹತ್ತಿರ ಮಾತಾಡಬೇಕಂತೆ. ಬಾ" ಎಂದು ಕರೆಯಿತು. ಇದರಲ್ಲೇನೋ ಮೋಸವಿದೆಯೆಂದು ತಿಳಿದ ಮೊಲ,"ಮೊಸಳೆನ ಕಂಡ್ರೆ ನಂಗೆ ಹೆದರಿಕೆಯಪ್ಪ! ನಾನು ಬರಲ್ಲ" ಎಂದು ದೂರದಿಂದಲೇ ಹೇಳಿತು. ಮರುದಿನ ನರಿ ಒಂದು ಉಪಾಯ ಯೋಚಿಸಿತು. ಮೊಸಳೆಯನ್ನು ಮರವೊಂದರ ಕೆಳಗೆ ಮಲಗಿಸಿ ಅದರ ಮೇಲೆ ಕಾಡಿನ ಹೂಗಳನ್ನು ಹಾಕಿ."ಮೊಲ ಬಂದಾಗ ನೀನು ಅಲುಗಾಡದೆ ಸತ್ತಹಾಗೆ ಮಲಗಿಕೊಂಡಿರು. ಅದು ಹತ್ತಿರ ಬಂದಾಗ ಗಬ್ಬಕ್ಕನೆ ತಿನ್ನು" ಎಂದು ಬೋಧಿಸಿತು. ಮೊಸಳೆ ಸಂತೋಷದಿಂದ ಒಪ್ಪಿಕೊಂಡಿತು.

ನರಿ ಮೊಲದ ಬಳಿಗೆ ಹೋಗಿ,"ಮೊಲರಾಯಾ, ನನ್ನ ರಾಜ ಮೊಸಳೆ ಸತ್ತುಹೋಯ್ತು. ಈಗಲಾದರೂ ಅದನ್ನು ಬಂದು ನೋಡು" ಎಂದು ಕಣ್ಣಿರು ಸುರಿಸುತ್ತಾ ಹೇಳಿತು. ಮೊಲ ಅದನ್ನು ನಿಜವೆಂದು ನಂಬಿ, ನರಿಯ ಜೊತೆಗೆ ತುಸು ದೂರಬಂದು ದೂರದಿಂದಲೇ ಮರದ ಕೆಳಗೆ ಮಲಗಿದ್ದ ಮೊಸಳೆಯನ್ನು ದಿಟ್ಟಿಸಿತು. ಅನಂತರ ಕೇಳಿತು:"ನರಿರಾಯಾ, ನೀನು ಹೇಳೋದೆಲ್ಲ ಸರಿಯೇ! ಆದ್ರೆ ನಮ್ಮ ಪೂರ್ವಿಕರು ಹೇಳುತ್ತಿದ್ದರು, ಸತ್ತ ಮೊಸಳೆಗಳು ಬಾಲ ಅಲ್ಲಾಡಿಸ್ತಾ ಇರುತ್ತವೆ ಅಂತ. ಈ ಮೊಸಳೆ ಸುಮ್ಮನೆ ಮಲಕ್ಕೊಂಡಿದೆಯಲ್ಲಾ!".

ಮೊಲ ಅಷ್ಟು ಹೇಳಿದ್ದೆ ತಡ, ಮೊಸಳೆ ತನ್ನ ಬಾಲವನ್ನು ಎತ್ತಿಆಡಿಸಲಾರಂಭಿಸಿತು. ನಿಜಸ್ಥಿತಿ ಗೊತ್ತಾದ ಮೊಲ ಕಾಡಿನೊಳಗೆ ಓಟಕಿತ್ತಿತು.

1. ಈ ಮೇಲಿನ ಕಥೆಯಲ್ಲಿ ಬರುವ ಪ್ರಮುಖ ಪಾತ್ರಗಳು ಯಾವುವು? ಮತ್ತು ಅವುಗಳಲ್ಲಿ ನಿಮಗೆ ಇಷ್ಟವಾದ ಪಾತ್ರ ಯಾವುದು ಮತ್ತು ಏಕೆ?

2. ಈ ಕಥೆಯಲ್ಲಿ ಬಂದಿರುವ ನರಿಯ ಪಾತ್ರದ ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

3. ಒಂದು ವೇಳೆ ನೀವು ಮೊಲದ ಜಾಗದಲ್ಲಿ ಇದ್ದಿದ್ದರೆ ನರಿಯಿಂದ ತಪ್ಪಿಸಿಕೊಳ್ಳಲು ಹೇಗೆ ಉಪಾಯ ಮಾಡುತ್ತಿದ್ದಿರಿ. ಸನ್ನಿವೇಶ ಸಹಿತ ವಿವರಿಸಿ.

4. ಈ ಕಥೆ ನಡೆದಿರಬಹುದಾದ ಜಾಗದ ಸನ್ನಿವೇಷದ ಕುರಿತು ಕನಿಷ್ಟ 10 ವಾಕ್ಯಗಳಲ್ಲಿ ಬರೆಯಿರಿ.

5. ಮೊಸಳೆಯ ಕುರಿತು ಟಿಪ್ಪಣಿ ಬರೆಯಿರಿ.

6. ತನ್ನ ಹಸಿವನ್ನು ತೀರಿಸಿಕೊಳ್ಳಲು
ಮೊಸಳೆ ಮತ್ತು ನರಿ ಮಾಡಿದ ಉಪಾಯ ಸರಿಯೇ? ಕಾರಣ ಸಹಿತ ವಿವರಿಸಿ.

8. ಮೇಲಿನ ಕಥೆಗೆ ಒಂದು ಶೀರ್ಷಿಕೆ ನೀಡಿ ಆ ಶೀರ್ಷಿಕೆ ನೀಡಲು ಕಾರಣ ತಿಳಿಸಿ.

❖ **ಕಥೆಯನ್ನು ಮೊದಲು ಶಿಕ್ಷಕರು ಎಲ್ಲಾ ಮಕ್ಕಳಿಗೆ ಮೌಖಿಕವಾಗಿ ಅರ್ಥೈಸಿ, ಚರ್ಚಿಸುವುದು. ನಂತರ ಕೆಳಗಿನ ಓದಿ ಅರ್ಥೈಸಿಕೊಳ್ಳುವ ಚಟುವಟಿಕೆಗಳನ್ನು ಮಾಡಿಸುತ್ತಾ ಹೋಗುವುದು.)**

***ಬಾಕ್ಸಿನಲ್ಲಿರುವುದನ್ನು ಓದಿ, ಕೆಳಗಿನ ಚಿತ್ರವನ್ನು ಹೋಲಿಸಿಕೊ.***

ಒಬ್ಬನು ಕುರಿಗಳನ್ನು ಸಾಕಿದ್ದನು. ಅವುಗಳನ್ನು ಮೇಯಿಸಲು ಅಡವಿಗೆ ಹೊಡೆದುಕೊಂಡು ಹೋಗಿದ್ದನು. ಕುರಿಗಳಲ್ಲಿ ಒಂದು ಮುದ್ದಾದ ಕುರಿಮರಿ ಇತ್ತು.



**ಕೆಳಗಿನ ಬಾಕ್ಸಿನಲ್ಲಿರುವ ವಿಷಯವನ್ನು ಓದಿ ಅರ್ಥೈಸಿಕೊಂಡು, ಸೂಕ್ತ ಚಿತ್ರವನ್ನು ಗುರುತಿಸಿಕೊ**





ಕುರಿಮರಿಯು ಕುರಿಗಳ ಜೊತೆಗೆ ತಿರುಗಾಡುತ್ತಾ ಮೇಯುತ್ತಿರುವಾಗ ದಾರಿ ತಪ್ಪಿಸಿಕೊಂಡಿತು. ಎಲ್ಲಾ ಕುರಿಗಳು ಒಂದು ದಾರಿಯಲ್ಲಿ ಮೇಯುತ್ತಾ ಹೋದವು. ಕುರಿಮರಿಯು ತಾನೊಂದೇ ಬೇರೆ ದಾರಿಯಲ್ಲಿ ಬಹಳಷ್ಟು ದೂರ ಮೇಯುತ್ತಾ ಹೋಯಿತು.





.

**ಕೆಳಗಿನ ಚಿತ್ರವನ್ನು ಗ್ರಹಿಸಿಕೊಂಡು, ಅದಕ್ಕೆ ಸೂಕ್ತವಾದ ಪರಿಚ್ಛೇದವನ್ನು ಆಯ್ಕೆ ಮಾಡಿಕೊ.**

ಸ್ವಲ್ಪ ಸಮಯದ ನಂತರ ಕುರಿಮರಿಗೆ ಭಯವಾಯಿತು. ಅದು ಉಳಿದ ಕುರಿಗಳನ್ನು ಕೂಗಿತು. ಆಗ ಎಲ್ಲಾ ಕುರಿಗಳು ಆ ಕುರಿಮರಿಯ ಹತ್ತಿರ ಓಡಿ ಬಂದವು. ಆ ಕುರಿಮರಿಯನ್ನು ತಮ್ಮೊಂದಿಗೆ ಕರೆದುಕೊಂಡು ಹೋದವು.



ಸ್ವಲ್ಪ ಸಮಯದ ನಂತರ ಕುರಿ ಕಾಯುವವನು ಆ ಕುರಿಮರಿಯನ್ನು ಹುಡುಕುತ್ತಾ ಅಡವಿಯ ತುಂಬಾ ತಿರುಗಾಡಿದನು. ಆದರೆ ಕುರಿಮರಿ ಸಿಗಲಿಲ್ಲ. ಆಗ ಅವನು ಒಂದು ಮರದ ಕೆಳಗೆ ನಿಂತು ಕುರಿಮರಿಗೆ ಜೋರಾಗಿ ಕೂಗುತ್ತಾ ನಿಂತುಕೊಂಡನು.

ಸ್ವಲ್ಪ ಸಮಯದ ನಂತರ ಕುರಿಮರಿಗೆ ಭಯವಾಯಿತು. ಇತರ ಕುರಿಗಳನ್ನು ಕೂಗಿ ಕರೆಯಿತು. ಆದರೆ ಯಾವ ಕುರಿಗೂ ಕೇಳಿಸಲಿಲ್ಲ. ಒಂದು ತೋಳವು ಈ ಕುರಿಮರಿಯ ಕೂಗನ್ನು ಕೇಳಿಸಿಕೊಂಡಿತು.

**ಬಾಕ್ಸಿನಲ್ಲಿರುವ ವಿಷಯವನ್ನು ಓದಿಕೊಂಡು, ಸೂಕ್ತ ಚಿತ್ರವನ್ನು ಗುರುತಿಸಿಕೊ.**





ಕುರಿಮರಿಯ ಕೂಗು ಕೇಳಿಸಿದ ದಿಕ್ಕಿಗೆ ತೋಳವು ಓಡಿತು. ಸ್ವಲ್ಪ ದೂರ ಹೋದ ನಂತರ ಅಲ್ಲಿ ಕುರಿಮರಿ ಇರುವುದನ್ನು ನೋಡಿತು. ಆಗ ಆ ಕುರಿಮರಿಯ ಮುಂದೆ ನಿಂತು, ನನಗೆ ತುಂಬಾ ಹೊಟ್ಟೆ ಹಸಿದಿದೆ. ನಿನ್ನನ್ನು ತಿಂದು ನನ್ನ ಹೊಟ್ಟೆ ತುಂಬಿಸಿಕೊಳ್ಳುತ್ತೇನೆ ಎಂದಿತು.





**ಕೆಳಗಿನ ಚಿತ್ರದಲ್ಲಿ ಏನು ನಡೆಯುತ್ತಿದೆ ಎಂದು ಊಹಿಸಿ, ನಂತರ ಬಾಕ್ಸಿನಲ್ಲಿರುವ ವಿಷಯವನ್ನು ಓದು.**



ತೋಳದ ಮಾತನ್ನು ಕೇಳಿ, ಕುರಿಮರಿ ಅಂಜಿ ನಡುಗಲು ಪ್ರಾರಂಭಿಸಿತು. ಅಂಜುವುದರ ಜೊತೆಗೆ ಒಂದು ಉಪಾಯವನ್ನು ಮಾಡಿತು. ಆಗ ತನ್ನ ಹತ್ತಿರ ಇರುವ ಕೊಳಲನ್ನು ತೋಳಕ್ಕೆ ಕೊಟ್ಟಿತು. ತೋಳಣ್ಣ ಈ ಕಾಡಿನಲ್ಲಿ ಎಲ್ಲಾ ಪ್ರಾಣಿಗಳು ನೀನು ಬಹಳ ಸುಮಧುರವಾಗಿ ಹಾಡುತ್ತಿಯಾ ಎಂದು ಹೇಳಿದ್ದನ್ನು ನಾನು ಕೇಳಿದ್ದೇನೆ. ಈಗ ನಾನು ಸಾಯುವ ಮುನ್ನ ನಿನ್ನಿಂದ ಒಂದು ಸುಮಧುರವಾದ ಹಾಡನ್ನು ಕೇಳಲು ಆಸೆಪಡುತ್ತಿದ್ದೇನೆ. ದಯವಿಟ್ಟು ಈ ಕೊಳನ್ನು ಊದುತ್ತಾ ಹಾಡನ್ನು ಹಾಡು. ಆನಂತರ ನನ್ನನ್ನು ನೀನು ತಿನ್ನು ಎಂದಿತು. ಆಗ ತೋಳ ಖುಷಿಯಾಗಿ ಜೋರಾಗಿ ಕೊಳಲನ್ನು ಊದುತ್ತಾ ಹಾಡಲು ಶುರು ಮಾಡಿತು.

**ಕೆಳಗಿನ ಚಿತ್ರದಲ್ಲಿ ಏನಾಗುತ್ತಿದೆ ಎಂಬುದನ್ನು ಕಲ್ಪಿಸಿಕೊಂಡು, ಬಾಕ್ಸಿನಲ್ಲಿರುವ ವಿಷಯವನ್ನು ಓದು.**


ತೋಳದ ಧ್ವನಿ ಮತ್ತು ಕೊಳಲಿನ ಧ್ವನಿಯನ್ನು ಕುರಿಕಾಯುವವನು ಕೇಳಿಸಿಕೊಂಡನು. ಈ ಕೊಳಲಿನ ಧ್ವನಿ ನಮ್ಮ ಮುದ್ದಾದ ಕುರಿಮರಿಯ ಹತ್ತಿರ ಇರುವ ಕೊಳಲಿನದ್ದು. ಇನ್ನೊಂದ ಧ್ವನಿಯು ತೋಳದ್ದು. ಹಾಗಾದರೆ ನಮ್ಮ ಮುದ್ದಾರ ಕುರಿಮರಿಯು ತೋಳದ ಕೈಯಲ್ಲಿ ಸಿಕ್ಕಿದೆ ಎಂದು ತಿಳಿದನು. ಕೊಳಲಿನ ಮತ್ತು ತೋಳದ ಧ್ವನಿಯು ಬರುವ ಕಡೆಗೆ ಜೋರಾಗಿ ಒಬ್ಬನೇ ಕೋಲನ್ನು ಹಿಡಿದುಕೊಂಡು ಓಡಿ ಹೋದನು.



ತೋಳದ ಧ್ವನಿ ಮತ್ತು ಕೊಳಲಿನ ಧ್ವನಿಯು ಕುರಿಕಾಯುವವನಿಗೆ ಮತ್ತು ಅವನ ನಾಯಿಗಳಿಗೆ ಕೇಳಿಸಿತು. ಈ ಕೊಳಲಿನ ಧ್ವನಿ ನಮ್ಮ ಮುದ್ದಾದ ಕುರಿಮರಿಯ ಹತ್ತಿರ ಇರುವ ಕೊಳಲಿನದ್ದು. ಇನ್ನೊಂದ ಧ್ವನಿಯು ತೋಳದ್ದು. ಹಾಗಾದರೆ ನಮ್ಮ ಮುದ್ದಾರ ಕುರಿಮರಿಯು ತೋಳದ ಕೈಯಲ್ಲಿ ಸಿಕ್ಕಿದೆ ಎಂದು ತಿಳಿದು, ಕೊಳಲಿನ ಮತ್ತು ತೋಳದ ಧ್ವನಿಯು ಬರುವ ಕಡೆಗೆ ನಾಯಿಗಳು ಓಡಿ ಹೋದವು. ಅವುಗಳ ಹಿಂದೆ ಕುರಿಕಾಯುವವನು ಕೋಲನ್ನು ಹಿಡಿದುಕೊಂಡು ಓಡಿಹೋದನು.

ತೋಳದ ಧ್ವನಿ ಮತ್ತು ಕೊಳಲಿನ ಧ್ವನಿಯನ್ನು ಕುರಿಕಾಯುವವನ ನಾಯಿಗಳು ಕೇಳಿಸಿಕೊಂಡವು. ಈ ಕೊಳಲಿನ ಧ್ವನಿ ನಮ್ಮ ಮುದ್ದಾದ ಕುರಿಮರಿಯ ಹತ್ತಿರ ಇರುವ ಕೊಳಲಿನದ್ದು. ಇನ್ನೊಂದ ಧ್ವನಿಯು ತೋಳದ್ದು. ಹಾಗಾದರೆ ನಮ್ಮ ಮುದ್ದಾರ ಕುರಿಮರಿಯು ತೋಳದ ಕೈಯಲ್ಲಿ ಸಿಕ್ಕಿದೆ ಎಂದು ತಿಳಿದವು. ಕೊಳಲಿನ ಮತ್ತು ತೋಳದ ಧ್ವನಿಯು ಬರುವ ಕಡೆಗೆ ಜೋರಾಗಿ ಓಡಿದವು. ಕುರಿಕಾಯುವವನು ಉಳಿದ ಕುರಿಗಳನ್ನು ಕಾಯುತ್ತಾ ನಿಂತನು.

**ಕೆಳಗಿನ ಚಿತ್ರಗಳಲ್ಲಿ ಏನಾಗುತ್ತಿದೆ ಎಂದು ಅವುಗಳ ಮುಂದೆ ಬರೆಯಲಾಗಿದೆ. ಓದಿ ಅರ್ಥೈಸಿಕೊ.**



ನಾಯಿಗಳು ಮತ್ತು ಕುರಿಕಾಯುವವನು ಓಡಿ ಬರುವುದನ್ನು ತೋಳವು ನೋಡಿ ಭಯಪಟ್ಟು ಓಡಿ ಹೋಯಿತು.



ಕುರಿಕಾಯುವವನು ಕುರಿಮರಿಯನ್ನು ಎತ್ತಿಕೊಂಡು ಬಂದು ಉಳಿದ ಕುರಿಗಳಲ್ಲಿ ತಂದು ಬಿಟ್ಟನು. ಎಲ್ಲಾ ಕುರಿಗಳ ಜೊತೆಗೆ ಕುರಿಮರಿಯು ಸಂತೋಷದಿಂದ ಮೇಯಲು ಪ್ರಾರಂಭಿಸಿತು.

**ಓದುತ್ತಾ ಪಾತ್ರ, ಸನ್ನಿವೇಶ ಮತ್ತು ಘಟನೆಗಳನ್ನು ಕಲ್ಪಿಸಿಕೊ.**

ಒಬ್ಬನು ಕುರಿಗಳನ್ನು ಸಾಕಿದ್ದನು. ಅವುಗಳನ್ನು ಮೇಯಿಸಲು ಅಡವಿಗೆ ಹೊಡೆದುಕೊಂಡು ಹೋಗಿದ್ದನು. ಕುರಿಗಳಲ್ಲಿ ಒಂದು ಮುದ್ದಾದ ಕುರಿಮರಿ ಇತ್ತು. ಅದರ ಹತ್ತಿರ ಒಂದು ಕೊಳಲು ಇತ್ತು. ಕುರಿಮರಿಯು ಕುರಿಗಳ ಜೊತೆಗೆ ತಿರುಗಾಡುತ್ತಾ ಮೇಯುತ್ತಿರುವಾಗ ದಾರಿ ತಪ್ಪಿಸಿಕೊಂಡಿತು. ಎಲ್ಲಾ ಕುರಿಗಳು ಒಂದು ದಾರಿಯಲ್ಲಿ ಮೇಯುತ್ತಾ ಹೋದವು. ಕುರಿಮರಿಯು ತಾನೊಂದೇ ಬೇರೆ ದಾರಿಯಲ್ಲಿ ಬಹಳಷ್ಟು ದೂರ ಮೇಯುತ್ತಾ ಹೋಯಿತು. ಸ್ವಲ್ಪ ಸಮಯದ ನಂತರ ಕುರಿಮರಿಗೆ ಭಯವಾಯಿತು. ಇತರ ಕುರಿಗಳನ್ನು ಕೂಗಿ ಕರೆಯಿತು. ಆದರೆ ಯಾವ ಕುರಿಗೂ ಕೇಳಿಸಲಿಲ್ಲ. ಒಂದು ತೋಳವು ಈ ಕುರಿಮರಿಯ ಕೂಗನ್ನು ಕೇಳಿಸಿಕೊಂಡಿತು. ಕುರಿಮರಿಯ ಕೂಗು ಕೇಳಿಸಿದ ದಿಕ್ಕಿಗೆ ತೋಳವು ಓಡಿತು. ಸ್ವಲ್ಪ ದೂರ ಹೋದ ನಂತರ ಅಲ್ಲಿ ಕುರಿಮರಿ ಇರುವುದನ್ನು ನೋಡಿತು. ಆಗ ಆ ಕುರಿಮರಿಯ ಮುಂದೆ ನಿಂತು, ನನಗೆ ತುಂಬಾ ಹೊಟ್ಟೆ ಹಸಿದಿದೆ. ನಿನ್ನನ್ನು ತಿಂದು ನನ್ನ ಹೊಟ್ಟೆ ತುಂಬಿಸಿಕೊಳ್ಳುತ್ತೇನೆ ಎಂದಿತು. ತೋಳದ ಮಾತನ್ನು ಕೇಳಿ, ಕುರಿಮರಿ ಅಂಜಿ ನಡುಗಲು ಪ್ರಾರಂಭಿಸಿತು. ಅಂಜುವುದರ ಜೊತೆಗೆ ಒಂದು ಉಪಾಯವನ್ನು ಮಾಡಿತು. ಆಗ ತನ್ನ ಹತ್ತಿರ ಇರುವ ಕೊಳಲನ್ನು ತೋಳಕ್ಕೆ ಕೊಟ್ಟಿತು. ತೋಳಣ್ಣ ಈ ಕಾಡಿನಲ್ಲಿ ಎಲ್ಲಾ ಪ್ರಾಣಿಗಳು ನೀನು ಬಹಳ ಸುಮಧುರವಾಗಿ ಹಾಡುತ್ತಿಯಾ ಎಂದು ಹೇಳಿದ್ದನ್ನು ನಾನು ಕೇಳಿದ್ದೇನೆ. ಈಗ ನಾನು ಸಾಯುವ ಮುನ್ನ ನಿನ್ನಿಂದ ಒಂದು ಸುಮಧುರವಾದ ಹಾಡನ್ನು ಕೇಳಲು ಆಸೆಪಡುತ್ತಿದ್ದೇನೆ. ದಯವಿಟ್ಟು ಈ ಕೊಳನ್ನು ಊದುತ್ತಾ ಹಾಡನ್ನು ಹಾಡು. ಆನಂತರ ನನ್ನನ್ನು ನೀನು ತಿನ್ನು ಎಂದಿತು. ಆಗ ತೋಳ ಖುಷಿಯಾಗಿ ಜೋರಾಗಿ ಕೊಳಲನ್ನು ಊದುತ್ತಾ ಹಾಡಲು ಶುರು ಮಾಡಿತು. ತೋಳದ ಧ್ವನಿ ಮತ್ತು ಕೊಳಲಿನ ಧ್ವನಿಯು ಕುರಿಕಾಯುವನಿಗೆ ಮತ್ತು ಅವನ ನಾಯಿಗಳಿಗೆ ಕೇಳಿಸಿತು. ಈ ಕೊಳಲಿನ ಧ್ವನಿ ನಮ್ಮ ಮುದ್ದಾದ ಕುರಿಮರಿಯ ಹತ್ತಿರ ಇರುವ ಕೊಳಲಿನದ್ದು. ಇನ್ನೊಂದ ಧ್ವನಿಯು ತೋಳದ್ದು. ಹಾಗಾದರೆ ನಮ್ಮ ಮುದ್ದಾರ ಕುರಿಮರಿಯು ತೋಳದ ಕೈಯಲ್ಲಿ ಸಿಕ್ಕಿದೆ ಎಂದು ತಿಳಿದು, ಕೊಳಲಿನ ಮತ್ತು ತೋಳದ ಧ್ವನಿಯು ಬರುವ ಕಡೆಗೆ ನಾಯಿಗಳು ಓಡಿ ಹೋದವು. ಅವುಗಳ ಹಿಂದೆ ಕುರಿಕಾಯುವವನು ಕೋಲನ್ನು ಹಿಡಿದುಕೊಂಡು ಓಡಿಹೋದನು. ನಾಯಿಗಳು ಮತ್ತು ಕುರಿಕಾಯುವವನು ಓಡಿ ಬರುವುದನ್ನು ತೋಳವು ನೋಡಿ ಭಯಪಟ್ಟು ಓಡಿ ಹೋಯಿತು. ಕುರಿಕಾಯುವವನು ಕುರಿಮರಿಯನ್ನು ಎತ್ತಿಕೊಂಡು ಬಂದು ಉಳಿದ ಕುರಿಗಳಲ್ಲಿ ತಂದು ಬಿಟ್ಟನು. ಎಲ್ಲಾ ಕುರಿಗಳ ಜೊತೆಗೆ ಕುರಿಮರಿಯು ಸಂತೋಷದಿಂದ ಮೇಯಲು ಪ್ರಾರಂಭಿಸಿತು.

**ಕೆಳಗಿನ ವಾಕ್ಯಗಳ ಮಿಂಚುಪಟ್ಟಿಗಳನ್ನು ಕಥೆಯ ಕ್ರಮಾನುಸಾರ ಓದುತ್ತಾ ಜೋಡಿಸು.**

| |
|---|
| ನಾಯಿಗಳನ್ನು ನೋಡಿದ ತೋಳವು ಕುರಿಮರಿಯನ್ನು ಅಲ್ಲಿಯೇ ಬಿಟ್ಟು, ಅಂಜಿ ಓಡಿ ಹೋಯಿತು. |
| ಆಗ ಒಂದು ತೋಳವು ಮೇಯುತ್ತಿರುವ ಕುರಿಮರಿಯನ್ನು ನೋಡಿ, ಅದರ ಹತ್ತಿರ ಬಂದಿತು. |
| ಆ ಕುರಿಮರಿಯು ಒಂದು ದಿನ ಅಡವಿಯಲ್ಲಿ ಮೇಯುತ್ತಿತ್ತು. |
| ನಿನ್ನ ಕಂಠ ಚೆನ್ನಾಗಿದೆ. ಜೋರಾಗಿ ಒಂದು ಹಾಡನ್ನು ಹಾಡು. ಆನಂತರ ನನ್ನನ್ನು ತಿನ್ನು ಎಂದಿತು. |
| ತೋಳದ ಹಾಡನ್ನು ನಾಯಿಗಳು ಕೇಳಿ, ತೋಳ ಮತ್ತು ಮುರಿಮರಿ ಇರುವಲ್ಲಿಗೆ ಓಡಿ ಬಂದವು. |
| ಆಗ ಕುರಿಮರಿಯು ಒಂದು ಉಪಾಯ ಮಾಡಿತು. |
| ಹೀಗೆ ಕುರಿಮರಿಯು ಜಾಣತನದಿಂದ ತನ್ನ ಜೀವ ಉಳಿಸಿಕೊಂಡಿತು. |
| ಒಂದು ಮುದ್ದಾದ ಕುರಿಮರಿ ಇತ್ತು. |
| ನಾನು ನಿನ್ನನ್ನು ತಿನ್ನುತ್ತೇನೆ ಎಂದು ಕುರಿಮರಿಗೆ ಹೇಳಿತು. |
| ಆ ಕೂಗನ್ನು ಒಂದು ತೋಳವು ಕೇಳಿಸಿಕೊಂಡು ಕುರಿಮರಿ ಇದ್ದಲ್ಲಿಗೆ ಬಂದಿತು. |
| ಕುರಿಮರಿಯ ಮಾತನ್ನು ಕೇಳಿ ಖುಷಿಯಾದ ತೋಳವು ಜೋರಾಗಿ ಕೂಗುತ್ತಾ ಹಾಡಿತು. |

❖ **ಮಕ್ಕಳೊಂದಿಗೆ ಸಂವಾದ ಮಾಡುತ್ತಾ, ಓದಿಸುತ್ತಾ ಈ ಕಥೆಯನ್ನು ಶಿಕ್ಷಕರು ಅರ್ಥೈಸುವುದು)**

### ಕಪ್ಪೆಗಳ ಸರಿಯಾದ ನಿರ್ಧಾರ

ಒಂದು ದೊಡ್ಡದಾದ ಕಾಡು ಇತ್ತು. ಆ ಕಾಡಿನ ನಡುವೆ ಒಂದು ಕೊಳ ಇತ್ತು. ಆ ಕೊಳದಲ್ಲಿ ತಂಪಾದ ಮತ್ತು ರುಚಿಯಾದ ನೀರು ತುಂಬಿದ್ದವು. ಆ ನೀರಿನಲ್ಲಿ ಎರಡು ಕಪ್ಪೆಗಳು ವಾಸವಾಗಿದ್ದವು. ಒಂದು ಕಪ್ಪೆಯ ಬಣ್ಣ ಹಸಿರು ಇತ್ತು. ಇನ್ನೊಂದು ಕಪ್ಪೆಯ ಬಣ್ಣ ನೀಲಿ ಇತ್ತು. ಅವು ಆ ಕೊಳದ ನೀರಿನಲ್ಲಿ ಆಟವಾಡುತ್ತಾ ಸಂತೋಷದಿಂದ ಕಾಲ ಕಳೆಯುತ್ತಿದ್ದವು.

ಎರಡೂ ಕಪ್ಪೆಗಳು ಹೇಗೆ ಖುಷಿಯಾಗಿದ್ದವು ಎಂಬುದನ್ನು ಪಕ್ಕದ ಚಿತ್ರದಲ್ಲಿ ಗಮನಿಸು.




ಹೀಗಿರುವಾಗ ಬೇಸಿಗೆ ಕಾಲ ಬಂದಿತು.

ಬೇಸಿಗೆಯ ಕಾಲದಲ್ಲಿ ಆ ಕೊಳವು ಹೇಗೆ ಆಯಿತು. ಆ ಕಪ್ಪೆಗಳ ಪರಿಸ್ಥಿತಿ ಏನಾಯಿತು ಎಂಬುದನ್ನು ಪಕ್ಕದ ಚಿತ್ರದಲ್ಲಿ ಗಮನಿಸು



ಬೇಸಿಗೆಯ ಬಿಸಿಲಿನಿಂದ ಕೊಳದ ನೀರು ಬತ್ತಿತು. ಕಪ್ಪೆಗಳಿಗೆ ಬಹಳ ಕಷ್ಟವಾಯಿತು. ಹಾಗಾಗಿ ಅವು ನೀರು ಇರುವ ಜಾಗವನ್ನು ಹುಡುಕುತ್ತಾ ಹೊರಟವು. ಮುಂದೆ ಏನಾಯಿತು ಎಂಬುದನ್ನು ಚಿತ್ರದಲ್ಲಿ ನೋಡಿ ಊಹಿಸಿಕೊ







ನೀರು ಇರುವ ಜಾಗವನ್ನು ಹುಡುಕುತ್ತಾ ಹೊರಟ ಕಪ್ಪೆಗಳಿಗೆ ಒಂದು ಬಾವಿ ಕಂಡಿತು. ನೀಲಿ ಕಪ್ಪೆ ಆ ಬಾವಿಯ ಕಡೆಗೆ ಜೋರಾಗಿ ಓಡಿ ಹೋಯಿತು. ಆ ಬಾವಿಯ ಮೇಲೆ ಜಿಗಿದು ಕುಳಿತು ಅದರಲ್ಲಿನ ನೀರನ್ನು ನೋಡಿತು. ಆಗ ಅದು ಈ ಬಾವಿಯಲ್ಲಿ ಬಹಳ ನೀರು ಇವೆ. ನಾವು ಈ ಬಾವಿಯಲ್ಲಿ ಸಂತೋಷದಿಂದ ಇರಬಹುದು ಎಂದಿತು. ಆಗ ಹಸಿರು ಕಪ್ಪೆಯು ಈ ಬಾವಿಯಲ್ಲಿ ಬಹಳ ನೀರು ಇರಬಹುದು. ಆದರೆ ನಾವು ಬಾವಿಯಲ್ಲಿ ಇರುವುದು ತುಂಬಾ ಅಪಾಯ. ನಾವು ಕೊಳವನ್ನೇ ಹುಡುಕೋಣ ಎಂದಿತು. ಆಗ ನೀಲಿ ಕಪ್ಪೆಯು ಕೊಳಕ್ಕಿಂತ ಬಾವಿ ನಮಗೆ ಯಾಕೆ ಅಪಾಯ ಎಂದು ಕೇಳಿತು. ಆಗ ಹಸಿರು ಕಪ್ಪೆಯು ನೀಲಿ ಕಪ್ಪೆಗೆ ತಿಳಿಸಿ ಹೇಳಿತು. ಆಗ ನೀಲಿ ಕಪ್ಪೆಯು ಹೌದು, ಕೊಳಕ್ಕಿಂತ ನಮಗೆ ಬಾವಿಯು ತುಂಬಾ ಅಪಾಯ. ನಾವು ಇನ್ನೊಂದು ಕೊಳವನ್ನೇ ಹುಡುಕೋಣ ಎಂದಿತು. ಆಗ ಎರಡೂ ಕಪ್ಪೆಗಳು ಇನ್ನೊಂದು ಕೊಳವನ್ನು ಹುಡುಕುತ್ತಾ ಹೋದವು.

ಈ ಚಿತ್ರದಲ್ಲಿ ಕಪ್ಪೆಗಳು ಬಾವಿಯನ್ನು ಬಿಟ್ಟು ಕೊಳವನ್ನು ಹುಡುಕುತ್ತಾ ಹೊರಟಿವೆ. ಈ ಕಪ್ಪೆಗಳಿಗೆ ಬಾವಿಯಲ್ಲಿ ನೀರು ಇದ್ದರೂ ಕೊಳಕ್ಕಿಂತ ಬಾವಿ ಯಾಕೆ ಅಪಾಯ ಎನಿಸಿರಬಹುದು.



ಬಾವಿಯನ್ನು ಬಿಟ್ಟು ಕೊಳವನ್ನು ಹುಡುಕುತ್ತಾ ಹೊರಟ ಕಪ್ಪೆಗಳಿಗೆ ಮುಂದೇನಾಯಿತು ಎಂಬುದನ್ನು ಪಕ್ಕದ ಚಿತ್ರದಲ್ಲಿ ಗಮನಿಸು.



ಈ ಕಥೆಯಲ್ಲಿನ ಕಪ್ಪೆಗಳಿಗೆ ಕೊನೆಗೆ ಏನಾಯಿತು ಎಂಬುದನ್ನು ಪಕ್ಕದ ಚಿತ್ರದಲ್ಲಿ ನೋಡಿ ಊಹಿಸಿಕೊ.



**ಕಪ್ಪೆಗಳ ಸರಿಯಾದ ನಿರ್ಧಾರ** *(ಓದಿ ಕೆಳಗಿನ ಚಟುವಟಿಕೆಗಳನ್ನು ಪೂರ್ಣಗೊಳಿಸು)*

ಒಂದು ದೊಡ್ಡದಾದ ಕಾಡು ಇತ್ತು. ಆ ಕಾಡಿನ ನಡುವೆ ಒಂದು ಕೊಳ ಇತ್ತು. ಆ ಕೊಳದಲ್ಲಿ ತಂಪಾದ ಮತ್ತು ರುಚಿಯಾದ ನೀರು ತುಂಬಿದ್ದವು. ಆ ನೀರಿನಲ್ಲಿ ಎರಡು ಕಪ್ಪೆಗಳು ವಾಸವಾಗಿದ್ದವು. ಒಂದು ಕಪ್ಪೆಯ ಬಣ್ಣ ಹಸಿರು ಇತ್ತು. ಇನ್ನೊಂದು ಕಪ್ಪೆಯ ಬಣ್ಣ ನೀಲಿ ಇತ್ತು. ಅವು ಆ ಕೊಳದ ನೀರಿನಲ್ಲಿ ಆಟವಾಡುತ್ತಾ ಸಂತೋಷದಿಂದ ಕಾಲ ಕಳೆಯುತ್ತಿದ್ದವು. ಹೀಗಿರುವಾಗ ಬೇಸಿಗೆ ಕಾಲ ಬಂದಿತು. ದಿನಾಲೂ ಬಹಳ ಸುಡು ಬಿಸಿಲು ಬೀಳುತ್ತಿತ್ತು. ಇದರಿಂದ ಆ ಕೊಳದ ನೀರು ಬತ್ತಿತು. ಹಾಗಾಗಿ ಎರಡೂ ಕಪ್ಪೆಗಳು ನೀರು ಇರುವ ಜಾಗವನ್ನು ಹುಡುಕುತ್ತಾ ಹೊರಟವು. ಸ್ವಲ್ಪ ದೂರ ಹೋದ ನಂತರ ಆ ಕಪ್ಪೆಗಳಿಗೆ ಒಂದು ಬಾವಿ ಕಂಡಿತು. ನೀಲಿ ಕಪ್ಪೆ ಆ ಬಾವಿಯ ಕಡೆಗೆ ಜೋರಾಗಿ ಓಡಿ ಹೋಯಿತು. ಆ ಬಾವಿಯ ಮೇಲೆ ಜಿಗಿದು ಕುಳಿತು ಅದರಲ್ಲಿನ ನೀರನ್ನು ನೋಡಿತು. ಆಗ ಅದು ಈ ಬಾವಿಯಲ್ಲಿ ಬಹಳ ನೀರು ಇವೆ. ನಾವು ಈ ಬಾವಿಯಲ್ಲಿ ಸಂತೋಷದಿಂದ ಇರಬಹುದು ಎಂದಿತು. ಆಗ ಹಸಿರು ಕಪ್ಪೆಯು ಈ ಬಾವಿಯಲ್ಲಿ ಬಹಳ ನೀರು ಇರಬಹುದು. ಆದರೆ ನಾವು ಬಾವಿಯಲ್ಲಿ ಇರುವುದು ತುಂಬಾ ಅಪಾಯ. ನಾವು ಕೊಳವನ್ನೇ ಹುಡುಕೋಣ ಎಂದಿತು. ಆಗ ನೀಲಿ ಕಪ್ಪೆಯು ಕೊಳಕ್ಕಿಂತ ಬಾವಿ ನಮಗೆ ಯಾಕೆ ಅಪಾಯ ಎಂದು ಕೇಳಿತು. ಆಗ ಹಸಿರು ಕಪ್ಪೆಯು ನೀಲಿ ಕಪ್ಪೆಗೆ ತಿಳಿಸಿ ಹೇಳಿತು. ಆಗ ನೀಲಿ ಕಪ್ಪೆಯು ಹೌದು, ಕೊಳಕ್ಕಿಂತ ನಮಗೆ ಬಾವಿಯು ತುಂಬಾ ಅಪಾಯ. ನಾವು ಇನ್ನೊಂದು ಕೊಳವನ್ನೇ ಹುಡುಕೋಣ ಎಂದಿತು. ಆಗ ಎರಡೂ ಕಪ್ಪೆಗಳು ಇನ್ನೊಂದು ಕೊಳವನ್ನು

ಹುಡುಕುತ್ತಾ ಹೋದವು. ಮತ್ತೆ ಸ್ವಲ್ಪ ದೂರ ಹೋದ ನಂತರ ನೀರು ತುಂಬಿದ ಕೊಳ ಕಂಡಿತು. ಎರಡೂ ಕಪ್ಪೆಗಳು ಆ ಕೊಳದ ಕಡೆಗೆ ಜೋರಾಗಿ ಓಡಿ ಹೋದವು. ಆ ಕೊಳದ ನೀರು ರುಚಿ ಮತ್ತು ತಂಪಾಗಿದ್ದವು. ಆ ನೀರಿನಲ್ಲಿ ಎರಡೂ ಕಪ್ಪೆಗಳು ಖುಷಿಯಿಂದ ಆಟವಾಡುತ್ತಾ ಜೀವನ ನಡೆಸಿದವು.

**ಬೇಸಿಗೆಯ ದಿನಗಳಲ್ಲಿ ಕೊಳದ ನೀರು ಬತ್ತಿದ್ದರಿಂದ ಕಪ್ಪೆಗಳಿಗೆ ತೊಂದರೆಯಾಯಿತು. ಒಂದು ವೇಳೆ ಮಳೆಗಾಲವಾಗಿದ್ದರೆ ಆ ಕೊಳದಲ್ಲಿರುವ ಕಪ್ಪೆಗಳಿಗೆ ಯಾವ ರೀತಿಯ ತೊಂದರೆಯಾಗುತ್ತಿತ್ತು? ಕೆಳಗಿನ ಆಯ್ಕೆಗಳಲ್ಲಿ ನಿನ್ನ ಊಹೆಗೆ ವೃತ್ತ ಹಾಕು.**

ಮಳೆಯ ನೀರಿನ ಜೊತೆಗೆ ಮೀನುಗಳು ಹರಿದು ಬಂದು ಆ ಕೊಳದಲ್ಲಿ ಸೇರುತ್ತವೆ. ಆನರು ಆ ಮೀನುಗಳನ್ನು ಹಿಡಿಯಲು ಬರುತ್ತಾರೆ. ಅವರ ಕಾಲಲ್ಲಿ ಸಿಕ್ಕಿ ಹಾಕಿಕೊಂಡು ಕಪ್ಪೆಗಳು ಸಾಯುತ್ತವೆ.

ಮಳೆಗಾಲದಲ್ಲಿ ಜೋರಾಗಿ ಮಳೆ ಬರುತ್ತದೆ. ಆ ಕೊಳವು ನೀರಿನಿಂದ ತುಂಬಿ ಹರಿಯುತ್ತದೆ. ಹರಿಯುವ ನೀರಿನಲ್ಲಿ ಆ ಎರಡೂ ಕಪ್ಪೆಗಳು ಹರಿದುಕೊಂಡು ಹೋಗಿ ಬಯಲಿಗೆ ಬೀಳುತ್ತವೆ. ಬಯಲಿಗೆ ಬಿದ್ದ ಕಪ್ಪೆಗಳನ್ನು ಕಾಗೆಗಳು ತಿನ್ನುತ್ತವೆ.

ಮಳೆಯಿಂದ ಕೊಳವು ತುಂಬುತ್ತದೆ. ತುಂಬಿದ ಕೊಳದ ತಳಕ್ಕೆ ಆ ಕಪ್ಪೆಗಳು ಹೋಗಿ ಕುಳಿತುಕೊಳ್ಳುತ್ತವೆ. ಆಗ ಅವು ಉಸಿರು ಕಟ್ಟಿ ಸಾಯುತ್ತವೆ.

ಮಳೆಯ ನೀರು ಆ ಕೊಳದಲ್ಲಿ ಹರಿದು ಬಂದು ಸೇರುವಾಗ ಹಾವುಗಳೂ ಸಹ ಹರಿದು ಬಂದು ಆ ಕೊಳದಲ್ಲಿ ಸೇರುತ್ತವೆ. ಆಗ ಆ ಹಾವುಗಳು ಆ ಕಪ್ಪೆಗಳನ್ನು ನುಂಗುತ್ತವೆ.

**ನೀರು ಇದ್ದರೂ ಸಹ ಕೊಳಕ್ಕಿಂತ ಬಾವಿಯು ಕಪ್ಪೆಗಳಿಗೆ ಹೇಗೆ ಅಪಾಯ? ಕೆಳಗಿನವುಗಳಲ್ಲಿ ನಿನ್ನ ತರ್ಕಕ್ಕೆ ಗುರುತು ಹಾಕು.**

ಬಾವಿಯಲ್ಲಿನ ನೀರನ್ನು ಜನರು ತಮ್ಮ ಕೊಡದಲ್ಲಿ ಸೇದಿಕೊಳ್ಳುವಾಗ ಕಪ್ಪೆಗಳು ಆ ಕೊಡದಲ್ಲಿ ಸೇರಿಕೊಳ್ಳುತ್ತವೆ. ಆಗ ಜನರು ತಮ್ಮ ಕೊಡದಲ್ಲಿ ಸೇರಿಕೊಂಡ ಕಪ್ಪೆಗಳನ್ನು ನೆಲದ ಮೇಲೆ ಬಿಸಾಕುತ್ತಾರೆ. ನೆಲದ ಮೇಲೆ ಬಿದ್ದ ಕಪ್ಪೆಗಳನ್ನು ಕಪ್ಪೆಗಳು ತಿನ್ನುತ್ತವೆ. ಅದಕ್ಕಾಗಿ ಕೊಳಕ್ಕಿಂತ ಬಾವಿಯು ಕಪ್ಪೆಗಳಿಗೆ ಅಪಾಯ.

ಕೊಳದಲ್ಲಿನ ನೀರು ಬತ್ತಿದರೆ ಕಪ್ಪೆಗಳು ಹೊರಗೆ ಬಂದು ಇನ್ನೊಂದು ಕೊಳವನ್ನು ಹುಡುಕಾಡಿ ಅದರಲ್ಲಿ ಜೀವಿಸಬಹುದು. ಆದರೆ ಬಾವಿಯೊಳಗಿನ ನೀರು ಬತ್ತಿದರೆ ಕಪ್ಪೆಗಳಿಗೆ ಬಾವಿಯ ಮೇಲೆ ಬರಲು ಆಗುವುದಿಲ್ಲ. ಆ ಬಾವಿಯೊಳಗೆ ಸತ್ತು ಹೋಗಬೇಕಾಗುತ್ತದೆ.

ಬಾವಿಗಳನ್ನು ಕಲ್ಲುಗಳಿಂದ ಕಟ್ಟಿರುತ್ತಾರೆ. ಆ ಕಲ್ಲುಗಳು ಬಾವಿಯೊಳಗೆ ಬಿದ್ದರೆ ಕಪ್ಪೆಗಳು ಸಾಯುತ್ತವೆ. ಅದಕ್ಕಾಗಿ ಕೊಳಕ್ಕಿಂತ ಬಾವಿಯು ಕಪೆಗಳಿಗೆ ಅಪಾಯ.

ಕೊಳಕ್ಕಿಂತ ಬಾವಿಯೊಳಗೆ ಬಹಳ ನೀರು ಇರುತ್ತವೆ. ಹಾಗಾಗಿ ಕಪ್ಪೆಗಳಿಗೆ ಬಾವಿಯೊಳಗೆ ಜೀವಿಸಲು ಭಯ ಎನಿಸುತ್ತದೆ.

**_ಕೆಳಗಿನ ವಾಕ್ಯಗಳನ್ನು ಜೋಡಿಸಿ ಕಥೆಯನ್ನು ರಚಿಸು_**

ಹಾಗಾಗಿ ಆ ಕಪ್ಪೆಗಳು ನೀರು ಇರುವ ಜಾಗವನ್ನು ಹುಡುಕುತ್ತಾ ಹೊರಟವು.

ಆದ್ದರಿಂದ ಕಪ್ಪೆಗಳು ಬಾವಿಯೊಳಗೆ ಇಳಿಯದೆ ನೀರು ಇರುವ ಕೊಳವನ್ನು ಹುಡುಕುತ್ತಾ ಹೊರಟವು.

ಹೀಗೆ ಖುಷಿಯಾಗಿರುವಾಗ ಬೇಸಿಗೆ ಕಾಲ ಬಂದಿತು.

ಕೊನೆಗೆ ಆ ಕೊಳದಲ್ಲಿ ಎರಡೂ ಕಪ್ಪೆಗಳು ಖುಷಿಯಿಂದ ಜಿಗಿದವು.

ಈ ಬಾವಿಯ ನೀರು ಬತ್ತಿದಾಗ ನಾವು ಹೊರಗೆ ಬರಲು ಆಗುವುದಿಲ್ಲ ಎಂದು ತಿಳಿದವು.

ಬಾವಿಯನ್ನು ಬಿಟ್ಟು ಸ್ವಲ್ಪ ದೂರ ಹೋದ ನಂತರ ಕಪ್ಪೆಗಳಿಗೆ ಒಂದು ಕೊಳ ಕಾಣಿಸಿತು.

ಒಂದು ಸುಂದರವಾದ ನೀರು ತುಂಬಿದ ಕೊಳದಲ್ಲಿ ಎರಡು ಕಪ್ಪೆಗಳು ಖುಷಿಯಾಗಿದ್ದವು.

ಬೇಸಿಗೆಯ ಬಿಸಿಲಿನಿಂದ ಆ ಕೊಳದಲ್ಲಿನ ನೀರು ಬತ್ತಿದವು.

ಸ್ವಲ್ಪ ದೂರ ಹೋದ ನಂತರ ಆ ಕಪ್ಪೆಗಳಿಗೆ ಒಂದು ನೀರು ತುಂಬಿದ ಬಾವಿ ಕಾಣಿಸಿತು.

ಹಾಗೆ ಹೋಗುವಾಗ ಆ ಕಪ್ಪೆಗಳಿಗೆ ಮತ್ತೊಂದು ನೀರು ತುಂಬಿದ ಕೊಳ ಕಾಣಿಸಿತು.


❖ ಕೆಳಗಿನ ಚಿತ್ರ ಸರಣಿಗಳನ್ನು ಗ್ರಹಿಸಿಕೊಂಡು ಕೇಳಿದ ಪ್ರಶ್ನೆಗಳಿಗೆ ಉತ್ತರಿಸು.

**ಫ್ಲಾಶ್ ಕಾರ್ಡ್–3 : ಕೋವಿಡ್–19 ಜಾತ್ರೆಯ ಸುರಕ್ಷತೆ**

**ಸೂಚನೆಗಳು :** ಕೆಳಗಿನ ಚಿತ್ರ ಸರಣಿ ನೋಡಿ ಸರಳ ವಾಕ್ಯದಲ್ಲಿ ಗ್ರಹಿಕೆಗಳನ್ನು ಬರೆಯುವರು.




**ಚಿತ್ರ–1 ಊರಿನ ಜಾತ್ರೆ ತಯಾರಿ**



**ಚಿತ್ರ–2 ಊರಿನ ಜಾತ್ರೆ ಸಂಭ್ರಮ**



**ಚಿತ್ರ–3 ಊರಿನ ಜಾತ್ರೆಯ ಕಸದ ರಾಶಿ**



**ಚಿತ್ರ–4 ಊರಿನ ಸಾರ್ವಜನಿಕ ಸಭೆ**

. . . . . . . . . . . . . . . . . . . . . . . . . . . . .
. . . . . . . . . . . . . . . . . . . . . . . . . . . . .
. . . . . . . . . . . . . . . . . . . . . . . . . . . . .
. . . . . . . . . . . . . . . . . . . . . . . . . . . . .
. . . . . . . . . . . . . . . . . . . . . . . . . . . . .
. . . . . . . . . . . . . . . . . . . . . . . . . . . . .




**ಚಿತ್ರ–5 ಸಮೂದಾಯದ ಸ್ವಚ್ಛತೆ ಕಾರ್ಯ**

. . . . . . . . . . . . . . . . . . . . . . . . . . . . .
. . . . . . . . . . . . . . . . . . . . . . . . . . . . .
. . . . . . . . . . . . . . . . . . . . . . . . . . . . .
. . . . . . . . . . . . . . . . . . . . . . . . . . . . .
. . . . . . . . . . . . . . . . . . . . . . . . . . . . .
. . . . . . . . . . . . . . . . . . . . . . . . . . . . .
.

1. ಚಿತ್ರಸರಣಿಗೆ ಸಂಬಂದಿಸಿದಂತೆ ಮೂರು ವಾಕ್ಯದ ಸಾರಾಂಶ ಬರೆಯುವುದು.


. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .
. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .
. . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . . .

❖ **ಫ್ಲಾಶ್ ಕಾರ್ಡು–4 : ಕೆಳಗಿನ ಚಿತ್ರದೃಶ್ಯಗಳನ್ನು ಗಮನಿಸಿ ನಿಮ್ಮ ಅನಿಸಿಕೆ ಬರೆಯಿರಿ**



**ಶಾಲೆಯ ಹತ್ತಿರದ ದೃಶ್ಯ –1**

❖ **ನಮ್ಮಶಾಲೆಯ ನಲಿ ಕಲಿತರಗತಿ ದೃಶ್ಯ–2**



## ಥೀಮ್: ಪಠ್ಯಾಧಾರಿತ ವ್ಯಾಕರಣ (ನಾಮಪದ, ವಿಭಕ್ತಿ ಪ್ರತ್ಯಯಗಳು)

**ನಾಮಪದ ಪರಿಕಲ್ಪನೆ: ನಾಮಪದದ ಅರ್ಥ, ಪ್ರಕಾರಗಳು, ಸಂದರ್ಭವರಿತು ಬಳಸುವುದು.**

ನಾಮಪದದ ವ್ಯಾಖ್ಯಾನಗಳನ್ನು ಕಂಠಪಾಠ ಮಾಡುವ ಮತ್ತು ಉದಾಹರಣೆಗಳನ್ನು ನೆನಪಿನಲ್ಲಿಟ್ಟುಕೊಳ್ಳುವಂತಹ ಯಾಂತ್ರಿಕ ವಿಧಾನದ ಹೊರತಾದ ಸಂರಚನಾತ್ಮಕ ಆಲೋಚನೆಯಿಂದ ತರ್ಕಸಮ್ಮತವಾಗಿ ನಾಮಪದ ಮತ್ತು ವಿಭಕ್ತಿಪ್ರತ್ಯಯಗಳ ಪರಿಕಲ್ಪನೆಯನ್ನು ಇಲ್ಲಿ ಮಕ್ಕಳಿಗೆ ಅರ್ಥೈಸಲು ಪ್ರಯತ್ನಿಸಲಾಗಿದೆ. ಇಲ್ಲಿರುವ ಚಟುವಟಿಕೆಗಳು ಸಲಹಾತ್ಮಕವಾಗಿದ್ದು, ಶಿಕ್ಷಕರು ಇದೇ ಮಾದರಿಯಲ್ಲಿ ಹೆಚ್ಚಿನ ಸಾಮಗ್ರಿ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಿಕೊಂಡು ಮಕ್ಕಳಿಗೆ ತರಗತಿ ನಿರ್ವಹಣೆ ಮಾಡಬಹುದೆಂದು ನಿರೀಕ್ಷಿಸಲಾಗಿದೆ.

**ಪ್ರಕ್ರಿಯೆ:** ಸುಗಮಕಾರರು ಸದರಿ ಪಠ್ಯವನ್ನು ಮಕ್ಕಳು ಓದಿ ಅರ್ಥೈಸಿಕೊಳ್ಳಲು ಅವಕಾಶ ನೀಡುವುದು. ಅವರು ಓದಿ ಅಥೈಸಿಕೊಂಡ ನಂತರ ಅರ್ಥೈಸಿಕೊಂಡದ್ದನ್ನು ಮಂಡಿಸಲು ಅವಕಾಶ ನೀಡುವುದು. ಮಂಡಿಸಿದ ನಂತರ ಅಲ್ಲಿರುವ ಪಾತ್ರ, ಸನ್ನಿವೇಶಗಳ ಕುರಿತಾಗಿ ಚರ್ಚಿಸುವುದು. ಹೀಗೆ ಚರ್ಚಿಸುವಾಗ ಪಠ್ಯದಲ್ಲಿ ಬಂದಿರುವ ಮನುಷ್ಯರ, ಸ್ಥಳಗಳ ಮತ್ತು ವಸ್ತುಗಳನ್ನು ಸೂಚಿಸುವ ಪದಗಳುನ್ನು ಪಟ್ಟಿ ಮಾಡಲು ಸೂಚಿಸುವುದು. ಪಟ್ಟಿ ಮಾಡಿದ ನಂತರ ಆ ಪದಗಳನ್ನು ರೂಢಿಯಿಂದ ಬಂದಿರುವ ಪದಗಳು, ಇಟ್ಟ ಹೆಸರುಗಳು, ಕೆಲಸ–ದೈಹಿಕ ಊನತೆಯಿಂದ ಕರೆಯುವ ಹೆಸರುಗಳನ್ನಾಗಿ ಬೇರ್ಪಡಿಸಲು ಸೂಚಿಸುವುದು. ಬೇರ್ಪಡಿಸಿದ ಪದಗಳನ್ನು ಇಟ್ಟುಕೊಂಡು ರೂಢನಾಮ, ಅಂಕಿತನಾಮ ಮತ್ತು ಅನ್ವರ್ಥಕನಾಮಗಳ ಪರಿಕಲ್ಪನೆಗಳನ್ನು ಮೂಡಿಸುವುದು. ಮುಂದುವರಿದು ಈ ಮೂರೂ ತರಹದ ನಾಮಪದಗಳ ಬದಲಾಗಿ ಸರ್ವನಾಮಗಳು ಬಳಕೆಯಾಗುತ್ತವೆ ಎಂಬುದನ್ನು ಮಕ್ಕಳ ಗಮನಕ್ಕೆ ತರುವುದು. ನಂತರ ಕೆಳಗಿರುವ ಅಭ್ಯಾಸದ ಚಟುವಟಿಕೆಗಳನ್ನು ಮಕ್ಕಳಿಂದ ಮಾಡಿಸುವುದು.

ಒಂದು ಊರು ಇತ್ತು. ಆ ಊರಿನ ಹೆಸರು ಕೈಲಾಸಪುರ ಇತ್ತು. ಅಲ್ಲಿ ಒಬ್ಬ ಮನುಷ್ಯ ಇದ್ದನು ಅವನು ಬಡಿಗನಾಗಿದ್ದನು. ಅವನ ಹೆಸರು ಶಿವಣ್ಣ ಇತ್ತು. ಅವನು ಕುಂಟನಾಗಿದ್ದನು. ಅವನ ಹತ್ತಿರ ಬಾಚಿ, ಗರಗಸ, ಸುತ್ತಿಗೆಗಳು ಇದ್ದವು. ಅವುಗಳನ್ನು ಬಳಸಿಕೊಂಡು ಶಿವಣ್ಣನು ಕಟ್ಟಿಗೆಯ ಮಂಚವನ್ನು ಮಾಡುತ್ತಿದ್ದನು. ಅವನಿಗೆ ಒಬ್ಬಳು ಮಗಳು ಇದ್ದಳು. ಅವಳ ಹೆಸರು ಸವಿತಾ ಇತ್ತು. ಅವಳು ಜಾಣ ವಿದ್ಯಾರ್ಥಿನಿಯಾಗಿದ್ದಳು. ಅವಳು ಕೈಲಾಸಪುರ ಊರಿನ ಪಕ್ಕದ ಊರಾದ ಗಂಧನೂರಿನ ಶಾಲೆಯಲ್ಲಿ ಕಲಿಯುತ್ತಿದ್ದಳು. ಆ ಶಾಲೆಯು ಊರಿನಿಂದ ಸ್ವಲ್ಪ ದೂರವಿರುವ ಹೊಲದಲ್ಲಿ ಇತ್ತು. ಒಂದು ದಿನ ಸವಿತಾಳು ಶಿವಣ್ಣನ ಹತ್ತಿರ ಬಂದು ಅಪ್ಪಾ, ನಾನು ಶಾಲೆಗೆ ಹೋಗುತ್ತೇನೆ. ಶಾಲೆಯ ಫೀ ಕೊಡು ಎಂದಳು. ಆಗ ಶಿವಣ್ಣನು ಇಂದು ನನ್ನ ಹತ್ತಿರ ಹಣ ಇಲ್ಲ ಎಂದನು. ಸವಿತಾ ಅಳುತ್ತಾ ನಿಂತಳು. ಆಗ ಶಿವಣ್ಣನು ಅವಳನ್ನು ಕರೆದುಕೊಂಡು ಶಾಲೆಗೆ ಬಂದನು. ಅವರನ್ನು ರಾಮಣ್ಣ ಎಂಬ ಶಿಕ್ಷಕರು ನೋಡಿ ಕರೆದರು. ಅವರು ರಾಮಣ್ಣ ಶಿಕ್ಷಕರ ಹತ್ತಿರ ಹೋದರು. ಆಗ ರಾಮಣ್ಣ ಶಿಕ್ಷಕರು ರಾಮಣ್ಣನಿಗೆ ನೀನು ಯಾಕೆ ಬಂದಿರುವೆ? ಎಂದು ಕೇಳಿದರು. ಶಿವಣ್ಣನು ಇವಳ ಶಾಲೆಯ ಫೀ ಕೊಡಬೇಕಾಗಿತ್ತು. ಆದರೆ ಇಂದು ನನ್ನ ಹತ್ತಿರ ಹಣ ಇಲ್ಲ. ನಾಳೆ ತಂದು ಕೊಡುತ್ತೇನೆ ಎಂದನು. ಆಗ ರಾಮಣ್ಣ ಶಿಕ್ಷಕರು ಸರಿ ನಾಳೆ ಕೊಡು ಎಂದರು. ಸವಿತಾಳು ಖುಷಿಯಿಂದ ಶಾಲೆಯ ಒಳಗೆ ಓಡಿ ಹೋದಳು. ಶಿವಣ್ಣ ಮನೆಗೆ ಬಂದು ಬಡಿಗೆಯ ಕೆಲಸ ಮಾಡತೊಡಗಿದನು.

❖ **ಪದಗಳ ಮಿಂಚುಪಟ್ಟಿಗಳು** (ಮಿಂಚುಪಟ್ಟಿಗಳನ್ನು ಕತ್ತರಿಸಿಕೊಂಳ್ಳುವುದು)

| | | | | | |
|---|---|---|---|---|---|
| ಊರು | ವಿದ್ಯಾರ್ಥಿ | ಅದು | ಕೈಲಾಸಪುರ | ಮನುಷ್ಯ | ಅವನು |
| ಬಡಿಗ | ಬಾಚಿ, | ಶಿವಣ್ಣ | ಮಂಚ | ಮಗಳು | |
| ಸವಿತಾ | ಅಪ್ಪ | ಕುಂಟ | ಸುತ್ತಿಗೆ | ಅವು | ನಾನು | ಶಾಲೆ |
| ನನ್ನ | ಗಂಧನೂರು | ಹೊಲ | ಕಟ್ಟಿಗೆ | ಹಣ | ಅವರು |
| ರಾಮಣ್ಣ | ಶಿಕ್ಷಕರು | ನೀನು | ಇವಳ | ಮನೆ | ಗರಗಸ |

❖ **ಕೆಳಗಿನ ಮಿಂಚುಪಟ್ಟಿಗಳನ್ನು ಓದಿ ಆಯಾ ನಾಮಪದದ ವ್ಯಾಖ್ಯಾನಗಳಿಗೆ ಸೂಕ್ತವಾದ ಉದಾಹರಣೆಗಳನ್ನು ಜೋಡಿಸಿ.** (ವ್ಯಾಖ್ಯಾನಗಳು ಮತ್ತು ಉದಾಹರಣೆಗಳನ್ನು ಪ್ರತ್ಯೇಕವಾಗಿ ಕತ್ತರಿಸಿ ಮಿಂಚುಪಟ್ಟಿಗಳನ್ನಾಗಿ ಇಟ್ಟುಕೊಳ್ಳಬೇಕು)

– **ವ್ಯಕ್ತಿ, ಸ್ಥಳ, ವಸ್ತುಗಳ ಹೆಸರುಗಳನ್ನು ಸೂಚಿಸುವ ಪದಗಳಿಗೆ ನಾಮಪದಗಳೆನ್ನುವರು.**

ಉದಾ: ಕಾಡು, ನಾಡು, ಊರು, ಹುಲಿ, ಕಾವೇರಿ, ದಿನೇಶ, ಅಜ್ಜ, ಶಿಕ್ಷಕ, ಡಾಕ್ಟರ್, ಕುರುಡ, ಕಿವುಡ ಇತ್ಯಾದಿ.

– **ಯಾರಿಂದಲೂ ಹೆಸರು ಇಟ್ಟಲ್ಪಟ್ಟಿರದ, ರೂಢಿಯಿಂದ ಬಂದಿರುವ ಪದಗಳಿಗೆ ರೂಢನಾಮಗಳೆನ್ನುವರು. ಇವುಗಳ ಹೆಸರುಗಳು ಬಹುಕಾಲದಿಂದ ರೂಢಿಗತವಾಗಿ ಬಂದಿರುತ್ತವೆ.**

ಉದಾ: ಊರು, ಹಳ್ಳ, ಅಡವಿ, ಪ್ರಾಣಿ ಹುಡುಗ, ಮಗ, ಅಪ್ಪ, ತಾಯಿ, ಅಕ್ಕ, ಬೆಟ್ಟ,

– **ರೂಢನಾಮಗಳಿಗೆ ಮನುಷ್ಯರು ಇಟ್ಟುಕೊಂಡಿರುವ ಹೆಸರುಗಳಿಗೆ ಅಂಕತನಾಮಗಳೆನ್ನುವರು.**

ಉದಾ: ರಾಮ, ಪ್ರಕಾಶ, ರಾಧಾ, ಚಾಮುಂಡಿಬೆಟ್ಟ, ಧಾರವಾಡ

– **ವಾಕ್ಯಗಳಲ್ಲಿ ನಾಮಪದಗಳ ಬದಲಾಗಿ ಬಳಕೆಯಾಗುವ ಪದಗಳಿಗೆ ಸರ್ವನಾಮಗಳೆನ್ನುವರು.**

ಉದಾ: ನಾನು, ನೀನು, ಅವನು, ಅವಳು, ಅದು, ಅವು, ಅವರು, ಇದು ಇವರು, ಇದು, ಇವು ಇತ್ಯಾದಿ.

❖ **ಕೆಳಗಿನ ಸನ್ನಿವೇಶ ಚಿತ್ರಗಳ ಬಗ್ಗೆ ವಾಕ್ಯಗಳನ್ನು ಬರೆ.**

(ವಾಕ್ಯದಲ್ಲಿರುವ ರೂಢನಾಮಗಳಿಗೆ ವೃತ್ತ, ಅಂಕತನಾಮಗಳಿಗೆ ಅಡಿಗೆರೆ, ಅನ್ವರ್ಥಕನಾಮಗಳಿಗೆ ಚೌಕದಿಂದ ಗುರುತುಹಾಕು.)











* **ಕೆಳಗಿನ ಕಥೆಯನ್ನು ಓದಿಕೊಂಡು ಈ ಕಥೆಯಲ್ಲಿ ಬಂದಿರುವ ನಾಮಪದಗಳನ್ನು ನೀಡಿರುವ ಕೋಷ್ಟಕದಲ್ಲಿ ಬರೆಯಿರಿ.**

ಒಂದು ಊರು ಇತ್ತು. ಆ ಊರಿನ ಹೆಸರು ಕಮಲಾನೂರ ಇತ್ತು. ಆ ಊರಿನಲ್ಲಿ ಸೋಮ ಮತ್ತು ಭೀಮ ಎಂಬ ಇಬ್ಬರು ಹುಡುಗರಿದ್ದರು. ಸೋಮನು ಕುರುಡನಾಗಿದ್ದನು. ಭೀಮನು ಡೂಗನಾಗಿದ್ದನು. ಅವರು ಆಟವಾಡುತ್ತಾ ಒಂದು ದಿನ ಕಾಡಿನೊಳಗೆ ಹೊಕ್ಕುಬಿಟ್ಟರು. ಅಲ್ಲಿ ಸಿಗುವ ಹಣ್ಣುಗಳನ್ನು ತಿನ್ನುತ್ತಾ ಕಾಡಿನ ನಡುವೆ ಹೋದರು. ಸ್ವಲ್ಪ ದೂರ ಹೋದ ನಂತರ ಅವರಿಗೆ ಒಬ್ಬ ವ್ಯಾಪಾರಿಯು ಎದುರಾದನು. ಅವನು ಈ ಕಾಡಿನಲ್ಲಿ ಹುಲಿ, ಸಿಂಹ, ಚಿರತೆ, ಕರಡಿಗಳಿವೆ. ನಿಮ್ಮ ನಿಮ್ಮ ಮನೆಗೆ ಹೋಗಿ ಎಂದನು. ಆದರೂ ಸೋಮ ಮತ್ತು ಭೀಮ ಅವನ ಮಾತನ್ನು ಕೇಳಲಿಲ್ಲ. ಮತ್ತೆ ಸ್ವಲ್ಪ ದೂರ ಹೋದ ನಂತರ ಒಂದು ಕರಡಿ ಎದುರಾಯಿತು. ಭೀಮನು ಸೂಮನಿಗೆ ಕರಡಿ ಬರುತ್ತಿದೆ ಎಂದು ಹೇಳಿದನು. ಆಗ ಸೋಮನು ಅಂಜಿದನು. ಭೀಮನು ಗಿಡವನ್ನು ಏರಿ ಕುಳಿತನು. ಸೋಮನು ಒಂದು ಉಪಾಯ ಮಾಡಿದನು. ಗಿಡದ ಕೆಳಗೆ ಸತ್ತಂತೆ ಮಲಗಿದನು. ಆಗ ಕರಡಿ

ಸೋಮನನ್ನು ವಾಸಿಸಿ ನೋಡಿ ಇವನು ಸತ್ತಿದ್ದಾನೆಂದು ತಿಳಿದು ಹೊರಟು ಹೋಯಿತು. ಕರಡಿ ಹೋದ ನಂತರ ಸೋಮ ಮತ್ತು ಭೀಮರು ಅವರ ಮನೆಗೆ ಹೋದರು.

❖ **ಈ ಕಥೆಯಲ್ಲಿ ಬಂದಿರುವ ರೂಢನಾಮ, ಅಂಕಿತನಾಮ, ಅನ್ವರ್ಥಕನಾಮ ಮತ್ತು ಸರ್ವನಾಮಗಳನ್ನು ಪಟ್ಟಿಮಾಡಿ.**

| ರೂಢನಾಮ | ಅಂಕಿತನಾಮ | ಅನ್ವರ್ಥಕನಾಮ | ಸರ್ವನಾಮ |
|---|---|---|---|
| | | | |

❖ **ವಿಭಕ್ತಿ ಪ್ರತ್ಯಯಗಳು**

ರಾಮನು ನಾಯಿಯನ್ನು ಸಾಕಿದ್ದನು. ಅದು ಮನೆಯನ್ನು ಕಾಯುತ್ತಿತ್ತು. ರಾಮನು ನಾಯಿಯನ್ನು ಹಗ್ಗದಿಂದ ಕಟ್ಟಿ ಹಾಕಿ, ಮನೆಯಲ್ಲಿ ಬಿಟ್ಟು ಹೊಲಕ್ಕೆ ಹೋಗುತ್ತಿದ್ದನು. ಹೀಗೆ ಒಂದು ದಿನ ರಾಮನು ಹೊಲಕ್ಕೆ ಹೋಗಿದ್ದನು. ಅವನ ನೆನಪಾಗಿ ನಾಯಿಯು ಹಗ್ಗದಿಂದ ಬಿಡಿಸಿಕೊಂಡು ಹೊಲಕ್ಕೆ ನಡೆಯಿತು. ದಾರಿಯಲ್ಲಿ ಅದು ಒಂದು ತೋಳದ ಕೈಗೆ ಸಿಕ್ಕಿ ಹಾಕಿಕೊಂಡಿತು. ಆ ತೋಳದ ಜೊತೆಗೆ ಕಡಿದಾಡಿ ಗಾಯ ಮಾಡಿಕೊಂಡು ರಾಮನ ಹತ್ತಿರ ಬಂದಿತು. ರಾಮನು ಗಾಬರಿಯಾಗಿ ನಾಯಿಯನ್ನು ಡಾಕ್ಟರ್‌ನ ಹತ್ತಿರ ಕರೆದುಕೊಂಡು ಹೋದನು. ಡಾಕ್ಟರ್‌ನು ನಾಯಿಗೆ ಚಿಕಿತ್ಸೆ ನೀಡಿದನು. ನಾಯಿಯು ಗುಣಮುಖವಾಯಿತು.

❖ **ಈ ಕಥೆಯಲ್ಲಿ ಬಂದಿರುವ ನಾಮಪದಗಳನ್ನು ಪಟ್ಟಿ ಮಾಡಿ.**

*(ಪ್ರತ್ಯಯಗಳ ಸಹಿತವಾಗಿ ಪಟ್ಟಿಮಾಡಲು ಸೂಚಿಸುವುದು)*

______________________________________________

______________________________________________

______________________________________________

______________________________________________

______________________________________________

❖ **ಪಟ್ಟಿ ಮಾಡಿರುವ ನಾಮಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.**

ಮಾದರಿ: ರಾಮ+ಉ = ರಾಮನು

| | | |
|---|---|---|
| | | |
| | | |
| | | |
| | | |
| | | |
| | | |
| | | |
| | | |

**"ಮಕ್ಕಳಿಗೆ ಪರಿಕಲ್ಪನೆಯನ್ನು ಅರ್ಥೈಸಲು ನೆರವಾಗುವ ಸುಗಮಗಾರರ ಟಿಪ್ಪಣಿ":**

ವಾಕ್ಯಗಳಲ್ಲಿ ನಾಮಪದಗಳೊಂದಿಗೆ ಬಳಕೆಯಾಗುವ ಪ್ರತ್ಯಯಗಳಿಗೆ ವಿಭಕ್ತಿ ಪ್ರತ್ಯಯಗಳೆನ್ನುವರು. ಇವುಗಳಿಗೆ ನಾಮಪದಗಳಿಗಿರುವಂತೆ ಸ್ವಂತ ಅರ್ಥ ಇರುವುದಿಲ್ಲ. ನಾಮಪದಗಳೊಂದಿಗೆ ಬಳಕೆಯಾಗಿ ಆ ನಾಮಪದಗಳು ವಾಕ್ಯದಲ್ಲಿ ಒಂದಕ್ಕೊಂದು ಪೂರಕವಾಗಿ ಅರ್ಥವನ್ನು ಹೊರಹೊಮ್ಮಿಸಲು ಈ ವಿಭಕ್ತಿ ಪ್ರತ್ಯಯಗಳು ಸಹಾಯ ಮಾಡುತ್ತವೆ.

ಉದಾ: ಸೀತಾ ಕೂದಲು ಜಡೆ ಹೂವು ಮಾಡಿದ ಹಾರ ಕೊರಳು ಹಾಕಿಕೊಂಡಳು. ಈ ವಾಕ್ಯದಲ್ಲಿ ಹಾಕಿಕೊಂಡಳು ಎಂಬ ಕ್ರಿಯಾಪದವನ್ನು ಹೊರತುಪಡಿಸಿ ಉಳಿದೆಲ್ಲಾ ಪದಗಳು ನಾಮಪದಗಳಾಗಿವೆ. ಈ ತರಹದ ನಾಮಪದಗಳಿರುವ ವಾಕ್ಯವನ್ನು ಓದಿದಾಗ ನಮಗೆ ಅರ್ಥವೇ ಆಗುವುದಿಲ್ಲ. ಅಥವಾ ಭಾಗಶಃ ಅರ್ಥ ಹೊಳೆಯಬಹುದು. ಆದರೆ ನಿಖರ ಮತ್ತು ಪರಿಪೂರ್ಣವಾಗಿ ಅರ್ಥವಾಗಬೇಕಾದರೆ ಅವುಗಳೊಂದಿಗೆ ಸೂಕ್ತ ವಿಭಕ್ತಿ ಪ್ರತ್ಯಯಗಳು ಇರಲೇಬೇಕಾಗುತ್ತದೆ. ಕನ್ನಡದ ಭಾಷೆಯಲ್ಲಿ ಒಟ್ಟು 8 ವಿಭಕ್ತಿ ಪ್ರತ್ಯಗಳು ಇರುತ್ತವೆಂದು ವ್ಯಾಕರಣ ಪುಸ್ತಕಗಳಲ್ಲಿ ಹೇಳಲ್ಪಡಲಾಗಿದೆ. ಆಡುಭಾಷೆ ಮತ್ತು ಬರೆಹಭಾಷೆಯೆರಡರಲ್ಲೂ ಇವುಗಳ ಬಳಕೆಯ ಬಗ್ಗೆ ದ್ವಂದ್ವಗಳಿವೆ. ತೃತಿಯ ಮತ್ತು ಪಂಚಮಿ ವಿಭಕ್ತಿ ಪ್ರತ್ಯಗಳು ರೂಪದಲ್ಲಿ ಒಂದೇಯಾಗಿದ್ದರೂ ವಾಕ್ಯಗಳಲ್ಲಿ ಇವುಗಳ ಬಳಕೆಯಾಗುವಾಗ ಹೊರಡಿಸುವ ಕಾರಕಾರ್ಥಗಳಲ್ಲಿ ಸೂಕ್ಷ್ಮ ವ್ಯತ್ಯಾಸವಿದೆ. ಪ್ರಥಮಾ ವಿಭಕ್ತಿ ಪ್ರತ್ಯಯವು ಬಹುತೇಕವಾಗಿ ನಾಮಪ್ರಕೃತಿಯಲ್ಲಿಯೇ ಅಂತರ್ಗತವಾಗಿದ್ದರೂ ಸಹ ಇನ್ನೂ ಕೆಲವು

ಸಂದರ್ಭಗಳಲ್ಲಿ ನಾಮಪದದೊಂದಿಗೆ ತನ್ನದೇ ಪ್ರತ್ಯಯದೊಂದಿಗೆ ಬಳಕೆಯಾಗಿರುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಎಂಟೂ ವಿಭಕ್ತಿ ಪ್ರತ್ಯಗಳನ್ನು ಗಮನದಲ್ಲಿಟ್ಟುಕೊಂಡು ಪ್ರಶ್ನೆಗಳನ್ನು ಕೇಳುತ್ತಿರುವುದರಿಂದ ಎಂಟೂ ವಿಭಕ್ತಿ ಪ್ರತ್ಯಯಗಳ ಬಗ್ಗೆ ಪರಿಕಲ್ಪನಾತ್ಮಕವಾಗಿ ಮಕ್ಕಳಿಗೆ ತಿಳಿಸಿಕೊಡುವುದು ಮುಖ್ಯವಾಗುತ್ತದೆ. ಅವುಗಳು ಕ್ರಮವಾಗಿ;

| **ವಿಭಕ್ತಿಯ ಹೆಸರುಗಳು** | **ಪ್ರತ್ಯಯಗಳು** | **ಕಾರಕಾರ್ಥಗಳು** |
|---|---|---|
| ಪ್ರಥಮಾ | ಉ | ಕರ್ತೃಕಾರಕ |
| ದ್ವಿತಿಯಾ | ಅನ್ನು | ಕರ್ಮಕಾರಕ |
| ತೃತಿಯಾ | ಇಂದ | ಕರಣಕಾರಕ |
| ಚತುರ್ಥಿ | ಗೆ, ಕ್ಕೆ, ಇಗೆ | ಸಂಪ್ರದಾನಕಾರಕ |
| ಪಂಚಮಿ | ದೆಸೆಯಿಂದ | ಅಪಾದನಾಕಾರಕ |
| ಷಷ್ಠಿ | ಅ | ಸಂಬಂಧಕಾರಕ |
| ಸಪ್ತಮಿ | ಅಲ್ಲಿ | ಅಧೀಕರಣಕಾರಕ |
| ಸಂಬೋಧನೆ | ಏ, ಇರಾ | ಅಭಿಮುಖಿಕಾರಕ |

❖ **ಕೆಳಗಿನ ಕಥೆಯಲ್ಲಿ ನಾಮಪದಗಳೊಂದಿಗೆ ಇರುವ ವಿಭಕ್ತಿ ಪ್ರತ್ಯಯಗಳ ಕೆಳಗೆ ಗೆರೆ ಎಳೆಯಿರಿ.**

ಒಬ್ಬ ಟೋಪಿ ವ್ಯಾಪಾರಿಯು ಇದ್ದನು. ಒಂದು ದಿನ ಟೋಪಿ ವ್ಯಾಪಾರಿಯು ಟೋಪಿಗಳನ್ನು ಮಾರಲು ಕಾಡಿನ ದಾರಿಯ ಮೂಲಕ ಹೋಗುತ್ತಿದ್ದನು. ಕಾಡಿನ ನಡುವೆ ಹೋಗುವಾಗ ಅವನಿಗೆ ಆಯಾಸವಾಯಿತು. ಆಗ ಅವನು ಒಂದು ಗಿಡದ ನೆರಳಿನಲ್ಲಿ ಮಲಗಿಕೊಂಡನು. ಅವನಿಗೆ ನಿದ್ದೆ ಹತ್ತಿದ ನಂತರ ಆ ಗಿಡದಲ್ಲಿ ಇರುವ ಕೋತಿಗಳು ಅವನ ಪುಟ್ಟಿಯಲ್ಲಿರುವ ಟೋಪಿಗಳನ್ನು ತೆಗದುಕೊಂಡು ಗಿಡದ ಮೇಲೆ ಏರಿ ಕುಳಿತವು. ಸ್ವಲ್ಪ ಸಮಯವಾದ ನಂತರ ಟೋಪಿವ್ಯಾಪಾರಿಗೆ ಎಚ್ಚರವಾಯಿತು. ಅವನು ತನ್ನ ಪುಟ್ಟಿಯನ್ನು ನೋಡಿದನು. ಅದರಲ್ಲಿ ಟೋಪಿಗಳು ಕಾಣಿಸಲಿಲ್ಲ. ಗಾಬರಿಯಾಗಿ ಗಿಡದ ಮೇಲೆ ನೋಡಿದನು. ಕೋತಿಗಳ ಕೈಯಲ್ಲಿ ಟೋಪಿಗಳನ್ನು ನೋಡಿದನು. ಅವುಗಳಿಗೆ ಕೈ ಮಾಡಿದನು. ಅವು ಅವನ ಹಾಗೆ ಕೈಮಾಡಿದವು. ವ್ಯಾಪಾರಿಯು ತಲೆಯನ್ನು

ಕೆದರಿಕೊಂಡನು. ಇದನ್ನು ನೋಡಿದ ಕೋತಿಗಳು ತಮ್ಮ ತಲೆಯನ್ನು ಕೆದರಿಕೊಂಡವು. ಆಗ ವ್ಯಾಪಾರಿಯು ತನ್ನ ಕಾಲನ್ನು ತೋರಿಸಿದನು. ಕೋತಿಗಳು ತಮ್ಮ ಕಾಲುಗಳನ್ನು ತೋರಿಸಿದವು. ವ್ಯಾಪಾರಿಯು ಒಂದು ಕಲ್ಲನ್ನು ನೆಲಕ್ಕೆ ಒಗೆದನು. ಕೋತಿಗಳು ತಮ್ಮ ಕೈಯಲ್ಲಿರುವ ಟೋಪಿಗಳನ್ನು ಕೆಳಗೆ ಒಗೆದವು.

❖ **ಸೂಕ್ತ ವಿಭಕ್ತಿ ಪ್ರತ್ಯಗಳನ್ನು ಸೇರಿಸುತ್ತಾ ಕಥೆಯನ್ನು ಪೂರ್ಣಗೊಳಿಸು**

(ಮಕ್ಕಳಿಂದ ಅಭ್ಯಾಸಕ್ಕಾಗಿ ಮಾಡಿಸುವುದು)


ಒಂದು ನಾಯಿ____ ಇತ್ತು. ಅದ__ ತುಂಬಾ ಹಸಿವಾಗಿತ್ತು. ಅದು ಕಾಡು____ ಆಹಾರ____ ಹುಡುಕುತ್ತಾ ಹೋಯಿತು. ಕಾಡು______ ಸ್ವಲ್ಪ ದೂರ ಹೋದ ನಂತರ ಅದ_____ ಒಂದು ಮೂಳೆ ಸಿಕ್ಕಿತು. ಆ ಮೂಳೆ______ ತನ್ನ ಬಾಯಿ_______ ಹಿಡಿದುಕೊಂಡು ಓಡತೊಡಗಿತು. ಹೀಗೆ ಓಡುವಾಗ ಒಂದು ನದಿ_____ ನೋಡಿತು. ಆಗ ಅದು ನದಿ____ ನೀರು_____ ಕುಡಿಯಲು ಹೋಯಿತು. ನದಿ____ ದಂಡೆ____ ಮೇಲೆ ನಿಂತು ಇಣುಕಿತು. ಆ ನೀರು_____ ತನ್ನ ಪ್ರತಿಬಿಂಬ______ ನೋಡಿತು. ನೀರು_____ ಇನ್ನೊಂದು ನಾಯಿ ಇದೆ ಎಂದು ತಿಳಿಯಿತು. ಹಾಗಾಗಿ ಅದು ಆ ನೀರಿನಲ್ಲಿರುವ ತನ್ನ ಪ್ರತಿಬಿಂಬ_____ ಬೊಗಳತೊಡಗಿತು. ಆಗ ಅದರ ಬಾಯಿ_____ ಇರುವ ಮೂಳೆ____ ನೀರಿ_____ ಬಿದ್ದಿತು.

**ಸುಗಮಗಾರರ ಟಿಪ್ಪಣಿ:** ನಾಮಪ್ರಕೃತಿಗಳು ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿಕೊಳ್ಳುವಾಗ ರೂಪಾಂತರಗೊಳ್ಳುತ್ತವೆ. ಮುಖ್ಯವಾಗಿ ನಾಮಪ್ರಕೃತಿಗಳ ಕೊನೆಯ ಸ್ವರವು ಮಾಯವಾಗುತ್ತದೆ/ಲೋಪವಾಗುತ್ತದೆ. ನ, ಯ ಮತ್ತು ವ ವ್ಯಂಜನಗಳು ಹೊಸದಾಗಿ ಸೇರಿಕೊಳ್ಳುತ್ತವೆ. ಉದಾ: ಸೂರ್ಯ+ಉ=ಸೂರ್ಯನು; ಬಾವಿ+ಅನ್ನು=ಬಾವಿಯನ್ನು; ಕರು+ಅನ್ನು=ಕರುವನ್ನು.

**ಥೀಮ್: ಪಠ್ಯಾಂಶವನ್ನು ಓದಿ, ಏನು? ಏಕೆ? ಹೇಗೆ? ಹಾಗಾಗದಿದ್ದರೆ ಎಂಬ ಪ್ರಶ್ನೆಗಳಿಗೆ ತಾರ್ಕಿಕವಾದ ಉತ್ತರಗಳನ್ನು ಬರೆಯುವುದು**

ಈ ಥೀಮ್‌ನಡಿಯಲ್ಲಿ ಮಕ್ಕಳು "ತಾವು ಓದಿದ ವಿಷಯವನ್ನು ಅರ್ಥೈಸಿಕೊಂಡ ನಂತರ ಏನು? ಯಾರು? ಯಾವುದು? ಎಲ್ಲಿ? ಎಂಬಂತಹ ಜ್ಞಾನಾತ್ಮಕ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳುವ/ಬರೆಯುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕೆಂದು ಅಪೇಕ್ಷಿಸಲಾಗುತ್ತದೆ. ಇದಕ್ಕೆ ಮುಂದುವರಿದು ಏಕೆ? ಹೇಗೆ? ಹಾಗಾದರೆ? ಹಾಗಾಗದಿದ್ದರೆ ಎಂಬಂತಹ ತಾರ್ಕಿಕ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳುವ/ಬರೆಯುವ ಸಾಮರ್ಥ್ಯವನ್ನೂ ಹೊಂದಬೇಕೆಂದು ಅಪೇಕ್ಷಿಸಲಾಗುತ್ತದೆ. ತಾರ್ಕಿಕ ಪ್ರಶ್ನೆಗಳಿಗೆ ಉತ್ತರಿಸುವಾಗ ಮಕ್ಕಳು ತಾವು ಓದಿ ಅರ್ಥೈಸಿಕೊಂಡ ವಿಷಯವನ್ನು ಗಮನದಲ್ಲಿಟ್ಟುಕೊಂಡು, ಅದಕ್ಕೆ ತಮ್ಮ ಪೂರ್ವಜ್ಞಾನ ಮತ್ತು ಪೂರ್ವಾನುಭವಗಳನ್ನು ಸಂಪರ್ಕಿಸಿಕೊಂಡು ತಮ್ಮದೇಯಾದ ಅನಿಸಿಕೆಗಳು, ಕಲ್ಪನೆಗಳು, ಹೋಲಿಕೆಗಳು, ವಿಶ್ಲೇಷಣೆಗಳು, ತರ್ಕಗಳು, ಊಹೆಗಳು ಇದೇ ರೀತಿಯಾಗಿ ಉನ್ನತ ಹಂತದ ಆಲೋಚನೆಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಹೀಗೆ ರೂಪಿಸಿಕೊಂಡ ಆಲೋಚನೆಗಳನ್ನು ಭಾಷಿಕವಾಗಿ ಸಂಯೋಜಿಸಿಕೊಳ್ಳಬೇಕಾಗುತ್ತದೆ. ನಂತರ ಭಾಷಾಂಶ ನಿಯಮಗಳನ್ನು ಅನ್ವಯಿಸಿಕೊಳ್ಳುತ್ತಾ ಅವುಗಳನ್ನು ಬರವಣಿಗೆಯಲ್ಲಿ ಅಭಿವ್ಯಕ್ತಿಸಬೇಕಾಗುತ್ತದೆ. ಹಾಗಾಗಿ ಮಕ್ಕಳು ಈ ತರಹದ ಆಲೋಚನೆಗಳನ್ನು ರೂಪಿಸಿಕೊಳ್ಳಲು ನೆರವಾಗುವ ಅವಕಾಶಗಳೂ ಸಹ ಈ ಥೀಮ್‌ಗೆ ಸಂಬಂಧಿಸಿದ ಸಂಪನ್ಮೂಲಗಳಲ್ಲಿ ಇರಬೇಕಾಗುತ್ತದೆ.

- **ಈ ಕೆಳಗಿನ ಚಿತ್ರಗಳನ್ನು ಗಮನಿಸಿ ನಿಮಗೆ ನೆನಪಾದ(ಅನಿಸಿದ) ಕಥೆಯನ್ನು ಬರೆಯಿರಿ.**







❖ **ಮಕ್ಕಳಿಗೆ ಕೆಲವು ಪ್ರಶ್ನೆಗಳನ್ನು ಕೇಳುತ್ತಾ ಮಾತುಕತೆ ಯೊಂದಿಗೆ ಕಲಿಕೆಯಲ್ಲಿ ತೊಡಗಿಸುವುದು.**

ಮಕ್ಕಳೇ, ನಿಮಗೆ ಕಥೆಗಳೆಂದರೆ ಇಷ್ಟನಾ? ಏಕೆ ಇಷ್ಟ?

ನೀವು ಮಲಗುವ ಮುಂಚೆ ಕಥೆಗಳನ್ನು ಕೇಳುತ್ತೀರಾ? ನಿಮಗೆ ಕಥೆಗಳನ್ನು ಯಾರು ಹೇಳುತ್ತಾರೆ?

ಮಕ್ಕಳೇ, ನಿಮಗೆ ಯಾವ ತರಹದ ಕಥೆಗಳೆಂದರೆ ಇಷ್ಟ? ಇದುವರೆಗೂ ನೀವು ಓದಿದ ಕಥೆಗಳೆಷ್ಟು? ನೀವು ಓದಿದ ಕೇಳಿದ ಕಥೆಗಳ ಹೆಸರು ಬರೆ?

ಹಾಗಾದರೆ ನಾವು ಈ ದಿನ ಒಂದು ಕಥೆ ಓದಿ ಅರ್ಥಮಾಡಿಕೊಳ್ಳೋಣವೇ? ಬನ್ನಿ ಹಾಗಾದರೆ,

**ಕೊನೆಯಿಲ್ಲದ ಕಥೆ**

ಒಂದು ಸಾಮ್ರಾಜ್ಯದಲ್ಲಿ ಅಕ್ಬರ ಎಂಬ ವೀರ ಅರಸನಿದ್ದನು. ಅಕ್ಬರ ಒಮ್ಮೆ ಕಾಯಿಲೆ ಬಿದ್ದನು. ಅದೂ ಎಂತಹ ಕಾಯಿಲೆ* ರಾತ್ರಿಯೆಲ್ಲಾ ನಿದ್ದೆ ಬಾರದ ರೋಗ. ಊರಿನ ವೈದ್ಯರೆಲ್ಲಾ ಚಿಕಿತ್ಸೆ ನಡೆಸಿದರು. ಆದರೂ ಫಲಕಾರಿಯಾಗಲಿಲ್ಲ. ಕಡೆಗೆ ರಾಜವೈದ್ಯ ಹೇಳಿದ: "ಚಕ್ರವರ್ತಿಗಳಿಗೆ ಪ್ರತಿ ದಿನ ರಾತ್ರಿ ಮಲಗುವ ಮುಂಚೆ ಕತೆ ಹೇಳಬೇಕು. ಕತೆ ಕೇಳಿ ಅವರ ಮನಸ್ಸು ಪ್ರಫುಲ್ಲವಾಗಿ, ಅವರು ಶಾಂತವಾಗಿ ನಿದ್ರಿಸಬಹುದು" ಹಾಗೆಪಾಳಿಯ ಪ್ರಕಾರ ಆಸ್ಥಾನದಲ್ಲಿದ್ದವರೆಲ್ಲಾ ಪ್ರತಿದಿನವೂ ಅಕ್ಬರನಿಗೆ ಒಂದೊಂದು ಕತೆ ಹೇಳಿದರು. ಕತೆ ಮುಗಿದ ಬಳಿಕವೂ ಚಕ್ರವರ್ತಿ ಆಮೇಲೆ? ಎಂದು ಕೇಳುತ್ತಿದ್ದ. ಅದಕ್ಕೆ ಉತ್ತರಿಸಲಾರದೆ ಎಲ್ಲರೂ ಸೋತರು.

**ಚಿಂತನೆಗೆ ಒಂದಿಷ್ಟು ಪ್ರಶ್ನೆಗಳು?**

- ರಾಜವೈದ್ಯ ಚಕ್ರವರ್ತಿಗೆ ಪ್ರತಿ ರಾತ್ರಿ ಮಲಗುವ ಮುಂಚೆ ಕಥೆ ಹೇಳಲು ಏಕೆ ಹೇಳಿದ?

______________________________________________________

______________________________________________________

______________________________________________________

______________________________________________________

__________________________________

ಕಡೆಗೆ ಅಕ್ಬರ್ ಆಸ್ಥಾನದ ಮಂತ್ರಿಯಾದ ಬೀರಬಲನ ಸರದಿ ಬಂತು. ಅವನು ಒಂದು ಉಪಾಯದೊಂದಿಗೆ ಕತೆ ಹೇಳಲು ಆರಂಭಿಸಿದ:

"ಒಂದು ಕಾಡಿನಲ್ಲಿ ಒಬ್ಬ ಬೇಡನಿದ್ದನು. ಅವನಿಗೆ ಒಂದು ಗುಡಿಸಲಿತ್ತು. ಕಾಡಿನ ಮೃಗಗಳ ಬಗ್ಗೆ ಅವನಿಗೆ ಸೊಲ್ಪವೂ ಹೆದರಿಕೆ ಇರಲಿಲ್ಲ. ಆದರೆ ಹಕ್ಕಿಗಳದೇ ಅವನಿಗೆ ದೊಡ್ಡ ಚಿಂತೆ ಆಗಿತ್ತು." ಯಾಕೆ? ಎಂದು ಕೇಳಿದ ಅಕ್ಬರ, "ಬೇಡನು ಕಾಳುಗಳನ್ನು ತಂದು ಗುಡಿಸಲಿನೊಳಗಿಟ್ಟರೆ ಹಕ್ಕಿಗಳು ಬಂದು ಅವುಗಳನ್ನು ತಿಂದು ಹೋಗುತ್ತಿದ್ದವು– "ಅದಕ್ಕೆ ಆಮೇಲೇ?" "ಹಕ್ಕಿಗಳ ಕಾಟ ತಡೆಯಲು ಬೇಡನು ಒಂದು ಉಪಾಯ ಹೂಡಿದ. ಸಂತೆಗೆ ಹೋಗಿ ಬುಟ್ಟಿಯೊಂದನ್ನು ತಂದು ಅದರಲ್ಲಿ ಕಾಳು ಹಾಕಿ ಭದ್ರವಾಗಿ ಮುಚ್ಚಿದ." ಆಮೇಲೇನಾಯಿತು? ಹಕ್ಕಿಗಳು ಬಂದವು. ಬುಟ್ಟಿಯನ್ನು ಕುಕ್ಕಿದವು. ಕೊಕ್ಕು ನೋವಾಯಿತೇ ವಿನಹ ಕಾಳು ಸಿಗಲಿಲ್ಲ. ಆಗ ಬುದ್ದಿವಂತ ಗುಬ್ಬಚ್ಚಿಯೊಂದು ಉಪಾಯ ಮಾಡಿತು. ಏನು? "ತನ್ನ ಸ್ನೇಹಿತ ಇಲಿಯನ್ನು ಕರೆದು ಬುಟ್ಟಿಯನ್ನು ತೂತು ಮಾಡುವಂತೆ ಹೇಳಿತು". "ಸರಿ, ಆಮೇಲೆ?" "ತೂತಿನಿಂದ ಕಾಳುಗಳು ಕೆಳಗೆ ಬಿದ್ದವು. ಈ ಸುದ್ದಿ ಕಾಡಿನಲ್ಲಿದ್ದ ಹಕ್ಕಿಗಳಿಗೆಲ್ಲಾ ಹೇಗೋ ತಿಳಿಯಿತು, ಸ್ವಲ್ಪ ಹೊತ್ತಿನೊಳಗೆ ಗುಡಿಸಲಿನ ಹೊರಗೆ ತುಂಬಾ ಹಕ್ಕಿಗಳು ನೆರೆದವು. ಎಷ್ಟೆಂದು ಊಹಿಸಬಲ್ಲಿರಾ ಮಹಾಪ್ರಭೂ?" "ಎಷ್ಟು?" ಒಂದಲ್ಲ, ಎರಡಲ್ಲ, ಐನೂರು ಹಕ್ಕಿಗಳು. "ಅಬ್ಬಾ ಆಮೇಲೇನಾಯಿತು?" "ಮೊದಲನೆಯ ಹಕ್ಕಿ ಒಳಗೆ ಹೋಗಿ ಒಂದು ಕಾಳನ್ನು ಕಚ್ಚಿಕೊಂಡು ಬಂದು ಹೊರಗೆ ಹಾರಿಹೋಯಿತು." "ಆಮೇಲೆ?" ಎರಡನೆಯ ಹಕ್ಕಿ ಒಳಗೆ ಹೋಗಿ ಒಂದು ಕಾಳನ್ನು ಕಚ್ಚಿ ಕೊಂಡು ಬಂದು ಹೊರಗೆ ಹಾರಿಹೋಯಿತು." "ಆಮೇಲೇನಾಯ್ತು?" ಮೂರನೆಯ ಹಕ್ಕಿ ಒಳಗೆ ಹೋಗಿ ಒಂದು ಕಾಳನ್ನು ಕಚ್ಚಿ ಕೊಂಡು ಹೊರಗೆ ಹಾರಿ ಹೋಯಿತು. "ಸರಿ, ಮುಂದೆ?" "ನಾಲ್ಕನೆಯ ಹಕ್ಕಿ ಒಳಗೆ ಹೋಗಿ ಒಂದು ಕಾಳನ್ನು,,,,,,,,," ಗೊತ್ತು, ಆಮೇಲೆ?" ಎಂದ ಅಕ್ಬರ ಸಿಟ್ಟಿನಿಂದ. ಐದನೆಯ ಹಕ್ಕಿ ಒಳಗೆ ಹೋಗಿ...." ಅಕ್ಬರ ಸಹನೆ ಕಳೆದುಕೊಂಡು ಕೂಗಿದ: "ಬೀರಬಲ, ಇನ್ನೆಷ್ಟು ಹಕ್ಕಿಗಳು ಉಳಿದಿವೆ ಹೇಳು?" ಮಹಸ್ವಾಮಿ, ಇದುವರೆಗೂ ಐದು ಹಕ್ಕಿಗಳು ಕಾಳನ್ನೆತ್ತಿಕೊಂಡು ಬಂದವು. ಇನ್ನು ನಾಲ್ಕುನೂರ ತೊಂಭತ್ತೈದು ಹಕ್ಕಿಗಳು ಬಾಕಿ ಇವೆ. ಆಂ ನಾನು ಹೇಳ್ತಿದ್ದದೇನುಂದ್ರೆ,,,,,, ಆರನೆಯ ಹಕ್ಕಿ ಒಳಗೆ ಹೋಗಿ,,,,,,,, "ಸಾಕು ನಿಲ್ಲಿಸು ಬೀರಬಲ, ನನಗೆ ನಿದ್ದೆ ಬರ್‍ತಿದೆ" ಎಂದು ಅಕ್ಬರ ಆಕಳಿಸಿದ. ಅಲ್ಲಿಂದ ಮುಂದೆ ಚಕ್ರವರ್ತಿಗೆ ಯಾವ ತೊಂದರೆಯೂ ಇಲ್ಲದೆ ನಿದ್ದೆ ಬರತೊಡಗಿತು.



**ಚಿಂತನೆಗೆ ಒಂದಿಷ್ಟು ಪ್ರಶ್ನೆಗಳು:**

- ರಾಜವೈದ್ಯ ಚಕ್ರವರ್ತಿಗೆ ಪ್ರತಿ ರಾತ್ರಿ ಮಲಗುವ ಮುಂಚೆ ಕಥೆ ಹೇಳಲು ಏಕೆ ಹೇಳಿದ?

- ರಾಜನು ಕತೆ ಹೇಳುವವರಿಗೆ 'ಆಮೇಲೆ' 'ಸರಿ ಆಮೇಲೆ' ಎಂದು ಏಕೆ ಕೇಳುತ್ತಿದ್ದನು?

- ರಾಜನು ನಿದ್ರೆ ಮಾಡಲು ಸಹಾಯವಾದ ತಂತ್ರ ಯಾವುದು ಮತ್ತು ಯಾರದಾಗಿತ್ತು?

- ಬೀರಬಲ್ ಹೇಳಿದ ಕತೆಯು ಏನನ್ನು ಒಳಗೊಂಡಿದೆ? ಹೇಗೆ?

- ಬೀರಬಲ್ ಕಥೆ ಹೇಳಿದ ಅಥವಾ ಕಥೆ ಮುಗಿದ ಮೇಲೂ ರಾಜ ನಿದ್ರಿಸದಿದ್ದರೆ ಮುಂದೇನಾಗುತ್ತಿತ್ತು?

------------------------------------------------------------------------------------------------------------
------------------------------------------------------------------------------------------------------------
-----------

- ಬೀರಬಲ್‌ನ ಸ್ಥಾನದಲ್ಲಿ ನೀವಿದ್ದರೆ ಏನು ಮಾಡುತ್ತಿದ್ದಿರಿ?

------------------------------------------------------------------------------------------------------------
------------------------------------------------------------------------------------------------------------
------------------------------------------------------------------------------------------------------------
------------------------------------------------------------------------------------------------------------
------------------------------------------------------------------------------------------------------------
------------------------------------------------------------------------------------------------------------
---------

- ಬೀರಬಲ್ ಚಕ್ರವರ್ತಿಗೆ ಆ ಕಥೆಯನ್ನು ಏಕೆ ಹೇಳಿದ?

------------------------------------------------------------------------------------------------------------
------------------------------------------------------------------------------------------------------------
------------------------------------------------------------------------------------------------------------
------------------------------------------------------------------------------------------------------------
------------------------------------------------------------------------------------------------------------
----------------

❖ **ಕೆಳಗಿನ ಪದ್ಯವನ್ನು ಓದಿಕೊಂಡು ಕೇಳಿರುವ ಪ್ರಶ್ನೆಗಳಿಗೆ ಉತ್ತರ ಬರೆ.**

## ಸೋಮಾರಿ ಮಿಡತೆ



ಕುಣಿದು ಕುಪ್ಪಳಿಸುವೆ ನಾನು
ಆಚೆ ಈಚೆ ಹಾರುವೆ ನಾನು
ಹಸಿರಣ್ಣ ನನ್ನ ಹೆಸರು
ಹಾರಾಡುವ ಮಿಡತೆ ನಾನು.



ಹಚ್ಚ ಹಸಿರು ನನ್ನ ಬಣ್ಣ
ಆಟ ಆಡುವುದೇ ಬಲು ಚನ್ನ
ಹುಲ್ಲಲ್ಲಿ ಆಡುವೆ, ಆಕಾಶಕ್ಕೆ ಹಾರುವೆ
ಕುಣಿದು ಕುಪ್ಪಳಿಸುವೆ ನಾನು
ಓಹ್!. ಪುಟಾಣಿ ಚುಕ್ಕೆ
ಓಡುವಿರಾದರೂ ಏತಕ್ಕೆ

ಓಹೋ!. ನನ್ನ ಮಾತಾದರೂ ಕೇಳಿ
ಎಲ್ಲಿ ಹೊರಟಿರಿ, ಯಾರಾದರೂ ಹೇಳಿ
ಹೇಳುಲು ಬಿಡುವಿಲ್ಲ,
ಕೇಳಲು ವೇಳೆ ಇಲ್ಲ
ಕೆಲಸದಲ್ಲಿ ನಿರತ ನಮಗೆ
ನಿಲ್ಲಲೂ ಸಮಯವಿಲ್ಲ
ಸ್ವಲ್ಪ ಹೊತ್ತು ಆಡಿ, ಒಂದಿನಿತು ಮಾತಾಡಿ
ಕೆಲಸವಿರಲಿ ಪಕ್ಕಕ್ಕೆ ಕಿಂಚಿತ್ತಾದರೂ ನೆಗೆದಾಡಿ



ನುಡಿಯಲು ವೇಳೆ ಇಲ್ಲ, ಆಡಲು ಬಿಡುವಿಲ್ಲ

ತಿನಿಸು ಒಟ್ಟು ಮಾಡಬೇಕು ನಗಲು ಕೂಡ ವೇಳೆ ಇಲ್ಲ


ಹೇ ಹೇ ಹೇ ಹೇ ಕೆಲಸವೇಕೆ ಮಾಡಬೇಕು?

ಕುಣಿದು ಕುಪ್ಪಳಿಸುವೆ ನಾನು ಆಚೆ ಈಚೆ ಹಾರುವೆ
ನಾನು ನಕ್ಕು ನಲಿದು ಆನಂದ ಪಡಿರಿ

ಕೆಲಸಮಾಡಿ ಏಕೆ ದಣಿಯುವಿರಿ

ನನ್ನೆಡೆಗಡ ನೋಡಿ ಮಜಾ ಮಾಡಲು ಕಲಿಯಿರಿ

ನಕ್ಕು ನಲಿದು ಕುಪ್ಪಳಿಸಿ ಬದುಕಲು ಕಲಿಯಿರಿ





ಕೆಲ ದಿನಗಳ ನಂತರ..... ರಿಮಝಿಮ ಮಳೆ ಸುರಿಯಿತು

ಥೈ ಥೈ ಥೈ ಥೈ ನವಿಲು ಕುಣಿಯಿತು

ಹಸಿರಣ್ಣ ಮಳೆಯಲಿ ನೆನೆದ

ನೋಡುನೋಡುತಾ ಮೈ ಮರೆತು ಹೋದ

ದೋ ದೋ ಮಳೆ ಸುರಿಯಿತು

ಹಸಿರಣ್ಣನ ತುಂಟಾಟ ನಡೆದಿತ್ತು

ಜೋರಾದ ಮಳೆ ಸುರಿಯುತಿತ್ತು

ಮಿಡತೆ ಅದ ನೋಡಿ ದಣಿಯುತ್ತಿತ್ತು

ಕುಣಿತ ಜಿಗಿತ ನಿಂತು ಹೋಯಿತು

ತಿಂಡಿ ತೀರ್ಥ ಮುಗಿದು ಹೋಯಿತು

ದಣಿದು ದಣಿದು ಹಸಿರಣ್ಣ ಕುಳಿತ



ಹಸಿವೆಯಿಂದ ಬಳಲಿ ಬೆವೆತ

ಕೊನೆಗೊಮ್ಮೆ ಮಳೆ ನಿಂತುಹೋಯಿತು



ಇರುವೆಗಳ ಉತ್ಸಾಹದ ದನಿ ಹೊಮ್ಮಿತು

ಇರುವೆಗಳು ಕುಣಿಯಲಾರಂಭಿಸಿದವು

ಕೂಡಿಟ್ಟ ತಿನಿಸು ತಿನ್ನಲಾರಂಭಿಸಿದವು

ಒಂದು ಇರುವೆ ಮಿಡತೆಯ ನೋಡಿತು

ಮಿಡತೆಯ ಮೇಲೆ ಕರುಣೆ ಸೃಜಿಸಿತು

ಹಸಿರಣ್ಣನಿಗೆ ತಿನಿಸು ಕೊಟ್ಟಿತು

ಪಾಪ! ಹಸಿರಣ್ಣ ಅಳಲು ತೊಡಗಿತು

ನನ್ನದು ತಪ್ಪಾಯಿತು ಇರುವೆ

ಇನ್ನೆಂದೂ ಹೀಗೆ ಮಾಡಲಾರೆ

ಕೆಲಸ ಮಾಡದೇ ಇರಲಾರೆ

ಸೋಮಾರಿ ರಾಗ ಹಾಡಲಾರೆ

ಯಾವತ್ತೂ ಆನಂದದಿಂದ ಹಾಡುತಲಿರು

ಕೆಲಸ ಕೂಡ ಮಾಡುತಲಿರು

ಕೆಲಸ ಮಾಡುತ್ತಾ ಹಾಡುತ್ತಲಿರು

ನಿನ್ನ ಮಂಜುಳ ರಾಗ ಎಲ್ಲರಿಗೂ ಕೇಳಿಸುತ್ತಿರಲಿ

❖ **ಈ ಮೇಲಿನ ಪದ್ಯವನ್ನು ಕೇಳಿದ ಮೇಲೆ ನಿನಗೆ ಅನಿಸಿದ ಅನಿಸಿಕೆ ಬರೆಯಿರಿ**

ಇರುವೆಗಳಿಗೆ ಯಾವ ತೊಂದರೆ ಆಗಲಿಲ್ಲ? ಏಕೆ?

ಇರುವೆ, ಮಿಡತೆಯಂತೆ ನಮಗೂ ಆಗುವ ತೊಂದರೆಗಳಾವುವು? ಹಾಗಾದರೆ ನಾವು ಏನು ಮಾಡಬೇಕು?

ನೀ ಓದಿದ ಯಾವುದಾದರೂ ಈ ತರದ ಕವನ, ಪದ್ಯವನ್ನು ಬರೆಯಿರಿ.

ಮಿಡತೆಯು ಯಾವ ಕಾಲದಲ್ಲಿ ಆಟದ ಮೂಲಕ ಕಾಲಹರಣ ಮಾಡಿತು? ಅದಕ್ಕೆ ತೊಂದರೆ ಯಾದ ಕಾಲ ಯಾವುದು? ಏಕೆ?

## ❖ ಕೆಳಗಿನ ಕಥೆಗಳನ್ನು ಓದಿ ಅರ್ಥೈಸಿಕೊಂಡು ಕೇಳಲಾದ ತಾರ್ಕಿಕ ಪ್ರಶ್ನೆಗಳಿಗೆ ಉತ್ತರಿಸು


**ತಾರ್ಕಿಕ ಪರಿಕಲ್ಪನೆ**

"ಪಠ್ಯಾಂಶವನ್ನು ಓದಿ, ಏನು? ಏಕೆ? ಹೇಗೆ? ಹಾಗಾಗದಿದ್ದರೆ ಎಂಬ ಪ್ರಶ್ನೆಗಳಿಗೆ ತಾರ್ಕಿಕವಾದ ಉತ್ತರಗಳನ್ನು ಬರೆಯುವುದು.". ಎಂಬ ಈ ಸಾಮರ್ಥ್ಯವು 4 ಮತ್ತು 5ನೇ ತರಗತಿಯ ಕಲಿಕಾಂಶಗಳಲ್ಲಿಯೇ ಇರುವುದನ್ನು ನಾವು ನೋಡಬಹುದು ಅದು ವಿಶಾಲವಾದ ವ್ಯಾಪ್ತಿಯನ್ನು ಪಡೆಯುವುದು. 6ನೇ ಮತ್ತು 7ನೇ ತರಗತಿಯ ನಂತರದ ಕಲಿಕಾಂಶಗಳಲ್ಲಿ ಇವು ಮುಂದುವರಿಯುವುದು. ಭಾಷೆ ಮೂಲಪರಿಕಲ್ಪನೆಗಳಲ್ಲಿ ತಾರ್ಕಿಕವಾದ ಮಾತುಗಾರಿಕೆ ಮತ್ತು ಬರವಣಿಗೆಯು ಬಹುಮುಖ್ಯವಾದ ವಿಷಯಾಂಶಗಳು ಈ ಸಾಮರ್ಥ್ಯದ ಅಭಿವೃದ್ಧಿಗಾಗಿ ನಾವು ತರಗತಿ ಕೋಣೆಯಲ್ಲಿ ಪಠ್ಯವನ್ನು ಬೋಧಿಸುವುದ ಜೊತೆಗೆ ಕೆಲವು ಚಟುವಟಿಕೆಗಳನ್ನು/ಕಾರ್ಯಹಾಳೆಗಳನ್ನು ಮಾಡಬೇಕಾಗಿರುತ್ತದೆ ಅವು 5 ಕೌಶಲಗಳನ್ನು (ಆಲಿಸುವುದು, ಮಾತುಗಾರಿಕೆ ಓದುವುದು ಬರವಣಿಗೆ ಮತ್ತು ಯೋಚನೆ)ಒಳಗೊಳುವಿಕೆಯಿಂದ ಕೂಡಿರಬಹುದು. ಆದರೆ ನಾವು ತರಗತಿ ಕೋಣೆಯಲ್ಲಿ ಓದುಗಾರಿಕೆ ಮತ್ತು ಬರವಣಿಗೆ ಸಂಬಂಧಿಸಿದಂತೆ ಹೆಚ್ಚು ಗಮನವಹಿಸಬೇಕು.

| ಕ್ರ ಸಂ | ಚಟುವಟಿಕೆಯ ಹೆಸರು | ಪ್ರಕ್ರಿಯೆ |
|---|---|---|
| 1 | ಕಪ್ಪು ಬಣ್ಣದ ಬಲೂನು ಮೇಲೇರುವುದೇ? | ಈ ಕಾರ್ಯಹಾಳೆಯನ್ನು ಮಕ್ಕಳಿಗೆ ನೀಡಬೇಕು ಅವರು ಕಥೆಯನ್ನು ಓದಿ ಅರ್ಥಮಾಡಿಕೊಳ್ಳುವಾಗ ಸುಗಾಮಕಾರರು ಕಥೆಯ ಬಗ್ಗೆ ಮೊದಲಿಗೆ ವಿವರಣೆ ನೀಡಬೇಕು ಜೊತೆಗೆ ಗಮನಿಸಬೇಕಾದ ಹೊಸಪದಗಳ ಬಗ್ಗೆ ಪರಿಚಯಿಸಬೇಕು ನಂತರ ಮಕ್ಕಳು ಕಥೆಯನ್ನು ಅರ್ಥಮಾಡಿಕೊಂಡು ಮೇಲಿನ ಪ್ರಶ್ನೆಗಳಿಗೆ ಉತ್ತರಿಸುವರು |
| 2 | ಜಾಣ್ಮೆ | ಈ ಕಾರ್ಯಹಾಳೆಯನ್ನು ಮಕ್ಕಳಿಗೆ ನೀಡಬೇಕು ಅವರು ಕಥೆಯನ್ನು ಓದಿ ಅರ್ಥಮಾಡಿಕೊಳ್ಳುವಾಗ ಸುಗಾಮಕಾರರು ಕಥೆಯ ಬಗ್ಗೆ ಮೊದಲಿಗೆ ವಿವರಣೆ ನೀಡಬೇಕು ಜೊತೆಗೆ ಗಮನಿಸಬೇಕಾದ ಹೊಸಪದಗಳ ಬಗ್ಗೆ ಪರಿಚಯಿಸಬೇಕು ನಂತರ ಮಕ್ಕಳು ಕಥೆಯನ್ನು ಅರ್ಥಮಾಡಿಕೊಂಡು ಮೇಲಿನ ಪ್ರಶ್ನೆಗಳಿಗೆ ಉತ್ತರಿಸುವರು |
| 3 | ಸಂಭಾಷಣ ಪಟ್ಟಿಗಳು | ಮಕ್ಕಳ ಜೊತೆ ಕೆಲವು ಸಂಭಾಷಣೆಗಳನ್ನು ನೀಡಿ ಅವರು ಅದರ ಬಗ್ಗೆ ಮಾತನಾಡವಾಗೆ ಮಾಡುವುದು ಮಕ್ಕಳು ಮಾತನಾಡುವಾಗೆ ಏನು ಏಕೆ ಹೇಗೆ ಎಂಬ ತಾರ್ಕಿಕ ತಿರ್ಮಾನದ ವಿಷಯಾಂಶಗಳು ಬಂದು ಹೋಗುವಾಗೆ ಮಾಡುವುದು ನಂತರ ಅವುಗಳನ್ನು ಬರವಣಿಗೆಯಲ್ಲಿ ಅಭಿವ್ಯಕ್ತಿ ಪಡಿಸುವರು . |
| 4 | ಕತ್ತೆಯ ಉಪಾಯ | ಈ ಕಾರ್ಯಹಾಳೆಯನ್ನು ಮಕ್ಕಳು ಓದಿ ಕಥೆಯನ್ನು ಮುಂದೆ ನಡೆದಿರಬಹುದಾದ ಘಟನೆಯುನ್ನು ಊಹಿಸಿಕೊಂಡು ಬರೆಯಬೇಕು ಈ ಪ್ರಕಿಯೆಯಲ್ಲಿ ಮಕ್ಕಳಿಗೆ ಉನ್ನತ ಹಂತದ ಆಲೋಚನೆಗಳಾದ ಊಹೆ ತರ್ಕ ವಿಶ್ಲೇಷಣೆ ವಿಮರ್ಶೆ ಈ |

| | | |
|---|---|---|
| | | ಅಂಶಗಳು ಮಕ್ಕಳಲ್ಲಿ ಬೆಳವಣಿಗೆಯಾಗುವಾಗೆ ಮಾರ್ಗದರ್ಶನ ಮಾಡುವುದು. |
| ೫ | ಆಸೆಯೇ ಅಧಃಪತನಕ್ಕೆ ಕಾರಣ. | ಈ ಕಾರ್ಯಹಾಳೆಯಲ್ಲಿ ಕೆಲವು ಮುಖ್ಯವಿಷಯಗಳನ್ನು ಮಕ್ಕಳು ಖಾಲಿಬಿಟ್ಟ ಸ್ಥಳದಲ್ಲಿ ತಮ್ಮ ಅನುಭವದ ಆಧಾರದ ಮೇಲೆ ಬರೆಯುವಾಗೆ ಮಾಡಬೇಕು ಅವರು ಕಥೆಯನ್ನು ಓದುವಾಗ ಅದರಲ್ಲಿ ಬಳಸಬಹುದಾದ ನಾಮಪದಗಳು ಕ್ರಿಯಪದಗಳು ತಾರ್ಕಿಕವಾಗಿ ಯೋಚಿಸಿ ಬರೆಯಬೇಕಾಗುತ್ತದೆ ಆದರಿಂದ ಸುಗಮಕಾರರು ಅವರಿಗೆ ಮಾರ್ಗದರ್ಶನ ಮಾಡಬೇಕು. |

## 4. ಕಪ್ಪು ಬಣ್ಣದ ಬಲೂನು ಮೇಲೇರುವುದೇ?



ದುಂಡುಮಲ್ಲಿಗೆ ಹೆಸರಿಗೆ ತಕ್ಕ ಹಾಗೆ ಸುಂದರವಾದ ಹಳ್ಳಿ. ಮೂರು ವರ್ಷಗಳಿಗೊಮ್ಮೆ ನಡೆಯುವ ಮಾರಿಜಾತ್ರೆ ಸುತ್ತಮುತ್ತಲೂ ಬಹಳ ಪ್ರಸಿದ್ಧವಾಗಿತ್ತು. ಈ ವರ್ಷ ಜಾತ್ರೆಯನ್ನು ನೋಡಲು ಪಕ್ಕದ ಹಳ್ಳಿಯಾದ ತಣ್ಣೀರುಬಾವಿಯಿಂದ ಕಪ್ಪಣ್ಣ ಬಂದಿದ್ದನು. ಕಪ್ಪಣ್ಣ ಹತ್ತು ವರ್ಷದ ಬಾಲಕ. ಹೆಸರಿಗೆ ತಕ್ಕ ಹಾಗೆ ಕಪ್ಪು. ತೊಳೆದ ಕೆಂಡ ನಾಚುವಷ್ಟು ಕಪ್ಪು. ತನ್ನ ಬಣ್ಣದಿಂದಲೇ ಅವನಿಗೆ ಒಂದು ರೀತಿಯ ಕೀಳರಿಮೆ.

ಕಪ್ಪಣ್ಣ ಜಾತ್ರೆಯ ತುಂಬಾ ಓಡಾಡಿದನು. ಅವನಿಗೆ ಜಾತ್ರೆಯಲ್ಲಿ ಮಾರುತ್ತಿದ್ದ ಗ್ಯಾಸ್ ಬಲೂನುಗಳು ಆಕರ್ಷಕವಾಗಿ ಕಂಡವು. ಅಲ್ಲಿ ಬಣ್ಣ ಬಣ್ಣದ ಬಲೂನುಗಳಿದ್ದವು. ಕೆಂಪು, ನೀಲಿ, ಕೇಸರಿ, ಬಿಳಿ, ಹೀಗೆ ಎಲ್ಲ ರೀತಿಯ ಬಣ್ಣದ ಬಲೂನುಗಳಿದ್ದವು.

ಬಲೂನು ಮಾರುವವನು ತನ್ನ ಸೈಕಲ್ಲಿನಲ್ಲಿ ಎಂತಹುದೋ ಒಂದು ಕಬ್ಬಿಣದ ಪಾತ್ರೆಯನ್ನು ಕಟ್ಟಿಕೊಂಡಿದ್ದನು. ಅದರ ಮೂತಿಗೆ ಬಲೂನನ್ನು ಹಿಡಿದು ಒತ್ತಿದರೆ ಸಾಕು, ಬಲೂನಿನ ತುಂಬ ಎಂತಹುದೋ ಗಾಳಿ ತುಂಬಿಕೊಳ್ಳುತ್ತಿತ್ತು. ಬಲೂನು ಉಬ್ಬಿ ದೊಡ್ಡದಾಗುತ್ತಿತ್ತು. ಅದರ ಬಾಯಿಗೊಂದು ಉದ್ದದ ದಾರವನ್ನು ಕಟ್ಟಿ ಸೈಕಲ್ ಹ್ಯಾಂಡಲ್ಲಿಗೆ ಕಟ್ಟುತ್ತಿದ್ದನು. ಆ ಎಲ್ಲಾ ಬಲೂನುಗಳು ಗಾಳಿಯಲ್ಲಿ ಅತ್ತಿಂದಿತ್ತ ಹಾರಾಡುತ್ತಿದ್ದವು.

ಕಪ್ಪಣ್ಣನು ಬಲೂನಿನವನ ಚೀಲದಲ್ಲಿ ನೋಡಿದನು. ಅಲ್ಲಿ ಎಲ್ಲ ಬಣ್ಣದ ಬಲೂನುಗಳಿದ್ದವು. ಕಪ್ಪು ಬಣ್ಣದ ಬಲೂನೂ ಇತ್ತು. ಅದನ್ನು ಕಂಡು ಕಪ್ಪಣ್ಣನಿಗೆ ಆಸೆಯಾಯಿತು.

*"ಅಣ್ಣ ಅಣ್ಣಾ – ಆ ಕಪ್ಪು ಬಲೂನೂ ಸಹಾ ಎಲ್ಲ ಬಲೂನುಗಳಂತೆ ಮೇಲೆ ಮೇಲೆ ಏರಬಲ್ಲುದೆ ಅಣ್ಣ?"* ಬಿಟ್ಟಕಣ್ಣುಗಳಿಂದ ಕಪ್ಪಣ್ಣ ಕೇಳಿದಾಗ, ಬಲೂನಿನವನು ನಸುನಕ್ಕು, ಈ ಸಲ ಕಪ್ಪು ಬಣ್ಣದ ಬಲೂನನ್ನು ತೆಗೆದುಕೊಂಡು ಅದರಲ್ಲಿ ಗ್ಯಾಸನ್ನು ತುಂಬಿಸಿದನು. ಗ್ಯಾಸ್ ತುಂಬುವಾಗ ಬಲೂನು ದೊಡ್ಡದಾಗುವುದನ್ನು ನೋಡಿದನು ಕಪ್ಪಣ್ಣ. ಅವನ ಆನಂದಕ್ಕೆ ಪಾರವೇ ಇರಲ್ಲಿಲ್ಲ. ಬಲೂನಿನವನು ಗ್ಯಾಸನ್ನು ನಿಲ್ಲಿಸಿ ಬಲೂನಿನ ಬಾಯಿಗೆ ಒಂದು ಪುಟ್ಟದಾರವನ್ನು ಕಟ್ಟಿದನು. ಬಲೂನನ್ನು ಕಪ್ಪಣ್ಣನ ಕೈಗೆ ಕೊಟ್ಟನು. ***"ಪುಟ್ಟ... ಈ ಬಲೂನನ್ನು***

5

***ನೀನು ಹಾರಿಬಿಡು! ಮೇಲಕ್ಕೆ ಹಾರಿ ಬಿಡು"*** ಎಂದನು. ಕಪ್ಪಣ್ಣನಿಗೆ ಎಂದೂ ಇಷ್ಟು ಸಂತೋಷವಾಗಿರಲಿಲ್ಲ. ನಿಂತ ಸ್ಥಳದಲ್ಲಿಯೇ ಒಂದು ಸಲ ಮೇಲಕ್ಕೆ ಹಾರಿ ಎರಡೂ ಕೈಗಳನ್ನು ಬಿಟ್ಟನು. ಕಪ್ಪು ಬಣ್ಣದ ಬಲೂನು ಮೇಲೆ ಮೇಲಕ್ಕೆ ಏರತೊಡಗಿತು. ಸುತ್ತಮುತ್ತಲಿದ್ದ ಮರಗಳಿಗಿಂತ ಮೇಲಕ್ಕೆ ಏರಿತು. ಮಾರಿಗುಡಿಯ ಶಿಖರಕ್ಕಿಂತ ಮೇಲಕ್ಕೆ ಏರಿತು. ನೋಡು ನೋಡುತ್ತಿರುವಂತೆಯೇ ನೀಲಿಯ ಬಾನಿನಲ್ಲಿರುವ ಬಿಳೀ ಮೋಡಗಳ ಕಡೆಗೆ ತೇಲುತ್ತಾ ಹೋಯಿತು.

**"ಪುಟ್ಟಾ ... ಬಲೂನಿನ ಬಣ್ಣ ಯಾವತ್ತೂ ಮುಖ್ಯವಲ್ಲ ಅದರೊಳಗಿರುವ ವಸ್ತುವಿನ ಗುಣ ಲಕ್ಷಣ ಮುಖ್ಯ"** ಎನ್ನುತ್ತ ಕಪ್ಪಣ್ಣನ ತಲೆಯನ್ನು ಸವರಿದನು. ಕಪ್ಪಣ್ಣ – 'ಓಹೋ! ಕಪ್ಪುಬಣ್ಣದ ಬಲೂನೂ ಮೇಲೆ ಹಾರುತ್ತೆ, ಎತ್ತರಕ್ಕೆ ಹಾರುತ್ತೆ..... ಹಹಹಹ... ಹಹ....' ಎಂದು ಹೇಳುತ್ತ, ಕುಣಿಯುತ್ತ, ನೆಗೆಯುತ್ತಾ ತನ್ನ ಸ್ನೇಹಿತರನ್ನು ಹುಡುಕಿಕೊಂಡು ಹೊರಟನು.

1 ಕಪ್ಪಣ್ಣ ಯಾವ ಹಳ್ಳಿಯಿಂದ ಜಾತ್ರೆಗೆ ಬಂದಿದ್ದನು.?

____________________________________________________________

____________________________________________________________

____________________________________________________________

2 ಜಾತ್ರೆಯಲ್ಲಿ ಕಪ್ಪಣ್ಣನಿಗೆ ಆಕರ್ಷಕವಾಗಿ ಕಂಡದು ಏನು? ಅದು ಏಕೆ.?

–

**ಪ್ರಶ್ನೆಗಳು :**

1. ಯಾವ ಯಾವ ಬಣ್ಣದ ಬಲೂನುಗಳನ್ನು ಕಪ್ಪಣ್ಣನು ಜಾತ್ರೆಯಲ್ಲಿ ನೋಡಿದನು?

..............................................................................

..............................................................................

2. ಈ ಕಥೆಯಿಂದ ತಿಳಿದು ಬರುವ ನೀತಿ ಏನು?

..............................................................................

..............................................................................

..............................................................................

3. ಈ ಪದಗಳಿಂದ ಸ್ವಂತ ವಾಕ್ಯ ರಚಿಸು.

1. ಬಲೂನು : ..............................................................

..............................................................................

..............................................................................

2. ಜಾತ್ರೆ : ..............................................................

..............................................................................

6

3 ಯಾವ ಯಾವ ಬಣ್ಣದ ಬಲೂನುಗಳು ಜಾತ್ರೆಯಲ್ಲಿದವು ನಿನಗೆ ಇಷ್ಟವಾದ ಬಣ್ಣದ ಬಲೂನ ಯಾವುದು? ಅದರ ಬಗ್ಗೆ ಮೂರು ನಾಲ್ಕು ವಾಕ್ಯದಲ್ಲಿ ಬರೆಯಿರಿ.

——————————————————————————————

——————————————————————————————

——————————————————————————————

——————————————————————————————

4 "ಅಣ್ಣ ಅಣ್ಣಾ– ಆ ಕಪ್ಪು ಬಲೂನೂ ಸಹಾ ಎಲ್ಲ ಬಲೂನುಗಳಂತೆ ಮೇಲೆ ಮೇಲೆ ಏರಬಲ್ಲುದೆ ಅಣ್ಣ"? ಅಂತ ಕಪ್ಪಣ್ಣ ಏಕೆ ಕೇಳಿದ ಎಂದು ಯೋಚಿಸಿ, ನಾಲ್ಕು–ಐದು ವಾಕ್ಯದಲ್ಲಿ ಬರೆಯಿರಿ.

——————————————————————————————

——————————————————————————————

——————————————————————————————

-----------------------------------------------------------------------------------------
-----------------------------------------------------------------------------------------

5 ಈ ಕಥೆಯಲ್ಲಿ ಯಾವ ಯಾವ ಲೇಖನ ಚಿಹ್ನೆಗಳಿವೆ ಎಂಬುದನ್ನು ಪಟ್ಟಿ ಮಾಡಿ ಬರೆ.?

-----------------------------------------------------------------------------------------
-----------------------------------------------------------------------------------------
-----------------------------------------------------------------------------------------
-----------------------------------------------------------------------------------------
-----------------------------------------------------------------------------------------
-----------------------------------------------------------------------------------------

## ಜಾಣ್ಮೆ




ಚಂದ್ರನಗರದ ಅರಸ ಚಂದ್ರಸೇನನ ಏಕೈಕ ಪುತ್ರಿ ಸುಮತಿ ಎಂಬ ಹುಡುಗಿ ಇದ್ದಳು. ಇವಳು ತುಂಬ ಸುಂದರಳು, ಬುದ್ಧಿವಂತಳು ಆಗಿದ್ದಳು. ತನ್ನ ರೂಪ ಹಾಗೂ ಬುದ್ಧಿವಂತಿಕೆಯ ಬಗ್ಗೆ ಅವಳಿಗೆ ತುಂಬ ಹೆಮ್ಮೆಯಿತ್ತು. ಪ್ರೌಢಾವಸ್ಥೆಗೆ ಬಂದ ಮೇಲೆ ಅರಸ ಅವಳ ವಿವಾಹ ಮಾಡಲು ಬಯಸಿದ. ಆದರೆ ರಾಜಕುಮಾರಿ, 'ಅಪ್ಪಾ ನನಗಿಂತ ಬುದ್ಧಿವಂತನಾಗಿರುವ ಯುವಕನ ಜೊತೆ ಮಾತ್ರ ನಾನು ಮದುವೆಯಾಗುವೆ' ಎಂದು ಹೇಳಿದಳು. ಆದರೆ, ಅಂತಹ ಯುವಕನನ್ನು ಹುಡುಕುವುದು ಹೇಗೆ ಎಂದು ಅರಸನಿಗೆ ಚಿಂತೆಯಾಯಿತು. 'ಅದನ್ನು ನನಗೆ ಬಿಡಿ' ಎಂದು ಹೇಳಿದ ಸುಮತಿ ಆಳುಗಳ ಅವರ ಸಹಾಯದಿಂದ ಅರಮನೆಯ ಒಂದು ದೊಡ್ಡ ಮರಕ್ಕೆ ತೂಗುವ ಮಂಚವನ್ನು ಕಟ್ಟಿಸಿದಳು. ಮರುದಿನ ಮುಂಜಾನೆ ಅರಸ ಮಗಳ ಆದೇಶದಂತೆ ತನ್ನ ರಾಜ್ಯದಲ್ಲಿ ಡಂಗುರ ಸಾರಿಸಿದ, 'ಯಾರು ರಾಜಕುಮಾರಿ ಹಾಕುವ ಷರತ್ತನ್ನು ಗೆಲ್ಲುವರೋ ಅವರು ರಾಜಕುಮಾರಿಯನ್ನು ವಿವಾಹವಾಗಬಹುದು' ಎಂದು. ರಾಜಕುಮಾರಿಯ ರೂಪ ಹಾಗೂ ಬುದ್ಧಿವಂತಿಕೆಯ ಖ್ಯಾತಿ ದೂರದವರೆಗೆ ಹರಡಿತ್ತು. ಹೀಗಾಗಿ

ರಾಜಕುಮಾರಿಯನ್ನು ವರಿಸುವುದಕ್ಕಾಗಿ ದೂರದ ಊರುಗಳಿಂದ ರಾಜಕುಮಾರರು ಚಂದ್ರನಗರಕ್ಕೆ ಬಂದರು. ರಾಜಕುಮಾರಿ ಮರಕ್ಕೆ ಕಟ್ಟಿದ ತೂಗುಮಂಚದಿಂದ ನನ್ನನ್ನು ಯಾರೂ ಕೆಳಗೆ ಇಳಿಸುವರೋ ಆ ಯುವಕನನ್ನು ತಾನು ಮದುವೆಯಾಗುವುದಾಗಿ ಅವಳು ಷರತ್ತು ವಿಧಿಸಿದಳು. ಬಂದ ರಾಜಕುಮಾರರೆಲ್ಲ ನಾನಾ ರೀತಿಯಿಂದ ಪ್ರಯತ್ನಿಸಿದರು. ಆದರೆ, ಯಾರಿಗೂ ಅವಳನ್ನು ತೂಗುಮಂಚದಿಂದ ಕೆಳಗಿಳಿಸಲು ಸಾಧ್ಯವಾಗಲಿಲ್ಲ. ಅವರೆಲ್ಲ ನಿರಾಶರಾಗಿ ಹೊರಟುಹೋದರು. ಹೀಗೆ ಒಂದೆರಡು ದಿನಗಳು ಕಳೆದುಹೋದವು. ಅರಸನಿಗೆ ತುಂಬ ಚಿಂತೆಯಾಗತೊಡಗಿತು. ಮಾರನೆಯ ದಿನ ಸಂಜೆ ಕುರಿ ಕಾಯುವವನೊಬ್ಬ ಚಂದ್ರನಗರಕ್ಕೆ ಬಂದ. ರಾಜಕುಮಾರಿಯ ಮದುವೆಯ ಸುದ್ದಿ ತಿಳಿದು ಅವನೂ ಅರಮನೆಯತ್ತ ಹೆಜ್ಜೆ ಹಾಕಿದ. ಅವನ ಜೊತೆಯಲ್ಲಿ ಒಂದು ಕುರಿ ಹಾಗೂ ಒಂದು ನಾಯಿ ಇದ್ದವು. ಅವನು ಕುರಿ ಹಾಗೂ ನಾಯಿಯನ್ನು ರಾಜಕುಮಾರಿ ಕುಳಿತ ಮರದ ಬಳಿಯಲ್ಲಿಯೇ ಇದ್ದ ಇನ್ನೊಂದು ಚಿಕ್ಕ ಮರಕ್ಕೆ ಸ್ವಲ್ಪ ಅಂತರದಲ್ಲಿ ಕಟ್ಟಿದ, ಆಮೇಲೆ ತನ್ನ ಜೋಳಿಗೆಯಿಂದ ಸ್ವಲ್ಪ ಮಾಂಸವನ್ನು ತೆಗೆದು ಕುರಿಯ ಮುಂದೆ ಹಾಕಿದನು. ಆಮೇಲೆ ಸ್ವಲ್ಪ ಹುಲ್ಲನ್ನು ತೆಗೆದು ನಾಯಿಯ ಮುಂದೆ ಹಾಕಿದನು. ರಾಜಕುಮಾರಿ ತುಂಬ ಕುತೂಹಲದಿಂದ ಅದನ್ನು ನೋಡುತ್ತಿದ್ದಳು. ರಾಜಕುಮಾರಿಗೆ ಅವನ ಮೂರ್ಖತನವನ್ನು ಕಂಡು ನಗೆ ಬಂತು. ಅವಳು, 'ಎಲೋ ಮೂರ್ಖ, ಕುರಿ ಮಾಂಸವನ್ನು, ನಾಯಿ ಹುಲ್ಲನ್ನು ತಿನ್ನುತ್ತವೆಯೇ ಎಂದು ಕೇಳಿದಳು. ಆದರೆ, ಈ ಕುರಿ ಕಾಯುವವನು ಅವಳು ಹೇಳಿದ್ದನ್ನು ಕೇಳಿಸಿಕೊಂಡಿಲ್ಲ ಎಂಬಂತೆ ವರ್ತಿಸಿದನು. ಆಗ ರಾಜಕುಮಾರಿ ಇನಷ್ಟು ಜೋರಾಗಿ 'ಹುಲ್ಲನ್ನು ಕುರಿಯ ಎದುರಿಗೂ, ಮಾಂಸವನ್ನು ನಾಯಿಯ ಎದುರಿಗೂ ಹಾಕು' ಎಂದಳು. ಆಗಲೂ ಆ ಕುರುಬನು ಅದು ತನಗೆ ಏನು ಕೇಳಿಸಿಯೇ ಇಲ್ಲ ಎಂಬಂತೆ ವರ್ತಿಸಿದನು. ಆಗ ರಾಜಕುಮಾರಿಗೆ ತುಂಬ ಕೋಪ ಬಂತು. 'ನಿನಗೇನು ಕಿವುಡೇ? ನಾನು ಹೇಳುತ್ತಿರುವುದು ನಿನಗೆ ಕೇಳಿಸುತ್ತಿಲ್ಲವೇ? ಎಂದಳು. ಆಗಲೂ ಅವನು ಮೌನವಾಗಿಯೇ ಇದ್ದನು. ಆಗ ರಾಜಕುಮಾರಿಗೆ ತಡೆದುಕೊಳ್ಳಲಾಗಲಿಲ್ಲ. ಅವಳು ತೂಗುಮಂಚದಿಂದ ಕೆಳಗಿಳಿದು ಅವನ ಬಳಿಗೆ ಬಂದು ಅವನ ಕಿವಿಯ ಬಳಿ 'ನಾನು ಅಷ್ಟೊತ್ತಿನಿಂದ ಕಿರುಚುತ್ತಿದ್ದೇನೆ.' ನಿನಗೆ ಕೇಳಿಸುತ್ತಿಲ್ಲವೇ?' ಎಂದು ಜೋರಾಗಿ ಹೇಳಿದಳು. ಆಗ ಅವನು ಮುಗುಳ್ನಗುತ್ತ 'ಕೇಳಿಸುತ್ತಿದೆ' ಎಂದ. ರಾಜಕುಮಾರಿ ದಿಗ್ಭ್ರಾಂತಳಾಗಿ ಅವನತ್ತ ನೋಡುತ್ತಾ ನಿಂತುಕೊಂಡಳು. ತಟ್ಟನೆ ಅವಳಿಗೆ ತನ್ನ ತಪ್ಪಿನ ಅರಿವಾಯ್ತು. ಮುಟ್ಟದೆ ಕುರಿ ಕಾಯುವವನು ಅವಳನ್ನು ತೂಗುಮಂಚದಿಂದ ಕೆಳಗೆ ಇಳಿಸಿದ್ದನು. ತನ್ನ ಷರತ್ತಿನಂತೆ ರಾಜಕುಮಾರಿ ಅವನ ಕೊರಳಿಗೆ ಮಾಲೆ ಹಾಕಬೇಕಾಯಿತು.

೧ ಯುವಕ  ರಾಣಿಯನ್ನು ಮಂಚದಿಂದ ಕೆಳಗೆ ಇಳುಯುವಾಗೆ ಮಾಡುವ ತಂತ್ರವನ್ನು ಹೇಗೆ ರೂಪಿಸಿದ?

________________________________________________________________________

________________________________________________________________________

________________________________________________________________________

________________________________________________________________________

________________________________________________________________________

________________________________________________________________________

೨ ಚಂದ್ರಸೇನನು ಚಿಂತೆಗೆ ಈಡಾಗಲೂ ಕಾರಣವೇನು?

-----------------------------------------------------------------------
-----------------------------------------------------------------------
-----------------------------------------------------------------------
-----------------------------------------------------------------------

೩ ಸುಮತಿಯನ್ನು ತೂಗುಮಂಚದಿಂದ ಇತಾರರೂ ಕೆಳಗಿಳಸಲೂ ಸಾಧ್ಯವಾಗಲಿಲ್ಲ ಏಕೆ?

-----------------------------------------------------------------------
-----------------------------------------------------------------------
-----------------------------------------------------------------------
-----------------------------------------------------------------------
-----------------------------------------------------------------------

೪ ಯುವಕ "ತನ್ನ ಜೋಳಗೆಯಿಂದ ಸ್ವಲ್ಪ ಮಾಂಸವನ್ನು ತೆಗೆದು ಕುರಿಯ ಮುಂದೆ ಹಾಕಿದನು. ಆಮೇಲೆ ಸ್ವಲ್ಪ ಹುಲ್ಲನ್ನು ತೆಗೆದು ನಾಯಿಯ ಮುಂದೆ ಹಾಕಿದನು." ಈಗೆ ಆಹಾರ ಅದಲು-ಬದಲು ಹಾಗಾದ್ದಿದ್ದರೆ ಏನು ನಡೆಯುತ್ತಿತ್ತು?

-----------------------------------------------------------------------
-----------------------------------------------------------------------
-----------------------------------------------------------------------
-----------------------------------------------------------------------
-----------------------------------------------------------------------
-----------------------------------------------------------------------

❖ **ನೀಡಿರುವ ವಿಷಯವನ್ನು ಗಮನದಲ್ಲಿಟ್ಟುಕೊಂಡು ನಿನ್ನ ಆಲೋಚನೆಗಳನ್ನು ಬರೆ.**

೧ ಕಾಲುವೆಯಲ್ಲಿ ಕಾಲು ಜಾರಿ ಬಿದ್ದ ಸಂಗಮೇಶನ ರಕ್ಷಣೆಯನ್ನು ಮರಗಪ್ಪ **ಮಾಡದಿದ್ದರೆ** ನಡೆಯುತ್ತಿದ ಘಟನೆಯ ಬಗ್ಗೆ ಬರೆಯಿರಿ?

-----------------------------------------------------------------------
-----------------------------------------------------------------------
-----------------------------------------------------------------------
-----------------------------------------------------------------------
-----------------------------------------------------------------------
-----------------------------------------------------------------------
-----------------------------------------------------------------------
-----------------------------------------------------------------------
-----------------------------------------------------------------------
-----------------------------------------------------------------------
-----------------------------------------------------------------------

೨ ಈ ಭೂಮಿಯ ಮೇಲೆ **ಮಳೆಯಾಗದ್ದಿದರೇ** ಪ್ರಾಣಿ ಸಂಕುಲದ ಮೇಲೆ ನಡೆಯುವ ಪರಿಣಾಮಗಳನ್ನು ಕುರಿತು ಬರೆಯಿರಿ?

೩ ನಿಮ್ಮ ಊರಿನಲ್ಲಿ ಕುಡಿಯುವ ನೀರಿಗೆ ತೊಂದರೆಯಾದಗ ನೀವು ಮಾಡಬಹುದಾದ ಕ್ರಮಗಳನ್ನು ಬರೆಯಿರಿ?


೪ ಕೋವಿಡ್-೧೯ ನಿಂಯತ್ರಿಸಲು ತೆಗೆದುಕೊಳ್ಳಬಹುದಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಬರೆಯಿರಿ?

೪ ಕೋವಿಡ್ ನಿಂಯತ್ರಿಸಲು ಮುಂಜಾಗ್ರತಾ ಕ್ರಮವಾಗಿ ಮಾಸ್ಕ್ ಧರಿಸುವುದರಿಂದಾಗುವ ಉಪಯೋಗದ ಕುರಿತು ಬರೆಯಿರಿ?

---------------------------------------------------------------
---------------------------------------------------------------
---------------------------------------------------------------
---------------------------------------------------------------
---------------------------------------------------------------

## ಕತ್ತೆಯ ಉಪಾಯ

**ಪ್ರಕ್ರಿಯೆ**: ಈ ಕಾರ್ಯಹಾಳೆಯನ್ನು ಮಕ್ಕಳು ಓದಿ ಕಥೆಯನ್ನು ಮುಂದೆ ನಡೆದಿರಬಹುದಾದ ಘಟನೆಯುನ್ನು ಊಹಿಸಿಕೊಂಡು ಬರೆಯಬೇಕು ಈ ಪ್ರಕಿಯೆಯಲ್ಲಿ ಮಕ್ಕಳಿಗೆ ಉನ್ನತ ಹಂತದ ಆಲೋಚನೆಗಳಾದ ಊಹೆ, ತರ್ಕ, ವಿಶ್ಲೇಷಣೆ ,ವಿಮರ್ಶೆ ಈ ಅಂಶಗಳು ಮಕ್ಕಳಲ್ಲಿ ಬೆಳವಣಿಗೆಯಾಗುವಾಗೆ ಮಾರ್ಗದರ್ಶನ ಮಾಡುವುದು.



**ಈ ಕತೆಯನ್ನು ಓದಿ ಕಥೆಯನ್ನು ಮುಂದುವರಿಸಿರಿ**

ಬಟ್ಟೆ ವ್ಯಾಪಾರಿಯೊಬ್ಬ ಕತ್ತೆ ಹಾಗೂ ಕುದುರೆಯನ್ನು ಸಾಕಿಕೊಂಡಿದ್ದ. ಕತ್ತೆಗೆ ಭಾರವಾದ ಬಟ್ಟೆ ಮೂಟೆಗಳನ್ನು ಹೊರಿಸಿ ಕುದುರೆ ಮೇಲೆ ಕುಳಿತು ಪ್ರಯಾಣ ಆರಂಭಿಸಿದ. ಮಾರ್ಗ ಮಧ್ಯೆ ದಣಿವಾರಿಸಿಕೊಳ್ಳಲು ಮರದಡಿ ವಿರಮಿಸಿದ. ಆಗ ಕುದುರೆ ಮೆಲ್ಲನೆ ಕತ್ತೆಯ ಹತ್ತಿರ ಹೋಗಿ "ಎಂಥಾ ಜನ್ಮವಪ್ಪಾ ನಿಂದೂ? ಜೀವನ ಪೂರ್ತಿ ಭಾರವಾದ ವಸ್ತುಗಳನ್ನು ಹೊತ್ತುಕೊಂಡು ಸಾಗೋದೇ ನಿನ್ನ ಹಣೆ ಬರಹವಾಯ್ತು ಅಲ್ವಾ! ಇಂತಹ ದುರ್ಗತಿ ಯಾರಿಗೂ ಬೇಡಪ್ಪಾ. ಮುಂದಿನ ಜನ್ಮ ಅಂತ ಇದ್ರೆ ಕತ್ತೆಯಾಗಿ ಮಾತ್ರ ಹುಟ್ಟಲಾರೆ." ಎಂದು ಪರಿಹಾಸ್ಯ ಮಾಡಿ ನಕ್ಕಿತು. ಈ ಮಾತು ಕೇಳಿ ಕತ್ತೆಗೆ ತುಂಬಾ ಅವಮಾನವಾಯಿತು. ಸೊಕ್ಕಿನ ಕುದುರೆಗೆ ಬುದ್ಧಿ ಕಲಿಸುವ ಹುನ್ನಾರ ಮಾಡಿತು. ಕೆಲ ಹೊತ್ತಿನ ನಂತರ ವ್ಯಾಪಾರಿ ಪ್ರಯಾಣ ಮುಂದುವರಿಸಲು ಸರಕನ್ನು ಕತ್ತೆಯ ಮೇಲೆ ಏರಿಸಿದಾಗ

ಕತ್ತೆ ಅದನ್ನು ಬೀಳಿಸಿ ತಾನೂ ನೆಲಕ್ಕೆ ಬಿದ್ದು ಒದ್ದಾಡತೊಡಗಿತು. ಇದರಿಂದ ವ್ಯಾಪಾರಿಗೆ ತುಂಬಾ ದಿಗಿಲಾಯಿತು.“ಅಯ್ಯೋ ಪಾಪ! ಕತ್ತೆಯ ಆರೋಗ್ಯ ಸರಿಯಿಲ್ಲವೆಂದು ತೋರುತ್ತದೆ”

____________________ ಕತೆ ಮತ್ತು ಕುದರೆ ಎರಡು ಗೌರವದಿಂದ ಬದುಕಿದವು.

(ಮುಂದೆ ನಡೆದಿರಬಹುದಾದ ಘಟನೆಯುನ್ನು ಬರೆಯಿರಿ)

## ಆಸೆಯೇ ಅಧಃಪತನಕ್ಕೆ ಕಾರಣ

ಪ್ರಕ್ರಿಯೆ: ಈ ಕಾರ್ಯಹಾಳೆಯಲ್ಲಿ ಕೆಲವು ಮುಖ್ಯವಿಷಯಗಳನ್ನು ಮಕ್ಕಳು ಖಾಲಿಬಿಟ್ಟ ಸ್ಥಳದಲ್ಲಿ ತಮ್ಮ ಅನುಭವದ ಆಧಾರದ ಮೇಲೆ ಬರೆಯುವಾಗೆ ಮಾಡಬೇಕು ಅವರು ಕಥೆಯನ್ನು ಓದುವಾಗ ಅದರಲ್ಲಿ ಬಳಸಬಹುದಾದ ನಾಮಪದಗಳು ಕ್ರಿಯಪದಗಳು ತಾರ್ಕಿಕವಾಗಿ ಯೋಚಿಸಿ ಬರೆಯಬೇಕಾಗುತ್ತದೆ ಆದರಿಂದ ಸುಗಮಕಾರರು ಅವರಿಗೆ ಮಾರ್ಗದರ್ಶನ ಮಾಡಬೇಕು.



ಮೋಕ್ಷಪುರ ಎಂಬ ಊರಲ್ಲಿ ರಾಮಯ್ಯಶೆಟ್ಟಿ ಎಂಬ ದುರಾಸೆಯ ವ್ಯಕ್ತಿ ಕಿರಾಣಿ ______________ ಮಾಡುತ್ತಿದ್ದನು. ತಾನು ಮಾಡುವ ಸರಕಿನ ಮೇಲೆ ವಿಪರೀತವಾಗಿ ________________ ಆಶಿಸುತ್ತಾ. ತನಗೆ ಮಾರುವವರಿಗೆ______ಮಾಡಿ ಆನಂದಿಸುವ ಮನಸ್ಸು ಆತನದು. ರಾಮಯ್ಯ ಪಟ್ಟಣದಿಂದ ______________ತರುವಾಗ ದಾರಿ ಮಧ್ಯದಲ್ಲಿರುವ ಒಂದು ನದಿಯನ್ನು ತೆಪ್ಪದ ಮೂಲಕ ದಾಟಬೇಕಾಗಿತ್ತು. ತೆಪ್ಪದಲ್ಲಿ ಒಬ್ಬ ಮನುಷ್ಯ ಏರಿದಾಗ ತನ್ನೊಂದಿಗೆ ಒಂದು ಮೂಟೆಯನ್ನು ತೆಗೆದುಕೊಂಡು ಹೋದರೆ ಅದಕ್ಕೆ ಪ್ರತ್ಯೇಕ್ಷ _________ ಸಲ್ಲಿಸುವ ಅವಶ್ಯಕತೆ ಇಲ್ಲ. ಈ ಪದ್ಧತಿ ಬಂಡವಾಳ ಮಾಡಿಕೊಂಡು ರಾಮಯ್ಯಶೆಟ್ಟಿ ಅದರಲ್ಲೆಲ್ಲಾ ಕಿರಾಣಿ ಮೂಟೆಗಳನ್ನು ತುಂಬುತ್ತಿದ್ದನು. ತಾನು ಮಾತ್ರ ತಕ್ಕ ರೂಸುಮು ಸಲ್ಲಿಸಿ, ____________ ಯಾವ ವಿಧವಾಗಿ ರೂಸುಮು ಇಲ್ಲದೆ ನದಿ ದಾಟಿಸುತ್ತಿದ್ದ. ತೆಪ್ಪವನ್ನು ನಡೆಸುವ ಮಲ್ಲಯ್ಯ ಎಂಬುವವ ಬಹಳ ಒಳ್ಳೆಯವನು. ಅಲ್ಲದೆ ಅಮಾಯಕ. ರಾಮಯ್ಯಶೆಟ್ಟಿ ತೆಪ್ಪದಲ್ಲಿ ಇತರರಿಗೆ ಸ್ಥಳ ಇಲ್ಲದಂತೆ ಮಾಡುವುದರಿಂದ, ತನಗೆ ___________ಸಂಭವಿಸುತ್ತಿದ್ದರೂ ಏನೂ ಹೇಳದ ಸಭ್ಯವಂತನು. ಇದರಿಂದ ರಾಮಯ್ಯಶೆಟ್ಟಿ ದುರಾಸೆ ಮತ್ತಷ್ಟು ಹೆಚ್ಚಾಯಿತು.

ಹೀಗಿರಲು ಒಂದು ದಿನ ರಾಮಯ್ಯಶೆಟ್ಟಿ ತೆಪ್ಪದಲ್ಲಿ ಅಗತ್ಯಕ್ಕಿಂತಲೂ _____________ ಸರಕುಗಳನ್ನು ತುಂಬಿಸಿದನು. ಇದನು ನೋಡಿದ ಮಲ್ಲಯ್ಯ ಏನಾದರೂ ಪ್ರಮಾದ ಜರುಗಬಹುದೆಂಬ ___________________ ಆಗ ಮಲ್ಲಯ್ಯ ರಾಮಯ್ಯಶೆಟ್ಟಿಗೆ "ಇದರಲ್ಲಿನ ಅರ್ಧ ಸರಕುಗಳನ್ನು ತುಂಬಿಸಿದನು. ಇದನ್ನು ನೋಡಿದ ಮಲ್ಲಯ್ಯ ಏನಾದರೂ ಪ್ರಮಾದ ಜರುಗಬಹುದೆಂಬ ಭಯಪಟ್ಟನು. ಆಗ ಮಲ್ಲಯ್ಯ ರಾಮಯ್ಯಶೆಟ್ಟಿಗೆ "ಇದರಲ್ಲಿನ ಅರ್ಧ ಸರಕುಗಳನ್ನು ಕೆಳಗಿಳಿಸಿ, ಮತ್ತರ್ಧ ಸರಕನ್ನು ಮತ್ತೊಮ್ಮೆ ಬಂದು ಕೊಂಡುಹೋಗೋಣ, ದಯಮಾಡಿ ನನ್ನ ಮಾತನ್ನು ಕೇಳಿರಿ" ಎಂದನು.

ಪಿಸುಣಾರಿಗೆ ಖರ್ಚು ಕಡಿಮೆ ಮಾಡುವ ವಿಧಾನವೇ ದೃಷ್ಟಿಯಲ್ಲಿರುವುದರಿಂದ ________________ ರುಚಿಸುವುದಿಲ್ಲ. ಮೂರ್ಖತ್ವವೆಂಬ ಅಂಧಕಾರ ಉಂಟಾದಾಗ ಪ್ರಮಾದದ ಬಗ್ಗೆ ಯೋಚಿಸುವುದಿಲ್ಲ. ಒಮ್ಮೆ ಮನುಷ್ಯನನ್ನು ತೆಪ್ಪದ ಮೂಲಕ ನದಿಯನ್ನು ದಾಟಿಸಲು ಒಂದು ಕಾಸು ಆಚೆ ದಡದಲ್ಲಿ ಬಿಟ್ಟು ಬಂದ ಅರ್ಧ ಸರಕನ್ನು ತರಲು ಮತ್ತೊಂದು ಕಾಸು, ಅಲ್ಲಿಂದ ತಿರುಗಿಬರಲು ಮತ್ತೊಂದು ಕಾಸು, ಹೀಗಾದರೆ ______________ಖರ್ಚಾಗುತ್ತದೆ. ಒಮ್ಮೆ ಮಾತ್ರ ಹೋಗಿ ಬಂದರೆ ಅದರಿಂದ ಉಳಿಯುವುದು ಎರಡು ಕಾಸು. ಹೀಗೆ ಶೆಟ್ಟಿಯು ದುರಾಸೆಯಿಂದ ಮಲ್ಲಯ್ಯನ ಎಚ್ಚರಿಕೆಯನ್ನು ಲೆಕ್ಕಿಸಲಿಲ್ಲ.

ತೆಪ್ಪ ಅರ್ಧ ದೂರ ಸಾಗುತ್ತಿರಲು ಊಹಿಸಿದಂತೆ ನದಿಯಲ್ಲಿ _____________ಉಕ್ಕಿ ಹರಿಯಿತು. ಅದರಿಂದ ತೆಪ್ಪ ಚೂರು ಚೂರಾಗಿ ಅದರಲ್ಲಿನ ಕಿರಾಣಿ ಮೂಟೆಗಳು ನದಿಯಲ್ಲಿ ಕೊಚ್ಚಿಹೋದವು. ನೀರಿನಲ್ಲಿ ಬಿದ್ದು ಈಜು ಬಾರದ ರಾಮಯ್ಯ ನೀರು ಕುಡಿದು ಮೃತ್ಯುವಿಗೆ ಹತ್ತಿರವಾದನು. ಮಲ್ಲಯ್ಯನು ಶೆಟ್ಟಿಯ ದುಃಸ್ಥಿತಿಯನ್ನು ಭುಜದ ಮೇಲೆ ಹೊತ್ತುಕೊಂಡು ಅತಿ ಕಷ್ಟದಿಂದ ಈಜುತ್ತಾ ದಡ ಸೇರಿಕೊಂಡನು. ಇಬ್ಬರ ಪ್ರಾಣ ಉಳಿಯಿತು.

ಎರಡು ಕಾಸುಗಳಿಗೋಸ್ಕರ ಸಾವಿರಾರು ಕಾಸು ಬೆಲೆ ಬಾಳುವ ಸರಕು ನೀರಲ್ಲಿ ಮುಳುಗಿ ನಷ್ಟವಾಯಿತು. ಜೊತೆಗೆ ಮೂರು ನೂರು ಕಾಸು _____________ ಮಲ್ಲಯ್ಯನಿಗೆ ನೀಡಬೇಕಾಯಿತು. ಇದರಿಂದ ರಾಮಯ್ಯನಿಗೆ ಆದ ಭಯ ಅಷ್ಟಿಷ್ಟಲ್ಲ. ಮಲ್ಲಯ್ಯಗೆ ತನ್ನ ಹಳೇ ತೆಪ್ಪದ ಸ್ಥಾನದಲ್ಲಿ ಹೊಸ ತೆಪ್ಪ ದಕ್ಕಿತ್ತು. ಅದರ ಜೊತೆ ________________ಕೂಡ ಲಭಿಸಿತು.